| | | |
|---|---|---|
| 22. | ಇಬ್ರಾಹಿಂ | 5254.00 |
| 23. | ಅಜಯ | 1131.00 |
| 24. | ಎಂ. ಮೊಹಮ್ಮದ್ | 175104.00 |
| 25. | ನಾಗೇಶ್ | 1591.00 |
| 26. | ಹರೀಶ್ | - |
| | | 1963979.20 |
| | ಸಾಮಾನ್ಯ ಖಾತೆಯ ಪ್ರಕಾರ | 1964130.85 |
| | ವ್ಯತ್ಯಾಸ | 121.65 |

ಅಧ್ಯಕ್ಷರು : ಉತ್ತರಗಳನ್ನು ಮಂಡಿಸಲಾಯಿತು.

## ನಿಲುವಳಿ ಸೂಚನೆ

### ವಾಸುದೇವನ್ ಪ್ರಕರಣದ ಬಗ್ಗೆ

ಅಧ್ಯಕ್ಷರು : ನಮಗೆ ಮೂರು ಅರ್ಜಿಗಳು ಬಂದಿವೆ. ನನಗೆ ನಮ್ಮ ಸ್ನೇಹಿತರಾದ ಕಾಂಗ್ರೆಸ್ ಪಕ್ಷದ ಮುಖಂಡರಾದ ಶ್ರೀಮಾನ್ ಖರ್ಗೆಯವರು ಒಂದು ಕೊಟಿಟ್ಟಿದ್ದಾರೆ. ಮತ್ತು ಅವರ ಪಕ್ಷದ ಅನೇಕ ಸ್ನೇಹಿತರುಗಳು ಸಹಿ ಹಾಕಿದ್ದಾರೆ. ಮತ್ತೊಂದು ಹಿರಿಯ ಸದಸ್ಯರಾದ ವಾಟಾಳ್ ನಾಗರಾಜುರವರು ಅವರ ಕೆಲವು ಮಿತ್ರರು ಸಹಿ ಮಾಡಿ ಕೊಟ್ಟಿದ್ದಾರೆ. ಮತ್ತು ತಮ್ಮ ಪಕ್ಷದ ಕೆಲವು ಸ್ನೇಹಿತರುಗಳು ಸಹಿ ಮಾಡಿ ಕೊಟ್ಟಿದ್ದೀರಿ. ಎಲ್ಲರೂ ಒಂದೇ ವಿಷಯದ ಮೇಲೆ ಕಳುಹಿಸಿಕೊಟ್ಟಿದ್ದಾರೆ. ಎಲ್ಲರಿಗೂ ಒಟ್ಟಿಗೆ ಅವಕಾಶ ಕೊಡುತ್ತೇನೆ. ಪ್ರಸ್ತಾಪಮಾಡುವುದಕ್ಕೆ ಮೊದಲು ಖರ್ಗೆಯವರು ಕೊಟ್ಟಿದ್ದಾರೆ. ಈಗ ಖರ್ಗೆಯವರೆ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಕಚೇರಿಗೆ ಒಂದು ಗಂಟೆ ಮುಂಚಿತವಾಗಿ ಈ ತರಹ ನಿಲುವಳಿ ಸೂಚನೆ ಕೊಡುವುದಿದ್ದರೆ ಕೊಡಬಹುದು ಎಂದು ಹೇಳಿ ನಾನು ಆಗಲೇ ಕೊಟ್ಟಿದ್ದೇನೆ. ಇವತ್ತು ಮರ್ಸಿ ಪಿಟಿಷನ್ ಅನ್ನು ಹಾಕಿಕೊಂಡು ಏನು ಮುಖ್ಯಮಂತ್ರಿಗಳು ಸುಪ್ರೀಂಕೋರ್ಟಿನಲ್ಲಿ ಒಳಗಡೆ ಕೂತಿದ್ದಾರೆ ಮತ್ತು 10.30 ಗಂಟೆಗೆ ಅಲ್ಲಿ ತೆಗೆದುಕೊಳ್ಳುತ್ತಾರೆಂಬ ಹೇಳಿ ಸುದ್ಧಿ ಬಂದಿದೆ. ವಿಶೇಷವಾದ ಸಂದರ್ಭದಲ್ಲಿ ಬಹುಶಃ ಸರ್ಕಾರದಲ್ಲಿ ಬಹುಶಃ ಏನಾದರೂ ಮಾಹಿತಿಗಳು ಇರಬಹುದು, ಇದನ್ನು ಹೇಳುವುದಕ್ಕೆ ಸಿದ್ಧ ಇದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದು ವಿಶೇಷ ಸಂದರ್ಭವಾದ್ದರಿಂದ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಡಬಹುದು ಎಂಬುದು ನನ್ನ ಆಸೆ. ಅದ್ದರಿಂದ ನಮ್ಮ ಕಡೆಯಿಂದ ಮಾತನಾಡುವುದಕ್ಕೆ ಸುರೇಶ್ ಅವರು ಇದ್ದಾರೆ. ಅವರು ಮಾತನಾಡುತ್ತಾರೆ.

ಅಧ್ಯಕ್ಷರು : ಪ್ರಿಲಿಮಿನರಿ ಸಬಮಿಷನಗೆ principle demand that I should allow Mr. Kharge ಮೊದಲ ನೋಟೀಸ್ ಅವರದ್ದು ಬಂದಿದೆ. ನನ್ನ ಕಛೇರಿಗೆ. ಅದಕ್ಕೆ ಅವರದ್ದು ಆದಮೇಲೆ ನಿಮ್ಮ ಕಡೆಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. 11.30ಕ್ಕೆ ರಾಜ್ಯಪಾಲರ ಹತ್ತಿರ ಹೋಗುತ್ತೇನೆ ಎನ್ನುವ ಒಂದು ಚೀಟಿ ಬಂದಿದೆಯಲ್ಲಾ.

ಶ್ರೀ ಬಿ.ಎಸ್. ಯಡಿಯೂರಪ್ಪ ; ಹೌದು, ಈಗ ಹೋಗುತ್ತೇವೆ. 4-5 ಜನ ಇಲ್ಲಿ ಇರುತ್ತಾರೆ. ಸುರೇಶ್ ಅವರು ಇಲ್ಲಿ ಇರುತ್ತಾರೆ.

ಅಧ್ಯಕ್ಷರು : ಸುರೇಶ್, ತಮ್ಮನ್ನು ಕರೆಯುತ್ತೇನೆ. ಮೊದಲು ಖರ್ಗೆಯವರು ಪ್ರಸ್ತಾಪ ಮಾಡುತ್ತಾರೆ. ಆಮೇಲೆ ನಿಮಗೆ ಅವಕಾಶ ಕೊಡುತ್ತೇನೆ. I will hear all of you. ಯಾರು ಯಾರು ಸಹಿ ಮಾಡಿ ಕಳುಹಿಸಿದ್ದೀರಿ I am not in a hurry. ಎಲ್ಲರಿಗೂ ಅವಕಾಶ ಮಾಡಿಕೊಡುತ್ತೇನೆ. I will use my discretion.

ಶ್ರೀ ಸಿ. ಬೈರೇಗೌಡ : ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಯಡಿಯೂರಪ್ಪನವರು ಹೇಳಿದ ಹಾಗೆ ಮುಖ್ಯಮಂತ್ರಿಗಳು ಹೋಗಿ ಸುಪ್ರೀಂ ಕೋರ್ಟಿನಲ್ಲಿ ಕುಳಿತಿದ್ದಾರೆ, ಎನ್ನುವಂಥ ಮಾತನ್ನು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹೌದು. ಅವರು ಹೋಗಿ ಕುಳಿತಿದ್ದಾರೆ. ಮತ್ತು ಮರ್ಸಿ ಪಿಟಿಷನ್ ಹಾಕಿದ್ದಾರೆ ಎಂದು ಹೇಳಿದ್ದೇನೆ.

ಶ್ರೀ ಸಿ. ಬೈರೇಗೌಡ : ಹಾಗಾದರೆ ಅವರ ಪ್ರಕಾರ ಆ ವಿಷಯ ಸುಪ್ರೀಂಕೋರ್ಟಿನ ಮುಂದೆ ಇದೆ. ಆ ವಿಚಾರದಲ್ಲಿ ಏನು ಚರ್ಚೆ ಮಾಡತಕ್ಕಂಥದ್ದು, ಇಲ್ಲಿ ಚರ್ಚೆ ಮಾಡಿದರೆ ಅದು ಎಷ್ಟರಮಟ್ಟಿಗೆ ಸಾಧುವಾದಂಥ ಚರ್ಚೆಯಾಗುತ್ತದೆ. ಇಲ್ಲಿ ಚರ್ಚೆ ಮಾಡುವುದಕ್ಕೆ ಏನು ಉಳಿದಿದೆ ಏನ್ನತಕ್ಕಂಥದ್ದು ನನಗೂ ಮತ್ತು ನನ್ನ ಸರ್ಕಾರಕ್ಕಂತೂ ಅರ್ಥ ಆಗುತ್ತಿಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡತಕ್ಕಂಥದ್ದು ಏನೆಂದರೆ 10.30ಕ್ಕೆ ಅವರ ಪ್ರಕಾರವೇ ಅಲ್ಲಿ ತೆಗೆದುಕೊಳ್ಳುತ್ತಾರೆಂದರೆ ವಿಚಾರದಲ್ಲಿ ಏನು ಚರ್ಚೆ ಮಾಡತಕ್ಕಂಥದ್ದು ಇದೆ? ಯಾವ ರೀತಿ ಚರ್ಚೆ ಮಾಡುತ್ತಾರೆ? ಮತ್ತು ಸುಪ್ರೀಂಕೋರ್ಟಿನಲ್ಲಿ ಇರತಕ್ಕಂಥ ವಿಷಯಕ್ಕೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲ. ತಮ್ಮಲ್ಲಿ ಕೇಳಿಕೊಳ್ಳುವುದು ಏನೆಂದರೆ ಈ ವಿಷಯದ ಮೇಲೆ ಚರ್ಚೆಗೆ ಅವಕಾಶ ಮಾಡಿಕೊಡಬಾರದು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ, ಸುಪ್ರೀಂಕೋರ್ಟಿನಲ್ಲಿ ಇರತಕ್ಕಂಥದಕ್ಕೆ ನಾವು ಪ್ರಸ್ತಾಪ ಮಾಡುವುದಿಲ್ಲ. ಮರ್ಸಿ ಪಿಟಿಷನ್ ಇವತ್ತು ಹಾಕುತ್ತಾರೆಂಬುದು ನಮಗೆ ಯಾರಿಗೂ ಗೊತ್ತಿರಲಿಲ್ಲ. ಮರ್ಸಿ ಪಿಟಿಷನನ್ನು ಹಾಕುವ ಹಾಗಿದ್ದರೆ ರಾಷ್ಟ್ರಪತಿಗಳನ್ನು ನೋಡುವುದಕ್ಕೆ ಮುಂಚೆನೇ, ಪ್ರಧಾನ ಮಂತ್ರಿಗಳನ್ನು ನೋಡುವುದಕ್ಕೆ ಮುಂಚೆನೇ ಇವರು ಹಾಕಬೇಕಾಗಿತ್ತು. ಅಂದರೆ ಒಬ್ಬ ಮುಖ್ಯಮಂತ್ರಿಗಳೇ ಮರ್ಸಿ ಪಿಟಿಷನ್ ಹಾಕುವಂಥ ಸಂದರ್ಭ ಬಂದಾಗ ಸುಪ್ರೀಂಕೋರ್ಟಿನ

ನ್ಯಾಯಾಧೀಶರನ್ನು ನೋಡುವಂಥದ್ದು ಎಷ್ಟರಮಟ್ಟಿಗೆ ಸರಿ ಇದೂ ಸಹ ನಾವು ತಲೆತಗ್ಗಿಸುವಂಥ ಸಂಗತಿ. ಇದೂ ಒಂದು ಅಕ್ಷಮ್ಯ ಅಪರಾಧ. ಆದ್ದರಿಂದ ಇವರಿಗೆ ಅಧಿಕಾರದಲ್ಲಿರಲು ನೈತಿನ ಹಕ್ಕಿಲ್ಲ.

(ಗೊಂದಲ)

ಅಧ್ಯಕ್ಷರು : ಆಮೇಲೆ ಚರ್ಚೆ ಮಾಡೋಣ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವತಂತ್ರರಾವ್‌ಗೆ ಏನು ಆಯಿತು? ಈ ಸುಪ್ರೀಂಕೋರ್ಟ ನ್ಯಾಯಾಧೀಶರನ್ನು ಭೇಟಿ ಮಾಡಿದ್ದರಿಂದ ಅವರಿಗೆ ಛೀಮಾರಿ ಆಯಿತು. ಇವತ್ತು ಮುಖ್ಯಮಂತ್ರಿಗಳು ಅದೇ ಅಪರಾಧವನ್ನು ಮಾಡಿದ್ದಾರೆ. ಇದು ಎಷ್ಟರ ಮಟ್ಟಿಗೆ ಸರಿ?

ಅಧ್ಯಕ್ಷರು : ಈ ಎಲ್ಲಾ ವಿಚಾರವನ್ನು ನಿಮ್ಮ ಸರದಿ ಬಂದಾಗ ನೀವು ಹೇಳಿ. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು......

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಅನುಮತಿಯನ್ನು ಪಡೆದು ಈ ಸರ್ಕಾರವನ್ನು ವಜಾ ಮಾಡಬೇಕೆಂದು ಹೇಳಿ ವಿನಂತಿ ಮಾಡುವುದಕ್ಕೋಸ್ಕರ ನಾವು ರಾಜ್ಯಪಾಲರ ಹತ್ತಿರ ಹೋಗುತ್ತಿದ್ದೇವೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನೀವು ರಾಜ್ಯಪಾಲರ ಹತ್ತಿರ ಆದರೂ ಹೋಗಿ, ಎಲ್ಲಾದರೂ ಹೋಗಿ, ನಾವು ಬೇಡ ಎಂದು ಹೇಳುವುದಿಲ್ಲ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಯಾರ‍್ಯಾರು ನಿಲುವಳಿ ಸೂಚನೆ ಕೊಟ್ಟಿದ್ದಾರೆ ಅವರಿಗೆ ಮಾತನಾಡುವುದಕ್ಕೆ ಸ್ವಲ್ಪ ಅವಕಾಶ ಕೊಡಿ.

11.30 ಪಿ.ಎಂ

ಅಧ್ಯಕ್ಷರು : ನಾನು ಹೇಳುತ್ತೇನೆ. ಎಲ್ಲರೂ ಎದ್ದುನಿಂತು ಒಮ್ಮೆಗೆ ಮಾತನಾಡಲಿಕ್ಕೆ ಪ್ರಾರಂಭ ಮಾಡಿದರೆ ನಾನು ಏನು ಮಾಡಲಿ? ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ನನ್ನ ಅನುಮತಿಯನ್ನು ಪಡೆದುಕೊಂಡು ರಾಜ್ಯಪಾಲರನ್ನು ಭೇಟಿಯಾಗಲು ಹೋಗುತ್ತಿದ್ದೇವ ಎಂದು. ಅದು ರೆಕಾರ್ಡಿಗೆ ಹೋಗಿದೆ. ನೀವು ರಾಜ್ಯಪಾಲರಲ್ಲಿಗಾದರೂ ಹೋಗಿ, ರಾಷ್ಟ್ರಪತಿಗಳ ಹತ್ತಿರಕ್ಕಾದರೂ ಹೋಗಿ ನನ್ನ ಆಕ್ಷೇಪ ಇಲ್ಲ. ನಾನು ಅದಕ್ಕೆಲ್ಲಾ ಅನುಮತಿ ಕೊಟ್ಟಿಲ್ಲ. ಆ ರೀತಿಯ ಅಭಿಪ್ರಾಯ ದಾಖಲೆಗಳಿಗೆ ಹೋಗುವುದು ಬೇಡ.

(ಗೊಂದಲ)

ಅಧ್ಯಕ್ಷರು : ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಪ್ರಿಲಿಮಿನರಿ ಸಬಮಿಷನ್ ಮಾಡಲಿಕ್ಕೆ ಅನುಮತಿಯನ್ನು ಕೊಟ್ಟಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮಗೆ ಕರ್ತವ್ಯ ನಮ್ಮ ಕರ್ತವ್ಯ.

Mr. SPEAKER : Thank you.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ತಾವು ರೂಲ್ 60ರಲ್ಲಿ

(ಗೊಂದಲ)

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ತಾವು ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ನನಗೆ ಅನುಮತಿಯನ್ನು ಕೊಟ್ಟಿದ್ದಕ್ಕಾಗಿ ತಮಗೆ ನಾನು ಅಭಿನಂದಿಸುತ್ತೇನೆ. ಈ ವಿಷಯ ಬಹಳ ಗಂಭೀರವಾಗಿದೆ. ಮತ್ತು ನಾವೆಲ್ಲರೂ ಕೂಡ ಇದರ ಬಗ್ಗೆ ಚಿಂತನೆ ಮಾಡತಕ್ಕಂತಹ ಅವಶ್ಯಕತೆ ಕೂಡ ಇದೆ. ಒಂದು ಕಡೆ ಇವತ್ತು ನಾವು ರೂಲ್ 60ರಲ್ಲಿ ಏನು ಶ್ರೀ ವಾಸುದೇವನರವರು

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ಬಿ.ಜೆ.ಪಿ.ಯಲ್ಲಿ ಡಿವೈಡ್ ಆದ ಹಾಗೆ ಕಾಣುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ವಲ್ಪ ಇರಿ. ಬೇರೆಯವರು ಮಾಡಿದರೆ ನಿಮಗೇನು? ಅವರ ಕೆಲಸ ನೀವೇನೂ ಮಾಡಬೇಕಾಗಿಲ್ಲ.

ಶ್ರೀ ಬಿ.ಬಿ. ಶಿವಪ್ಪ : ಸನ್ಮಾನ್ಯ ಅಧ್ಯಕ್ಷರೆ, ಶ್ರೀ ಶಿವರಾಮೇಗೌಡರು ಏನೋ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಬಿ.ಜೆ.ಪಿ.ಯಲ್ಲಿ ಡಿವೈಡ್ ಆಗಿಲ್ಲ. ಅವರು ರಾಜೀನಾಮೆ ಕೊಟ್ಟ ತಕ್ಷಣ ನಾವು ಅಲ್ಲಿಗೆ ಹೋಗಬೇಕು ಎಂದು ಇಲ್ಲಿ ಕುಳಿತಿದ್ದೇವೆ.

(ಗೊಂದಲ)

ಅಧ್ಯಕ್ಷರು : ಶಿವಪ್ಪನವರು ಆಲೋಚನೆ ಚೆನ್ನಾಗಿದೆ. ಬೇರೆ ಬದಲಾಯಿಸಬೇಕು. ನಿಮಗೆ ಇದು ಸರಿ ಹೊಂದಿರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವತ್ತು ಒಬ್ಬ ಉನ್ನತ ಐ.ಎ.ಎಸ್ ಅಧಿಕಾರಿ ವಾಸುದೇವನ್ ರವರಿಗೆ ಒಂದು ತಿಂಗಳ ಶಿಕ್ಷೆ ಆಗಿದೆ. ಇವತ್ತು ಸುಪ್ರೀಂ ಕೋರ್ಟಿನ ಜಡ್ಜಮೆಂಟ್ ಮೇಲೆ ನಾವೇನೂ ಮಾಡುತ್ತಿಲ್ಲ ಅಥವಾ ಪ್ರಸ್ತಾವ ಮಾಡುತ್ತಿರತಕ್ಕಂತಹದ್ದು ಅಥವಾ.....

ಶ್ರೀ ಜೆ.ಹೆಚ್. ಪಟೇಲ್ : ನಿನ್ನೆ ನಾನು ಹೇಳಿದ್ದೆ, ಮಾನ್ಯ ಖರ್ಗೆಯವರು ಈ ವಿಷಯ ಪ್ರಸ್ತಾಪ ಮಾಡಿದಾಗ. ಈ ವಿಷಯ ಚರ್ಚೆ ಮಾಡುವುದಕ್ಕೆ ನಮ್ಮ ಯಾವುದೇ ಅಭ್ಯಂತರ ಇಲ್ಲ. ಆದರೆ ಈ ವಿಷಯದ ಬಗ್ಗೆ ಇನ್ನೂ ಇವತ್ತು ಸುಪ್ರೀಂ ಕೋರ್ಟಿನಲ್ಲಿ ಕೇಸು ನಡೆಯುತ್ತಿದೆ. ಅದು ಮರ್ಸಿ ಪಿಟಿಷನ್

ಬಹುಶಃ ಅವರಿಗೆ ಗೊತ್ತಿಲ್ಲದೆ ಹೇಳಿದರು ಎಂದು ಕಾಣುತ್ತದೆ. ಮರ್ಸಿ ಪಿಟಿಷನ್ ಪ್ರೆಸಿಡೆಂಟರವರಿಗೂ ಕೊಡಬಹುದು, ಕೋರ್ಟಿಗೂ ಕೊಡಬಹುದು. ಅದಲ್ಲ. ಆದರೆ ಇವತ್ತು the same matter is being discussed before the Supreme Court. ಅದಕ್ಕೆ ಉತ್ತರ ಕೊಡುವಾಗ, ತಾವು ಚರ್ಚೆ ಮಾಡಿದಿರಿ ಎಂದು ಇಟ್ಟುಕೊಳ್ಳಿ. ಅಲ್ಲಿ ಏನು ನಡೆಯಿತು? ಏನಾಯಿತು? ಆ ವಿಷಯಗಳೆಲ್ಲಾ ಗೊತ್ತಿರತಕ್ಕ ಮುಖ್ಯಮಂತ್ರಿಗಳು ದೆಹಲಿಯಲ್ಲಿದ್ದಾರೆ. ಅವರು ಬಂದ ಮೇಲೆ ಚರ್ಚೆ ಮಾಡುವುದರ ಬಗ್ಗೆ ನಮ್ಮದು ಯಾರದ್ದೂ ಅಭ್ಯಂತರ ಇಲ್ಲ. ಆದರೆ ಇದು ಸುಮ್ಮನೆ ಪ್ರಸ್ತಾಪ ಮಾಡಿದ ಹಾಗೆ ಆಗುತ್ತದೆ. ಯಾವುದೇ ವಿಚಾರ ಪರಿಪೂರ್ಣವಾಗುವುದಿಲ್ಲ. ಏನೂ ಅದಕ್ಕೆ ಉತ್ತರನೇ ಸಿಕ್ಕುವುದಿಲ್ಲ. ಆದ್ದರಿಂದ ತಾವು ಸಮಯ ನಿಗದಿ ಮಾಡಿ. ಮಾನ್ಯ ಖರ್ಗೆಯವರೇ ಪ್ರಾರಂಭ ಮಾಡಲಿ, ನಮ್ಮ ಅಭ್ಯಂತರ ಏನೂ ಇಲ್ಲ. ಆ ವಿಷಯದ ಬಗ್ಗೆ ಚರ್ಚೆಯನ್ನು ಮುಖ್ಯಮಂತ್ರಿಗಳು ಬಂದ ಮೇಲೆ ಪ್ರಾರಂಭ ಆದರೆ ಆ ವಿಷಯಕ್ಕೆ ಪ್ರಾಮುಖ್ಯತೆ ಇರುತ್ತದೆ. ಇದು ನನ್ನ ಸಬಮಿಷನ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಚರ್ಚೆ ಮಾಡಬೇಕು ಅನ್ನತಕ್ಕಂತಹದ್ದು ಅವರ ವಾದ. ಇರಲಿ. ತಾವು ಈಗಾಗಲೇ ಸದನವನ್ನು ನಡೆಸುತ್ತಿದ್ದೇವೆ. ಸುಮಾರು 5-6 ದಿವಸಗಳಿಂದ ಅವರು ಅಬ್ಸೆಂಟ್ ಇದ್ದರೂ ಕೂಡ, ಅವರ ಅಬ್ಸೆನ್ಸ್‌ನಲ್ಲೇ ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೇವೆ. ಈ ವಿಷಯ ಇವತ್ತು ಇರತಕ್ಕಂಥದ್ದು, ನಾನು ಸುಪ್ರೀಂ ಕೋರ್ಟಿನ ಜಡ್ಜಮೆಂಟ್ ಮೇಲೆ ಕಾಮೆಂಟ್ ಮಾಡುತ್ತಾ ಇಲ್ಲ. ಇದು ಮೊದಲನೆಯದು. 2ನೆಯದು mercy petition cannot be a merit petition. ಅದರಲ್ಲಿ ಏನೂ ಈಗ ಲೀಗಲ್ ಪಾಯಿಂಟ್ ಇನ್ವಾಲ್ವ ಇಲ್ಲ. ಜಡ್ಜಮೆಂಟ್ ಕೊಟ್ಟ ಮೇಲೆ ಶಿಕ್ಷೆ ಕೊಟ್ಟಮೇಲೆ, ಶಿಕ್ಷೆಯನ್ನು ಅನುಭವಿಸಿದಾಗ, ಕೊನೆಯಲ್ಲಿ ಬೇಡಿಕೊಳ್ಳತಕ್ಕಂತಹದ್ದು ಮರ್ಸಿ ಗ್ರೌಂಡ್ ಮೇಲೆ ಕೇಳಿಕೊಳ್ಳುತ್ತೀದ್ದಾರೆಯೇ ಹೊರತಾಗಿ, ಅಲ್ಲಿ ಏನು ಮಾತನಾಡಿದರೂ ಕೂಡ ಇನಫ್ಲೂಯನ್ಸ ಆಗತಕ್ಕಂತಹದ್ದು, ಅಥವಾ ಆಜಡ್ಜಮೆಂಟ್ ಮೇಲೆ ಪರಿಣಾಮ ಆಗತಕ್ಕಂತಹದ್ದು, ಏನೂ ಇಲ್ಲ. ಇದು ಅಪೀಲ್ ಪಿಟಿಷನ್ ಅಲ್ಲ. ರಿವ್ಯೂ ಪಿಟಿಷನ್ ಅಲ್ಲ. ಅಥವಾ ಫುಲ್ ಬೆಂಚಗೆ ಹೋದಂತಹ ಪಿಟಿಷನ್ ಅಲ್ಲ. ಆಗಿದ್ದಾಗಿದೆ. ನಮಗೇನಾದರೂ ತಾವು ಶಿಕ್ಷೆ ಕಡಿಮೆ ಮಾಡಿ, ಅಥವಾ ಏಗ್ರೆಂಟ್ ಮಾಡಿ, ಅಥವಾ ಅದರಲ್ಲಿ ರಿಡಕ್ಷನ್ ಕೊಡಿ ಎಂದು ಹೇಳಿ ಕೇಳತಕ್ಕಂತಹದ್ದೇ ಹೊರತಾಗಿ, ಅದನ್ನು ಯಾವುದಾದರೂ ಕಾನೂನಿನ ಅಡಿಯಲ್ಲಿ ಅಪೀಲು ಮಾಡತಕ್ಕಂತಹದ್ದು, ಅಥವಾ ಅದರ ಬಗ್ಗೆ ಚಿಂತನೆ ಮಾಡತಕ್ಕಂತದ್ದು ಇಲ್ಲ.

ಶ್ರೀ ಜೆ.ಎಚ್. ಪಟೇಲ್ : ಮಾನ್ಯ ಅಧ್ಯಕ್ಷರೇ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ವಲ್ಪ ದಯಮಾಡಿ ಕೇಳಿ. ತಾವು ಏಕೆ ನನಗೆ ಅಲೋ ಮಾಡುತ್ತಿಲ್ಲ. ನೀವು ಹೇಳಿದ್ದನ್ನು ನಾನು ಕೇಳಿದ್ದೆನಲ್ಲಾ;

Sri J.H. PATEL : I will tell you the latest information. ಈಗ ಸುಪ್ರೀಂ ಕೋರ್ಟಿನ ಎದುರುಗಡೆ ಟರ್ಮ್‌ನ್ನು ಕಂಡೋನ್ ಮಾಡಬೇಕು ಎಂದು ಒಂದು ಅಪ್ಲಿಕೇಷನ್ ಇತ್ತು. ಆ ಅಪ್ಲಿಕೇಷನ್ ರಿಜೆಕ್ಟ್ ಆಗಿದೆ ಎಂದು ಈಗ ತಾನೆ ನನಗೆ ಸುದ್ದಿ ಬಂದಿದೆ. ಆದ್ದರಿಂದ

ಮುಖ್ಯಮಂತ್ರಿಗಳೂ ಬಂದ ಮೇಲೆ, ಅದರ ಇಂಪ್ಲಿಕೇಷನ್ ಏನು, ಇದನ್ನೆಲ್ಲಾ ಕುಳಿತು ಚರ್ಚೆ ಮಾಡೋಣ. The Petition which was filed before the Supreme Court has been rejected. Let the Chief Minister come.

ಶ್ರೀ ಹೆಚ್.ಎನ್. ನಂಜೇಗೌಡ : ಒಂದು ಏನಾಗಿದೆ ಎಂದರೆ, ಚೀಫ್ ಮಿನಿಸ್ಟರ್ ಒಂದು ವಾರ ಬರದಿದ್ದರೆ ನಾವು ಏನು ಮಾಡಬೇಕು? ಕಾನ್ಸಿಟಿಟ್ಯೂಷನ್ ಡೆಡಲಾಕ್ ಆಗಿಬಿಡುತ್ತಾ ಒಬ್ಬ ಅಧಿಕಾರಿ ಜೈಲಿಗೆ ಹೋದರೆ? ಪಡುವ ಪ್ರಯತ್ನ ಪಡೋಣ. ಮೊದನೇದಿವಸ ನಾನೇ ಸಜೆಸ್ಟ ಮಾಡಿದ್ದೆ. ರೆಸಲ್ಯೂಷನ್ನೇ ಮಾಡೋಣ, ಪಾರ್ಡನ್ ಮಾಡಿ ಎಂದು ಹೇಳಿ. ನಾನು ಹೇಳುವುದು ಈ ಕೆಲಸಕ್ಕೆ ಚೀಫ್ ಮಿನಿಸ್ಟರ್ ಹೋಗಿಬಿಟ್ಟು ಸದನ ನಡೆಯತಕ್ಕಂತಹ ಕಾಲದಲ್ಲಿ 5-6 ದಿವಸ ದೆಹಲಿಯಲ್ಲಿ ಕುಳಿತುಕೊಂಡು ಬಿಟ್ಟರೆ ಇದೇನು ಇದು ಎಂಬುದು ಒಂದೂ ನನಗೆ ಅರ್ಥವಾಗುವುದಿಲ್ಲ. It is not in keeping with the dignity and decorum of this House for the Chief Minister to abstain from the House for such a long period for such a trivial matter.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಂತೂ ಸ್ಪಷ್ಟವಾಗಯಿತು. ಈಗಂತೂ ಪ್ರಿಜ್ಯೂಡೀಸ್ ಅಂತೂ ಆಗುವುದೇ ಇಲ್ಲ. ಅಥವಾ ಸಬಜ್ಯೂಡೀಸ್ ಆಗುವುದೂ ಇಲ್ಲ. ಮತ್ತೇನೂ ಆಗುವುದಿಲ್ಲ. ಈಗಂತು ರಿಜೆಕ್ಟ ಆಯಿತು. ಮುಗಿಯಿತು ಈಗ. ಈಗ ಉತ್ತರ ಕೊಡತಕ್ಕಂತಹವರು, ಅವರೇ ಬಂದು ಉತ್ತರ ಕೊಡಬೇಕು ಅನ್ನತಕ್ಕಂತಹದು ಇಲ್ಲ. ಏಕೆಂದರೆ ಅನೇಕ ವಿಷಯಗಳು ಅವರ ಪರವಾಗಿ ತಾವು ಉತ್ತರ ಕೊಟ್ಟುಕೊಂಡು ಬಂದಿದ್ದೀರಿ. ಹೋಮ್ ಮಿನಿಸ್ಟರ್ ಉತ್ತರ ಕೊಟ್ಟುಕೊಂಡು ಬಂದಿದ್ದಾರೆ. ಲಾ ಮಿನಿಸ್ಟರ್ ಉತ್ತರ ಕೊಟ್ಟಕೊಂಡು ಬಂದಿದ್ದಾರೆ. ಅವಾಗ ತಮ್ಮ ವಾದ ಏನಿತ್ತು ಅಂದರೆ, ಯಾರಾದರೂ ಒಬ್ಬರು ಉತ್ತರ ಕೊಡುತ್ತಾರೆ ಅನ್ನತಕ್ಕಂತಹದ್ದು. ಇವತ್ತು ನಮ್ಮ ಮುಂದೆ ಇರತಕ್ಕಂತಹ ಪ್ರಶ್ನೆ ಇಷ್ಟೇ ನಾವು ಯಾವುದೇ ಒಂದು ಜಡ್ಜಮೆಂಟ್ ಮೇಲೆ ಇವ್ವತ್ತು ಕಾಮೆಂಟ್ ಮಾಡುತ್ತಾ ಇಲ್ಲ. ನಮ್ಮ ಅನಿಸಿಕೆ ಇಷ್ಟೆ, ಯಾವ ಅಧಿಕಾರಿ ಇವತ್ತು ಜೈಲಿಗೆ ಹೋಗಿದ್ದಾರೆ, ಅದಕ್ಕೆ ಕಾರಣಕರ್ತರು ಯಾರು? ಮತ್ತು ಯಾವ ಸಂದರ್ಭದಲ್ಲಿ ಯಾವ ಸರಕಮಸ್ಟೆನ್ಸಸನಲ್ಲಿ ಈ ಸಮಸ್ಯೆಯನ್ನು, ಅಥವಾ ಈ ಒಂದು ಪರಿಸ್ಥಿತಿ ಬಂದಿದ್ದರಿಂದಾಗಿ ಅದರ ಮೇಲೆ ನಾವು ಮಾತನಾಡುತ್ತಿದ್ದೇವೆಯೇ ಹೊರತಾಗಿ ಬೇರೆ ಜಡ್ಜ ಅವರು ಈ ರೀತಿಯಾಗಿ ಕೊಟ್ಟರು, ಅಥವಾ ಇನ್ನೊಬ್ಬರದ್ದು ಮೆರಿಟ್ನೋ, ಡಿ-ಮೆರಿಟ್ನೋ ನಾವು ಏನೂ ಮಾತನಾಡುತ್ತಾ ಇಲ್ಲ. ಈಗ ಜಡ್ಜಮೆಂಟ್ ಬಂದ ಮೇಲೆ ಹೇಳಿದರೆ ತಪ್ಪೂ ಆಗುವುದಿಲ್ಲ. ಏಕೆಂದರೆ ಅನೇಕ ಸಾರಿ ತಾವು ಅನೇಕ ಜಡ್ಜಮೆಂಟಗಳನ್ನು ಕೋಟ್ ಮಾಡಿದ್ದೀರಿ. ಇದು ಮುಗಿದ ಮೇಲೆ. ಇನ್ನೂ ಪೆಂಡಿಂಗ್ ಇದ್ದರೆ ಆ ಪ್ರಶ್ನೆ ಉದ್ಭವಿಸುತ್ತಿತ್ತು. ಬಹುಶಃ ಈಗ ಅದು ಉದ್ಭವಿಸುವುದಿಲ್ಲ.

ಶ್ರೀ ಕೆ.ಎಂ. ಶರಣಪ್ಪ : ಅಧ್ಯಕ್ಷರೆ, ಮಾನ್ಯ ಖರ್ಗೆ ಸಾಹೇಬರು ಒಂದು ನಿಮಿಷ ಈಲ್ಡ್ ಆಗಬೇಕು.

ಅಧ್ಯಕ್ಷರು : ಶರಣಪ್ಪನವರೇ, ಏಕೆ,

ಶ್ರೀ ಕೆ.ಎಂ. ಶರಣಪ್ಪ : ಅವರು ಮರ್ಸಿ ಪಿಟಿಷನ್ ಬಗ್ಗೆ ಏನು ಹೇಳುತ್ತಿದ್ದಾರೆ, ಮರ್ಸಿ ಪಿಟಿಷನ್ ಹಿಯರ್ ಮಾಡಬೇಕಾಗಿತ್ತು ಅಂದರೂ, ಆ ಸಂದರ್ಭ, ಆ ಕಮಿಟ್ ಅಫೆನ್ಸ್ ಮಾಡಬೇಕಾದರೆ ಏನು ಸಂದರ್ಭ ಇತ್ತು, ಅದನ್ನು ಸಹಿತ ಕನ್ಸಿಡರ್ ಮಾಡಬೇಕಾಗುತ್ತದೆ. ಮರ್ಸಿ ಪಿಟಿಷನ್ ಹಿಯರ್ ಮಾಡಬೇಕಾದರೆ. ಸಂದರ್ಭ ಏನಿತ್ತು? ಅಂದರೆ merits of the case overall ನೋಡುವ ಸಂದರ್ಭ ಬರುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದೂ ಆಗಿ ಹೋಯಿತು.

ಶ್ರೀ ಕೆ.ಎಂ. ಶರಣಪ್ಪ : ಅದು ಯಾವ ಯಾವ ವಾತಾವರಣದಲ್ಲಿ, ಮತ್ತೆ ಎಲ್ಲಾ ಸಂದರ್ಭವನ್ನು ನೋಡಬೇಕಾಗುತ್ತದೆ. ಸುಪ್ರೀಂ ಕೋರ್ಟಿನಲ್ಲಿ ಯಾವಾಗ ಮರ್ಸಿ ಪಿಟಿಷನ್ ಪೆಂಡಿಂಗ್ ಇದೆ ಅಂದ ಮೇಲೆ, ಇಲ್ಲಿ ಅದರ ಮೇಲೆ ಮಾತನಾಡುವುದು ಅಪ್ರಸ್ತುತ. ಅಸಂದರ್ಭ ಎಂದು ನಾನು ಹೇಳುತ್ತೇನೆ.

Mr. SPEAKER : Unfortunately, the Supreme Court has rejected the Mercy Petition as we are informed just now by our friends. It is a valid point raised but it doesn't arise.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವತ್ತು ಮುಖ್ಯವಾಗಿ ಇದಕ್ಕೆ ಹೊಣೆಗಾರರು ಸರ್ಕಾರ ಇದ್ದಾರೆ. ಸರ್ಕಾರ ಅಂದರೆ ನಾವೆಲ್ಲರೂ ಕೂಡ ಸಚಿವರು ಇದಕ್ಕೆ ಕಾರಣಕರ್ತರು ಅನ್ನತಕ್ಕಂತಹದ್ದಲ್ಲ. ಇದಕ್ಕೆ ನೇರವಾಗಿ ಮುಖ್ಯಮಂತ್ರಿಗಳೇ ಹೊಣೆಗಾರರು. ಕಾರಣ ಏನೆಂದರೆ, ಮುಖ್ಯಮಂತ್ರಿಯವರೇ, ಇವತ್ತಿನದಿವಸ ಆ ಪೋರ್ಟ್‌ಫೋಲಿಯೋವನ್ನು ತಮ್ಮ ಜೊತೆಯಲ್ಲಿ ಇಟ್ಟುಕೊಂಡು, ಅಟ್ಯಾಚ್ ಮಿನಿಸ್ಟರ್ ಬೇಗ್‌ರವರಿಗೆ ತಮ್ಮ ಜೊತೆಯಲ್ಲಿ ಇಟ್ಟು ಕೊಂಡಿದ್ದಾರೆ. ಅವರನ್ನು ಸ್ಟೇಟ್ ಮಿನಿಸ್ಟರ್ ಮಾಡಿಕೊಂಡಿದ್ದಾರೆ. ಅಂದರೆ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳತಕ್ಕಂತಹದ್ದು, ಮತ್ತು ಯಾವುದೇ ನಿರ್ಣಯವನ್ನು ಜಾರಿಯಲ್ಲಿತರತಕ್ಕಂತಹದ್ದು ಇವತ್ತು ಯಾರು ಮಾಡಬೇಕಾಗಿದೆ ಅಂದರೆ ಮುಖ್ಯಮಂತ್ರಿಗಳು ಮಾಡಬೇಕಾಗಿದೆ. ಅಂದಾಗ ಈ ಒಂದು ಕಂಟೆಮ್ಪ್ಟ ಪಿಟಿಷನ್ ನಂ. 234:1994 ಮತ್ತು ಸುಪ್ರೀಂ ಕೋರ್ಟಿನ ಮುಂದೆ ಅಂಡರ್ ಟೇಕಿಂಗ್ ತೆಗೆದುಕೊಂಡಿರತಕ್ಕಂತಹದ್ದು 10.5.95. ತಾವು ಏನು ಮಾಡಿದ್ದೀರಿ ಈ ಕಂಟೆಮ್ಪ್ಟ್ ಪಿಟಿಷನ್ ಹಾಕಿದ ಮೇಲೆ ಅಂದರೆ, ಯಾವ ವ್ಯಕ್ತಿಗೆ ಧನಂಜಯ ಅನ್ನತಕ್ಕ ವ್ಯಕ್ತಿಗೆ ಚೀಫ್ ಇಂಜಿನಿಯರ್ ಮಾಡಬೇಕು ಅನ್ನತಕ್ಕಂತಹ ಅಥವಾ ಆ ಭೆನಿಫಿಟ್ ಕೊಡಬೇಕೆಂಬ ಡೈರೆಕ್ಷನ್ ಏನು ಸುಪ್ರೀಂ ಕೋರ್ಟಿನವರು ಕೊಟ್ಟಿದ್ದರು ಅದನ್ನು ನೀವು ಜಾರಿಯಲ್ಲಿ ತರಲಿಲ್ಲ. ತರದೆ ನೀವು ಏನು ಮಾಡಿದಿರಿ? ಈ ಕಂಟೆಮ್ಪ್ಟ್ ಪಿಟೀಲನಲ್ಲಿ ನಂ. 234:1994 ಹಾಕಿದಾಗ ತಾವು ಒಂದು ಅಂಡರ್ ಟೇಕಿಂಗ್ ಕೊಟ್ಟಿದ್ದೀರಿ. 10.5.95ರಲ್ಲಿ. ನಾವು 2 ತಿಂಗಳೊಳಗಾಗಿ ಈ ನಿಮ್ಮ ಆದೇಶವನ್ನು, ನೀವು ಪಾಸು ಮಾಡಿದಂತಹ ಆರ್ಡರನ್ನು ನಾವು ಆಚರಣೆಯಲ್ಲಿ ತರುತ್ತೇವೆ. ನಾವು ಅದನ್ನು ಇಂಪ್ಲಿಮೆಂಟ್ ಮಾಡುತ್ತೇವೆ ಎಂದು. ಅಂದಾಗ....

ಶ್ರೀ ಎಸ್. ಬಂಗಾರಪ್ಪ : ಯಾವ ದಿನಾಂಕ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 10.5.95, ಕಂಟೆಮ್ಪ್ಟ್ ಪಿಟಿಷನ್ ಹಾಕಿದ್ದು ಪಿಟಿಷನ್ ನಂ. 23:1994. ಆಮೇಲೆ ಇದು ಆದಮೇಲೆ ಇನ್ನೊಂದು ತಮಾಷೆ ಅಂದರೆ, ಇವರು ಗೌರ್ನಮೆಂಟ್ ಆರ್ಡರ್ ಪಾಸ್ ಮಾಡುತ್ತಾರೆ, 10.7.95ಗ. ಏನೆಂದರೆ ಅವನಿಗೆ ಕಾನ್ಸಿಕ್ವೆನ್ಸಿಯಲ್ ಎಲ್ಲಾ ಯಾವ್ಯಾವು ನೀವು ಹಕ್ಕುಗಳನ್ನು ಕೊಡಬೇಕು, ಯಾವ್ಯಾವ ಹಕ್ಕಿಗೆ ಅವನು ಅರ್ಹತೆ ಇದ್ದಾನೆ ಅದನ್ನು ಕೊಡಬೇಕು ಎಂದು ಹೇಳಿ ಅವರು ಹೇಳಿದರೂ ಕೂಡ, ಇವರು 10.7.95ರಲ್ಲಿ ಸೂಪರಿಂಟೆಂಡಿಂಗ್ ಇಂಜಿನಿಯರ್ ಎಂಬ ಒಂದು ಆರ್ಡರ್ ಕೊಟ್ಟುಬಿಡುತ್ತಾರೆ. ಕೊಟ್ಟುಬಿಟ್ಟು ಅಲ್ಲಿಗೆ ನಾವು ಕಂಪ್ಲೈ ಮಾಡಿದ್ದೇವೆ ಎನ್ನತಕ್ಕಂತಹ ಮಾತನ್ನು ಹೇಳುತ್ತಾರೆ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಎಂ. ಎಸ್. ಪಾಟೀಲ್)ರವರು ಅಧಿಕಾರ ಪೀಠವನ್ನಲಂಕರಿಸಿದರು).

ಪುನಃ ಕೋರ್ಟಿಗೆ ಹೋದಮೇಲೆ, ನನಗೆ ಸರಿಯಾದ ನ್ಯಾಯ ಸಿಗಲಿಲ್ಲ. ಪುನಃ ನೀವು ಪರಿಶೀಲನೆ ಮಾಡಬೇಕೆಂದು ಹೇಳಿದ ಮೇಲೆ, ಅಂಡರ್‌ಟೇಕಿಂಗ್ ಏನು ಕೊಡುತ್ತಾರೆ ನಾವು ಸರಿಯಾದ ರೀತಿಯಲ್ಲಿಯೇ ಆಚರಣೆಗೆ ತರುತ್ತೇವೆ ಇಂಪ್ಲಿಮೆಂಟ್ ಮಾಡುತ್ತೇವೆಂದು ಹೇಳಿ, ದಿನಾಂಕ 10.6.95ಕ್ಕೆ ಇವರ ವಕೀಲರು ಸುಪ್ರೀಂಕೋರ್ಟಿನಲ್ಲಿ ಅದನ್ನು ಬರೆದು ಕೊಟ್ಟಮೇಲೂ ಕೂಡ ಜಾರಿಯಲ್ಲಿ ಏಕೆ ತರಲಿಲ್ಲ? 10.5.95 ಅಂದರೆ 10.7.95ರವರೆಗೆ ನಿಮಗೆ ಅವಕಾಶವಿತ್ತು. ಆ ಎರಡು ತಿಂಗಳಿನಲ್ಲಿ ನೀವು ಇಂಪ್ಲಿಮೆಂಟ್ ಮಾಡಬಹುದಾಗಿತ್ತು. ಒಂದು ವೇಳೆ ನೀವು ಅದನ್ನು ಇಂಪ್ಲಿಮೆಂಟ್ ಮಾಡಿದ್ದರೆ ಇವತ್ತು ಹೆಚಯುಡಿ ಸೆಕ್ರೆಟರಿ ವಾಸುದೇವನ್‌ರವರು ಜೈಲಿಗೆ ಹೋಗ ತಕ್ಕ ಪ್ರಶ್ನೆಯೇ ಬರುತ್ತಿರಲಿಲ್ಲ. ಇದಕ್ಕೆ ಕಾರಣಕರ್ತರು ಯಾರೆಂದರೆ, ನಾನು ಹೇಳುತ್ತೇನೆ ನೇರವಾಗಿ ಮುಖ್ಯಮಂತ್ರಿಗಳೇ ಕಾರಣಕರ್ತರು because according to this judgment, according to this order, according to your own file, ಆದರೆ ಇವತ್ತು ಏನಾದರೂ ದಿಕ್ಕು ತಪ್ಪಿಸುವುದಕ್ಕೋಸ್ಕರ ಯಾವುದಾದರೂ ಒಂದು ಹೇಳಿಕೆ ಕೊಡುವುದು ಏನಾದರೂ ಒಂದು ಹೇಳುವುದು ಇದನ್ನು ಮಾಡಬೇಡಿ ದಯವಿಟ್ಟು. ನಿಮ್ಮ ಫೈಲು ನೋಡಿಕೊಳ್ಳಿ. ಕೊನೆಯಗಳಿಗೆಯಲ್ಲಿ ನೀವೇನು ಹೇಳಿದ್ದೀರಿ ಎರಡು ತಿಂಗಳಲ್ಲಿ ನಾವು ಮಾಡುತ್ತೇವೆಂದು ಇದನ್ನು ಏಕೆ ಹೇಳಿದಿರಿ? ಹಾಗೆ ಹೇಳಿದ ತಪ್ಪಿಗಾಗಿ, ಪುನಃ ಕೋರ್ಟ್ ಏನು ಹೇಳಿತು ಇವರು ಎಷ್ಟೇ ಹೈಕೋರ್ಟ್ ಆರ್ಡರ್‌ಗಳನ್ನು ಕೊಟ್ಟರೂ ಕೂಡ ಸುಪ್ರೀಂಕೋರ್ಟ್ ಆರ್ಡರ್‌ನ್ನು ಕೂಡ ಇವರು ಧಿಕ್ಕರಿಸುತ್ತಿದ್ದಾರೆ. ಅದಕ್ಕಾಗಿ ಒಂದು ತಿಂಗಳು ಶಿಕ್ಷೆ ಅನುಭವಿಸಬೇಕೆನ್ನುವುದು ಆದಮೇಲೆ ಇವತ್ತು ಒಬ್ಬ ಅಧಿಕಾರಿಗೆ ಜೈಲಿಗೆ ಕಳುಹಿಸುತ್ತೀರಿ. ಆ ಅಧಿಕಾರಿಯನ್ನು ಏಕೆ ಇಟ್ಟುಕೊಂಡಿದ್ದೀರಿ ಸ್ವಾಮಿ? ಆ ಅಧಿಕಾರಿ ಒಳ್ಳೆಯವನು ಎನ್ನತಕ್ಕದ್ದು ಎಲ್ಲರ ಅಭಿಪ್ರಾಯ. High Court, Supreme Court Order - that is immaterial, ತಮಗೆ ಗೊತ್ತಿದೆ Morality is different from law. ಒಳ್ಳೆಯ ಮನುಷ್ಯ ಇರಬಹುದು. ಅವನ ನೈತಿಕಮಟ್ಟ ಒಳ್ಳೆಯದಿರಬಹುದು. ಆದರೆ ಇದನ್ನು ಇಟ್ಟುಕೊಂಡು ಕೂಡತಕ್ಕ ಪ್ರಶ್ನೆ ಏಕೆ ಬಂತು? ಯಾರ ಹೇಳಿಕೆಯ ಮೇಲೆ? ಯಾರ ಒಂದು ಆರ್ಡರ್ ಮೇಲೆ ಇದನ್ನು ಅವರು ಹಾಗೆಯೇ

ಇಟ್ಟುಕೊಂಡರು ? ಏಕೆ ಆಚರಣೆಗೆ ತರಲಿಲ್ಲ? ಕಂಟೆಮ್ಮ ಅನ್ನುವುದು ಗೊತ್ತಿದ್ದರೂ ಕೂಡ ಅದನ್ನು ಏಕೆ ಇಟ್ಟುಕೊಂಡರು ಅನ್ನತಕ್ಕ ಪ್ರಶ್ನೆ ಉದ್ಭವಿಸುತ್ತದೆ. ನೇರವಾಗಿ ಯಾರಿಗೋಸ್ಕರ ಸಹಾಯ ಮಾಡಬೇಕೆಂದು ಇತ್ತು ತಮ್ಮ ಮನಸ್ಸಿನಲ್ಲಿ ಯಾವ ಕಾರ್ಪೊರೇಷನ್ ಅಧಿಕಾರಿಗಳು ಇದ್ದಾರೆ ಅವರಿಗೆ ರಕ್ಷಣೆ ಕೊಡಬೇಕು, ಅವರ ಹಿತ ಕಾಪಾಡಬೇಕೆಂದು ಹೇಳಿ ತಾವು ಕೋರ್ಟ ಆರ್ಡರನ್ನು ಇಂಪ್ಲಿಮೆಂಟ್ ಮಾಡಲಿಲ್ಲ. ಒಂದು ವೇಳೆ ಇಂಪ್ಲಿಮೆಂಟ್ ಮಾಡಿದ್ದರೆ ನಿಮಗೆ ಏನು ಹೋಗುತ್ತಿತ್ತು ಹೇಳಿ ? ನಮಗೇನು ಇಂಟರೆಸ್ಟ ಇರಲಿಲ್ಲವೆಂದರೆ ಮತ್ತೆ ಹೇಗಾಯಿತು ? ಹೈಕೋರ್ಟ ಡೈರೆಕ್ಷನ್ ಮೇಲೆ, ಸುಪ್ರೀಂಕೋರ್ಟ ಡೈರೆಕ್ಷನ್ ಮೇಲೆ, ಕಂಟೆಮ್ಮ ಪಿಟಿಷನ್ ಮೇಲೆ ಇಷ್ಟೇ ಅಲ್ಲ, ಇಷ್ಟು ಆದಮೇಲೆ ಕೂಡ ನಿಮ್ಮ ಪಕ್ಷದ ಶಾಸಕರು 5 ಪೇಜ್ ಲೆಟರ್ ನಿಮಗೆ ಬರೆದು, ಇದು ಅನ್ಯಾಯ ಇದೆ ಹೈಕೋರ್ಟನಲ್ಲಿ ಈ ರೀತಿಯಾಗಿ ಆಗಿದೆ, ಸುಪ್ರೀಂಕೋರ್ಟನಲ್ಲಿ ಈ ರೀತಿಯಾಗಿ ಆಗಿದೆ, ಹಿಂದೆ ಇದೇ ರೀತಿಯಲ್ಲಿ ಅನೇಕ ಜನರಿಗೆ ಕಾನ್ಸಿಕ್ವೆಂಟ್ ಆಗಿ ಪ್ರಮೋಷನ್ ಕೊಟ್ಟುಕೊಳ್ಳುತ್ತಾ ಬಂದಿದ್ದೀರಿ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಹಿಡಿದುಕೊಂಡು ಅವರಿಗೆ ನೀವು ಸೀನಿಯಾರಿಟಿ ಕೌಂಟ್ ಮಾಡಿದ್ದೀರಿ ಇವರಿಗೂ ಕೂಡ ಆ ಬೆನಿಫಿಟಗಳನ್ನು ಕೊಡಬೇಕೆಂದು ಹೇಳಿ ನಿಮ್ಮ ಪಾರ್ಟಿಯವರೇ 5 ಪೇಜ್ ಲೇಟರ್ ಅವರು ಕೂಡ ನಿಮಗೆ ಇಂಪ್ಲಿಮೆಂಟ್ ಮಾಡುವುದಕ್ಕೋಸ್ಕರ ದಿನಾಂಕ 22.7.95ರಲ್ಲಿ ಬರೆದಿದ್ದಾರೆ. ಅಂದರೆ 2 ತಿಂಗಳ ಹಿಂದೆ ಸುಮಾರು 5 ಪೇಜ್ ಲೆಟರ್. ಇದಕ್ಕೂ ಕೂಡ ತಾವು ಗಮನಕೊಡಲಿಲ್ಲ. ಅದರ ಮೇಲೆ ಒಂದು ಅಕ್ಷರ ಸಹ ಬರೆಯಲಿಲ್ಲ ತಾವು. ಅಥವಾ ಕರೆದು ಮಾತನಾಡಲಿಲ್ಲ. ಅಥವಾ ಅಲ್ಲಿರತಕ್ಕ ಅಧಿಕಾರಿಗಳಿಗೆ ಇದರ ಬಗ್ಗೆ ಹೇಳಲಿಲ್ಲ. ಅದನ್ನು ಹಾಗೆಯೇ ಮುಚ್ಚಿಟ್ಟಿರಿ. ಪುನಃ ನಿಮಗೆ ಬೇಕಾದಂತಹವರು ಕೆಲವು ಶಾಸಕರು ಮೂರು ಜನ ಅವರೊಂದು ಅಪ್ಲಿಕೇಷನ್ ಕೊಟ್ಟರು. ಏನು ಅಂತ ಇನ್ನೊಂದು ಚೀಫ್ ಇಂಜಿನಿಯರ್ ಪೋಸ್ಟ್ ಕ್ರಿಯೇಟ್ ಮಾಡಬೇಕು; ವರ್ಕ್‌ಲೋಡ್ ಜಾಸ್ತಿಯಿದೆ ಅದಕ್ಕಾಗಿ ಹೊಸ ಪೋಸ್ಟ ಕ್ರಿಯೇಟ್ ಮಾಡಿ ಕೊಡಬೇಕೆಂದು ಮೂರು ಜನ ಶಾಸಕರು ಅವರೂ ಕೂಡ ಒಂದು ಪತ್ರಿ ಬರೆದಿದ್ದಾರೆ. ಅದರ ಮೇಲೆ ತಾವೇನು ಮಾಡಿದಿರಿ, ತ್ರಿ ಏಕ್ಸ ಹಾಕಿ urgently, please put up this file ಎಂದು ತಮ್ಮ ಸೆಕ್ರೆಟರಿಯವರು.....

ಶ್ರೀ ವಿ. ಸೋಮಣ್ಣ : ಮಾನ್ಯ ಹಿರಿಯಸದಸ್ಯರಾದ ಖರ್ಗೆಯವರೇ ಒಂದು ನಿಮಿಷ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹೆಸರು ಹೇಳಲಿಲ್ಲ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ.

Sri M. MALLIKARJUNA KHARAGE : I am prepared to prove this. I owe it.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರಾದ ಖರ್ಗೆಯವರು ಒಂದು ಅತ್ಯಂತ ಜವಾಬ್ದಾರಿಯಾದ ಮಾತನ್ನು ಹೇಳಿದ್ದಾರೆಂದು ನಾನು ತಿಳಿದು ಕೊಂಡಿದ್ದೇನೆ. ಬೇಜವಾಬ್ದಾರಿ ಇಂದ ಹೇಳಲಿಕ್ಕೆ ಬರುವುದಿಲ್ಲ. ನಿಮ್ಮ ಪಕ್ಷದ ಶಾಸಕರುಗಳೇ ಕಾಗದ ಬರೆದಿದ್ದಾರೆ

ಎಂದರು. ಅವರ ಹೆಸರು ಹೇಳಬೇಕು. ಇಲ್ಲದಿದ್ದರೆ ನಾವು ಜನತಾದಳ ಪಕ್ಷಕ್ಕೆ ಸೇರಿದ್ದೇವೆ. ನಾನು ಬರೆದಿದ್ದೇನೆಯೇ ಅದು ಬೇಕು ನಮಗೆ. ಯಾರು ಬರೆದಿದ್ದಾರೆಂದು ನೀವು ಹೇಳದೇ ಹೋದರೆ ಎಲ್ಲರ ಮುಖಕ್ಕೂ ನೀವು ಮಸಿ ಬಳಿಯುತ್ತಿದ್ದೀರಿ ಎಂದು ನಾನು ಹೇಳಬೇಕಾಗುತ್ತದೆ. ಅವರು ಮೂರು ಜನ ಇಂದಿನ ಶಾಸಕರು, ಏಕೆಂದರೆ ನೀವು ಈ ಸದನದಲ್ಲಿ ಶಾಸಕರು ಇದ್ದೀರಿ. ಒಬ್ಬ ಶಾಸಕರ ಮೇಲೆ ಇನ್ನೊಬ್ಬ ಶಾಸಕರನ್ನು ಎತ್ತಿಕಟ್ಟುವುದಾಗಲೀ ಅವರ ಮುಖ ಪರಚುವುದಾಗಲೀ ಈ ಸದನದಲ್ಲಿ ಆಗಬಾರದೆನ್ನುವ ದೃಷ್ಟಿಯಿಂದ ಯಾವ್ಯಾವ ಶಾಸಕರು ಬರೆದಿದ್ದಾರೆ ಎನ್ನತಕ್ಕದ್ದನ್ನು ನನಗೆ ಹೇಳಲೇಬೇಕು ಈಗ. ಶಾಸಕರು ಬರೆದಿದ್ದಾರೆಂದು ಹೇಳಿಬಿಟ್ಟಿದ್ದೀರಿ ನೀವು. ಆದ್ದರಿಂದ ಹೆಸರು ಹೇಳದಿದ್ದರೆ ಈ ಸದನದಲ್ಲಿ ಗೌರವ ಉಳಿಯುತ್ತಿತ್ತು. ಶಾಸಕರು ಎಂದು ಹೇಳಿದಮೇಲೆ ನೀವು ಹೇಳದೇ ಹೋದರೆ ಅದು ತಪ್ಪಾಗುತ್ತದೆ. ದಯವಿಟ್ಟು ತಾವು ಹೇಳಬೇಕು. ಹೇಳುವುದಕ್ಕೆ ಇಷ್ಟವಿಲ್ಲದೇ ಹೋದರೆ ನಾನು ಹೇಳಿದ್ದುದು ಸರಿಯಿಲ್ಲವೆಂದು ದಯವಿಟ್ಟು ನೀವು ಆ ಮಾತು ವಾಪಸ್ಸು ತೆಗೆಯಬೇಕು.

ಶ್ರೀ ವಿ. ಸೋಮಣ್ಣ ; ಮಾನ್ಯ ಉಪಾಧ್ಯಕ್ಷರೆ, ಈಗ ಸನ್ಮಾನ್ಯ ಹಿರಿಯ ಕಾಂಗ್ರೆಸ್(ಐ) ನಾಯಕರಾದ ಖರ್ಗೆಯವರು ಮಾತನಾಡುತ್ತಿದ್ದಾರೆ. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಪತ್ರಗಳನ್ನು ಬರೆದಿರತಕ್ಕ ವಿಚಾರ, ಸೂಪರ್ ನ್ಯೂಮರರಿ ಪೋಸ್ಟಗಳನ್ನು ಕ್ರಿಯೇಟ್ ಮಾಡತಕ್ಕ ವಿಚಾರ ಮತ್ತೆ ಯಾವರೀತಿ ಬೆಳೆದು ಬಂತು ಎನ್ನುವ ಬಗ್ಗೆ ಅವರು ಮಾತನಾಡಿದ ಮೇಲೆ ನನಗೂ 10 ನಿಮಿಷ ಮಾತನಾಡಲಿಕ್ಕೆ ಕಾಲಾವಕಾಶ ಕೊಡುವುದಾದರೆ ನಾನು ಹೇಳುತ್ತೇನೆ. ಆದರೆ ನಾವು ಪತ್ರ ಬರೆದಿರತಕ್ಕದ್ದು ಬೆಂಗಳೂರು ನಗರದ ಹಿತದೃಷ್ಟಿಯಿಂದ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಗಿಯಿತು, ನಾನು ಹೇಳಬೇಕಾಗಿಲ್ಲ ಬಿಡಿ. ನಾನು ಅದಕ್ಕೇ ಯಾರ ಹೆಸರು ಬೇಡವೆಂದು ಹೇಳಿದೆ.

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಮಾನ್ಯ ಉಪಾಧ್ಯಕ್ಷರೆ, ದಯಮಾಡಿ ಹೆಸರು ಹೇಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮಲ್ಲಿ ಫೈಲ್ ಇದೆ ತೆಗೆದುಕೊಂಡು ನೋಡಿ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾಂಗ್ರೆಸ್(ಐ) ನಾಯಕರು ಅವಶ್ಯಕವಾಗಿ ಅವರ ಹೆಸರುಗಳನ್ನು ಕೊಡಬೇಕಾಗುತ್ತದೆ. ಮುಖ್ಯಮಂತ್ರಿಗಳು ಬಂದಾಗ ಉತ್ತರ ಕೊಡುವಾಗ ಅವರಿಗೆ ಮಾಹಿತಿ ಬೇಕಾಗುತ್ತದೆ. ನೀವು ಹೇಳಿದರೆ ತಪ್ಪೇನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಪತ್ರ ಬರೆದದ್ದು ಫೈಲ್‌ಸಲ್ಲಿ. ಅದಕ್ಕೆ ನೀವೇನು ಶಿಕ್ಷೆ ಕೊಡುತ್ತೀರಿ ಅದಕ್ಕೆ ನಾನು ಬದ್ಧನಾಗಿದ್ದೇನೆ. ತಾವೇ ಒಪ್ಪಿದ್ದೀರಿ. ನಾವು ಬರೆದದ್ದು ಸರಿಯೆಂದು.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೆ, ತಮಗೆ ನಾನು ಸಹಾಯ ಮಾಡುವುದಕ್ಕೋಸ್ಕರ ಹೇಳುವುದು, ಇದು ಸರಿಯಾಗುವುದಿಲ್ಲ, ಪತ್ರ ಇದೆ ನೋಡಿಕೊಳ್ಳಿ ರೆಕಾರ್ಡ್ಸನಲ್ಲಿ ಎಂದು ಹೇಳುವುದುಕ್ಕೆ

ಸಾಧ್ಯವಿಲ್ಲ ಈ ಹೌಸನಲ್ಲಿ. ಹೌಸ್ ಮೆಂಬರ್ಸ ಎಲ್ಲಾ ಫೈಲ್ ನೋಡುವುದಕ್ಕಾಗುವುದಿಲ್ಲ. ನಮಗೆ ಯಾರಿಗೂ ಅಧಿಕಾರವಿಲ್ಲ ಫೈಲ್ ನೋಡುವುದು. ಸರ್ಕಾರದವರು ತಮ್ಮ ಕೈಗೆ ಫೈಲ್ ಕೊಟ್ಟರೆ ಅಂತಹ ಸಂದರ್ಭದಲ್ಲಿ ಯಾರು ನೋಡಬೇಕೆಂದು ಸರ್ಕಾರ ಸೂಚನೆ ಮಾಡುತ್ತದೆ ತಾವು ಅನುಮತಿ ಕೊಡುತ್ತೀರಿ ಆಗ ಫೈಲ್ ನೋಡಬಹುದೇ ವಿನಹ ನಾವೇ ಫೈಲ್ ನೋಡುವುದಕ್ಕೆ ಬರುವುದಿಲ್ಲ. I am not a Government. I am a Legislator, ಈ ಸದನದೊಳಗಡೆ ಅವರು ಶಾಸಕರು ಎಂದು ಹೇಳಿಬಿಟ್ಟಮೇಲೆ ಅವರು ಹೆಸರು ಹೇಳದೇ ಹೋದರೆ ಅವರು ಮಾಡಿರುವಂತಹ ಆರೋಪ ಸತ್ಯಕ್ಕೆದೂರವಾದುದು ಎಂದು ನಾವು ಪ್ರತ್ಯಾರೋಪ ಮಾಡಬೇಕಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಏಕೆ ಮುಟ್ಟಿ ನೋಡಿಕೊಳ್ಳುತ್ತಾರೋ ನನಗೆ ಅರ್ಥವಾಗುತ್ತಿಲ್ಲ.

ಉಪಾಧ್ಯಕ್ಷರು : ಮಾನ್ಯ ಖರ್ಗೆಯವರು ಪಾಯಿಂಟ್ ಆಫ್. ಆರ್ಡರ್ ಮೇಲೆ ನೀವು ಏನಾದರೂ ಹೇಳುತ್ತಿರೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪಾಯಿಂಟ್ ಆಫ್ ಆರ್ಡರ್ ಮೇಲೆ ನಾನೇನೂ ಹೇಳಬೇಕಾಗಿಲ್ಲ. ಏಕೆಂದರೆ, ನಿಮ್ಮ ಪಕ್ಷದ ಶಾಸಕರೇ ಬರೆದಿದ್ದಾರೆಂದು ನಾನು ಹೇಳಬೇಕಾಗಿಲ್ಲ. ಅದು ಪಾಯಿಂಟ್ ಆರ್ಡರ್ ಆಗುವುದಿಲ್ಲ. ನಾನು ಹೇಳಿದ್ದೇನೆ, ಯಾರೋ ಸದಸ್ಯರು ನಿಮ್ಮ ಪಾರ್ಟಿಯವರು ಬರೆದಿದ್ದಾರೆಂದು. ಅದು ಬೇಕಾದರೆ, ಇಲ್ಲವಾದರೆ ನೀವು ಫೈಲ್ ತರಿಸಿಕೊಳ್ಳಿ. ಅದರಲ್ಲಿ ಇರಲಿಲ್ಲವೆಂದರೆ ನೀವೇನು ಶಿಕ್ಷೆ ಕೊಡುತ್ತೀರಿ ಅದನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧನಿದ್ದೇನೆಂದು ಹೇಳುತ್ತಿದ್ದೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ತಾವು 5 ಜನರ ಹೆಸರುಗಳನ್ನು ಹೇಳಬೇಕು. ಅದು ಯಾರು ಎಂದು ಗೊತ್ತಾಗಬೇಕು.

ಶ್ರೀ ಜೆ.ಹೆಚ್. ಪಟೇಲ್ : ಈಗ ಪ್ರೊಸಿಜರಲೀ ಲೀಗಲೀ ನೀವು ಹೆಸರು ಕೊಡಲೇಬೇಕಾಗುತ್ತದೆ. ಸದನದಲ್ಲಿ ಹಾಗೆ ಮೊಗುಂ ಆಗಿ ಹೇಳುವುದಕ್ಕೆ ಬರುವುದಿಲ್ಲ. ಈಗ ನೀವು ತಕ್ಷಣ ನಮಗೆ ಕೊಡದಿದ್ದರೂ ಅಧ್ಯಕ್ಷರಿಗೆ ಕೊಡಿರಿ. ನಮ್ಮ ಲೀಡರ್ ಬಂದ ಮೇಲೆ ತರಿಸಿಕೊಂಡು ನೋಡಿಕೊಂಡು ......At least he should know.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಲೇ ಕೊಡುತ್ತೇನೆ. ನನಗೆ ರೆಫರ್ ಮಾಡುವುದಕ್ಕೆ ಬೇಕಲ್ಲಾ, ಆಮೇಲೆ ಮಾತನಾಡಿ ಕೊಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ : ಶಾಸಕರ ಹೆಸರನ್ನು ಹೇಳದೇ ಇರತಕ್ಕ, ಜ್ಯುಡಿಷಿಯರಿ ಮ್ಯಾಟರ್ಸ ಇದ್ದುಕೊಂಡು ಡಿಸೀಷನ್ ಆಗಿ ಮರ್ಸಿ ಪಿಟಿಷನ್ ಇದ್ದಾಗಲೇ ಚರ್ಚೆಗೆ ಎದ್ದು ನಿಂತಿದ್ದೀರಿ. ನೀವು. ಆದ್ದರಿಂದ ಶಾಸಕರ ಹೆಸರು ಹೇಳದೇ ಇರತಕ್ಕ ಗೌಪ್ಯ ಏನಿದೆ? ಅದೇನು ಜ್ಯುಡಿಷಿಯರಿ ಮ್ಯಾಟರೇ? ಆ ಶಾಸಕರು ಏನಾದರೂ ಕೋರ್ಟನಲ್ಲಿದ್ದಾರೋ? ಶಾಸಕರು ಏನು ಹೇಳಿದ್ದಾರೆ? ಏಕೆ ನೀವು ಶಾಸಕರ ಹೆಸರು ಹೇಳಲಿಲ್ಲ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಮಗೆ ನಾನು ಹೇಳುತ್ತೇನೆ. ತಾವು ವೆರಿಫೈ ಮಾಡಲಿಕ್ಕೆ ಫೈಲ್ ತರಿಸಿ. ನಾನು ಹೇಳುತ್ತೇನೆ.

ಆಮೇಲೆ ಇನ್ನೊಂದು ವಿಷಯ, ಈ ನಾಗೇಗೌಡರು ಬಂದು ಸ್ವಲ್ಪ ಎಡವಟ್ಟು ಆಯಿತು. ಯಾವಾಗಲೂ ಹೀಗೇ ಮಾಡುವುದು ಅವರು. ಈ ರೀತಿಯಾಗಿ ಅವರು, ಕೆಲವು ಶಾಸಕರೂ ಕೂಡ ಇದರ ಬಗ್ಗೆ ಗಮನಕ್ಕೆ ಬಂದಿಲ್ಲ, ಇತ್ತೀಚೆಗೆ ನನ್ನ ಗಮನಕ್ಕೆ ಬಂದಿದ್ದು, ಎನ್ನತಕ್ಕಂಥ ವಾದವನ್ನು ಏನು ಅವರು ಹೋದ ಸಲ ಮಂಡಿಸಿದರು ಮತ್ತು ಪತ್ರಿಕೆಯಲ್ಲೂ ಕೂಡ ಏನು ಹೇಳಿದ್ದರು, ಅದಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಅವರ ಗಮನಕ್ಕೆ ಬಂದಿಲ್ಲ ಎನ್ನತಕ್ಕಂಥ ಪ್ರಶ್ನೆ ಇಲ್ಲ. ಅವರ ಗಮನಕ್ಕೆ ಒಂದು ಸಲ ಅಲ್ಲ, ಅನೇಕ ಸಾರಿ ಬಂದಿದೆ, ಅನೇಕ ಬಾರಿ ಬಂದಿದೆ. ಲೆಜಿಸ್ಲೇಟರ್ಸ್ ತಂದಿದ್ದಾರೆ, ಸರ್ಕಾರದ ವತಿಯಿಂದ ಹೋಗಿದೆ, ಕೋರ್ಟ ವತಿಯಿಂದ ಹೋಗಿದೆ, ಹೆಚ್.ಯು.ಡಿ. ಸೆಕ್ರೆಟರಿ ವತಿಯಿಂದ ಹೋಗಿದೆ ಮತ್ತು ಈ ಫೈಲ್ ಕೂಡ ಅವರ ಹತ್ತಿರ ಇದೆ. ಇಷ್ಟು ಇದ್ದರೂ ಕೂಡ ಇವತ್ತಿನ ದಿವಸ ಅವರು ಇದಕ್ಕೆ ನಿರ್ಲಕ್ಷ್ಯ ಮಾಡಿದ್ದಾರೆ, ಈ ನಿರ್ಲಕ್ಷ್ಯ ಮಾಡತಕ್ಕಂಥಾದ್ದು ಏಕೆ ಎಂದರೆ ಅವರು ಯಾರದೋ ಒಂದು ಹಿತವನ್ನು ಕಾಪಾಡಬೇಕಾಗಿತ್ತು ಎನ್ನತಕ್ಕಂಥಾದ್ದೇ ಅವರ ಗುರಿ ಇರಬಹುದು. ಅದಕ್ಕಾಗಿ ಈ ಕೆಲಸವನ್ನು ಮಾಡಿದ್ದಾರೆ. ಇಲ್ಲಾ ಅಂದರೆ ಈ ಪ್ರಶ್ನೆಯೇ ಉದ್ಭವಿಸುತ್ತಾ ಇರಲಿಲ್ಲ. He is a interested party; that is why he has failed to implement the Supreme Court Order.

ಇದನ್ನು ನಾನು ನೇರವಾಗಿ ಚಾರ್ಜು ಮಾಡುತ್ತೇನೆ. ಅದಕ್ಕಾಗಿ ಇವತ್ತು ವಾಸುದೇವನ್ ಅವರನ್ನು ಜೈಲಿನಲ್ಲಿ ಇಡಬೇಕಾಗಿಲ್ಲ. ಇವತ್ತು ನಿಜವಾಗಿ ಕಂಟೆಪ್ಟ್ ಮಾಡಿದ್ದುದು ಯಾರು ಎಂದರೆ ಸುಪ್ರೀಂ ಕೋರ್ಟ ಆರ್ಡರ್ ಪ್ರಕಾರ ಮಾನ್ಯ ಮುಖ್ಯ ಮಂತ್ರಿಯವರು ರೆಸ್ಪಾನ್ಸಿಬಿಲಿಟಿ ವಹಿಸಿಕೊಳ್ಳಬೇಕಾಗುತ್ತದೆ, ಏಕೆಂದರೆ ಅವರು ನೇರವಾಗಿ ಈ ಖಾತೆಯನ್ನು ವಹಿಸಿಕೊಂಡಿದ್ದಾರೆ. ಅವರು ಬೇರೆ ಖಾತೆ ವಹಿಸಿಕೊಂಡಿದ್ದರೆ ನಾವು ಹೇಳುತ್ತಿರಲಿಲ್ಲ. ಈ ಹೆಚ್.ಯು.ಡಿ. ಡಿಪಾರ್ಟ್‌ಮೆಂಟ್ ಅದರಲ್ಲೂ ಬೆಂಗಳೂರು ಸಿಟಿ ಕಾರ್ಪೊರೇಷನ್ ಅವರ ಒಂದು ಅಧೀನದಲ್ಲಿ ಬರತಕ್ಕಂಥ ಕಾರಣದಿಂದ, ಇವತ್ತು ಈ ರೆಸ್ಪಾನ್ಸಿಬಿಲಿಟಿಯನ್ನು ಅವರು ಒಪ್ಪಿಕೊಳ್ಳಲೇಬೇಕು. ಮಾಡಿದ ತಪ್ಪನ್ನು ಒಪ್ಪಿಕೊಳ್ಳಲೇಬೇಕು. ಮತ್ತು ಈ ಕಂಟೆಂಪ್ಟ್‌ಗೆ ಆದಂಥ ಕೇಸನಲ್ಲಿ ನಿಜವಾಗಲೂ ಅವರು ಈ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ. ಎರಡನೆಯದು ಏನು ಎಂದರೆ ಇಂತಹ ಕೇಸ್ ಆಂಧ್ರದಲ್ಲಿ ಒಬ್ಬ ಜಾಯಿಂಟ್ ಸೆಕ್ರೆಟರಿ, ಹೌಸಿಂಗ್, ಮಿಸ್ಟರ್ ಠಾಕೂರೋ, ಅಥವಾ ಠಕ್ಕರ್ ಎಂದು, ಅವರು ಐ.ಎ.ಎಸ್. ಆಫೀಸರ್, ಅವರಿಂದ ಈ ಅಲಾಟಮೆಂಟ್ ಆಫ್ ಹೌಸಸ್, ಹೌಸಿಂಗ್ ಬೋರ್ಡ್, ಅದರಲ್ಲಿ ವಾಯಲೇಷನ್. ಆದಮೇಲೆ ಅವರು ಏನು ಮಾಡಿದರು ಅಂದರೆ ಕೆಲವು ಜನ, ಯಾರಿಗೆ ಮನೆ ಸಿಗಲಿಲ್ಲ ಅಂಥವರು ಕೋರ್ಟಿಗೆ ಹೋದರು. ಹೋದ ಮೇಲೆ ಅವರು ಇಂಪ್ಲಿಮೆಂಟ್ ಮಾಡಲಿಲ್ಲ ಎಂದು ಅವರಿಂದಲೂ ಕೂಡ ಕಂಟೆಂಪ್ಟ್ ಮತ್ತು 24 ಗಂಟೆಗಳ ಶಿಕ್ಷೆ ಎಂದು ಹೇಳಿ ಬಂದಾಗ, ಹೆಚ್.ಯು.ಡಿ. ಮಿನಿಸ್ಟರ್, ಅವರು ಸ್ವತಃ ಕೋರ್ಟ ಮುಂದೆ ಹೋಗಿ ಅಫಿಡವಿಟ್ ಫೈಲ್ ಮಾಡಿದರು. ಏನು ಅಂದರೆ, ನಿನ್ನಿಂದ ಡಿಲೇ

ಆಗಿದೆ. ಅದಕ್ಕಾಗಿ ಈ ಆಫೀಸರ್ ಈಸ್ ನಾಟ್ ರೆಸ್ಪಾನ್ಸಿಬಲ್. ಅದಕ್ಕಾಗಿ ದಯವಿಟ್ಟು ಅವರಿಗೆ ಕ್ಷಮೆ ಕೊಡಬೇಕು ಎಂದು ಹೇಳಿ ಕೋರ್ಟಿನ ಮುಂದೆ ಅವರು ಅಫಿಡವಿಟ್ಟನ್ನು ಹಾಕಿರತಕ್ಕಂಥಾದ್ದೂ ಕೂಡ ಇದೆ. ಆಮೇಲೆ 24 ತಾಸು ಆದಮೇಲೆ ಅವರು ಬಿಟ್ಟುಬಿಟ್ಟರು. ಯಾವಾಗ ಅಲ್ಲಿ ನಾನು ರೆಸ್ಪಾನ್ಸಿಬಲ್ ಇದ್ದೇನೆ ಎಂದು ಹೇಳಿ ನೇರವಾಗಿ ಕೋರ್ಟಿನ ಮುಂದೆ ಹೋಗಿ ಅಫಿಡವಿಟ್ ಹಾಕಿದರು. ಸ್ವಾಮಿ, ಇಲ್ಲಿ ಅವನದು ತಪ್ಪು ಇಲ್ಲ ಎಂದು ಹೇಳಿ ನಾವೆಲ್ಲರೂ ಕೂಡ ಹೇಳುವಾಗ, ಪಾಪ, ಅವನು ಒಳ್ಳೆಯ ಮನುಷ್ಯ ಎಂದು ಹೇಳಿ ನಾವು ಪ್ಲೀಡ್ ಮಾಡುವಾಗ ಏಕೆ ನೀವು ಹೋಗಲಿಲ್ಲ? ಇದು ನಮ್ಮಿಂದ ಡಿಲೇ ಆಗಿದೆ, ನಾನು ಇದನ್ನು ಇಂಪ್ಲಿಮೆಂಟ್ ಮಾಡಲಿಲ್ಲ, ನಾನು ಇದರ ಮೇಲೆ ಕ್ರಮ ತೆಗೆದುಕೊಳ್ಳಲಿಲ್ಲ, ಅದಕ್ಕಾಗಿ ನಾನು ರೆಸ್ಪಾನ್ಸಿಬಲ್, ಅವನಿಗೆ ಶಿಕ್ಷೆ ಆಗಬಾರದು ಅನ್ನತಕ್ಕಂಥದ್ದನ್ನು ಏಕೆ ನೀವು ಹೇಳಲಿಲ್ಲ ಎಂದರೆ, ಅದಕ್ಕೆ ನಾನು ಹೇಳುತ್ತೇನೆ, ನಿಮಗೆ ಗಿಲ್ಟಿ ಕಾನಷಿಯಸ್ ಇದೆ. ನೀವು ಮಾಡಿದ ತಪ್ಪನ್ನು ಮುಚ್ಚಿಟ್ಟುಕೊಳ್ಳಬೇಕು, ಬಚ್ಚಿಟ್ಟುಕೊಳ್ಳಬೇಕು ಎಂದು ಹೇಳಿ ಇವತ್ತಿನ ದಿವಸ ಈ ಪ್ರಯತ್ನ ನಡೆದಿದೆ. ಆದಕ್ಕೆ ನಾನು ಹೇಳುತ್ತೇನೆ, ನೀವು ನೇರವಾಗಿ ಹೊಣೆ, ಮುಖ್ಯಮಂತ್ರಿಗಳು ಇದಕ್ಕೆ ನೇರವಾಗಿ ಹೊಣೆ. ಅವರೇ ಕಾರಣಕರ್ತರು. ಇಂಥ ಒಂದು ಪರಿಸ್ಥಿತಿಯನ್ನು ಸೃಷ್ಟಿ ಮಾಡಿದಂಥ ಅವರೇ ಮುಖ್ಯ ಕಾರಣಕರ್ತರು ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಮತ್ತು ಕೋರ್ಟ ಆರ್ಡರ್ ಕೂಡ ಇವತ್ತು ಏನು ಇದೆ ಎಂದರೆ ಸ್ಪಷ್ಟವಾಗಿ, ಅಧ್ಯಕ್ಷರೇ,

`The Registry of this Court is directed to communicate this Order to the Director General of Police, Government of Karnataka on receipt whereof he would implement the order and submit its compliance to the Registry within one week from the date of its receipt and also a week after the sentence was served by the respondent.'

ಈ ರೀತಿಯಾಗಿ ಇಂತಹ ಒಂದು ಸೀರಿಯಸ್ ಆರ್ಡರ್ ಮಾಡುವವರೆಗೆ ನಮ್ಮವರು ಎಲ್ಲರೂ ಕೂಡ ಸುಮ್ಮನೆ ಕುಳಿತು, ಇವತ್ತಿನ ದಿವಸ ನಮ್ಮದು ಏನೂ ಇಲ್ಲ, ನಮ್ಮದು ಏನೂ ತಪ್ಪು ಇಲ್ಲ ಎನ್ನತಕ್ಕಂಥ ಮಾತು ಆಡುತ್ತಾರಲ್ಲಾ! ಇದು ಯಾವ ದೃಷ್ಟಿಯಿಂದ ಇವರು ಮಾತನಾಡುತ್ತಾರೆ ಅನ್ನತಕ್ಕಂಥಾದ್ದನ್ನು ನಾನು ಕೇಳುತ್ತೇನೆ. ಅದಕ್ಕಾಗಿ I demand a judicial probe headed by a Supreme Court Judge ಎಂದು ನಾನು ಹೇಳುತ್ತಿದ್ದೇನೆ. ಆದರೆ ನಮ್ಮ ರೆಸ್ಪಾನ್ಸಿಬಿಲಿಟಿ ಇಲ್ಲ ಎಂದು ಹೇಳಿ ನಿಮ್ಮ ವಾದ ಆದರೆ, till that Supreme Court completes the enquiry let him resign. ಏಕೆಂದರೆ ಈ ಪೋರ್ಟಫೋಲಿಯೋ ಅವರೇ ನೇರವಾಗಿ ಇಟ್ಟುಕೊಂಡಿದ್ದಾರೆ. ಅವರು ಕೇವಲ ಮುಖ್ಯಮಂತ್ರಿಯಾಗಿ ಇರುತ್ತಿದ್ದರು ಅಂದರೆ ನಾನು ಹೇಳುತ್ತಿರಲಿಲ್ಲ, ಅವರು ಮುಖ್ಯ ಮಂತ್ರಿಯಾಗಿ ಈ ಪೋರ್ಟಫೋಲಿಯೋವನ್ನು ಜೊತೆಯಲ್ಲೇ ಇಟ್ಟುಕೊಂಡು ಇದರ ಮೇಲೆ ಆರ್ಡರ್ ಮಾಡಿ, ಇದರಲ್ಲಿ ಒಂದು, ಹೆಚ್ಚು ಕಡಿಮೆ ಈ ಒಂದು ಫೈಲ್ ಮೇಲೆ ಇವರ ಜಲನವಲನದ ಬಗ್ಗೆ ಅವರಿಗೆ ಮಾಹಿತಿ ಇದ್ದ ಕಾರಣ ಇವತ್ತು ನಾನು ನೇರವಾಗಿ ಹೇಳುತ್ತಿದ್ದೇನೆ, it is his responsibility,

he should own ths responsibility and he should resign and appoint a Supreme Court Judge, ಒಂದು ಜ್ಯುಡಿಷಿಯರಿ ಏನಕ್ವೈರಿ ಆಗಲಿ. ಬೇರೆ ಹಿಂದಿನದು ಏನೂ ಬೇಕಾಗಿಲ್ಲ. ನಾವು ಕಂಟೆಂಪ್ಟ್ ಪಿಟೆಷನ್ ವಾಯಲೇಟ್ ಮಾಡಿ 2 ತಿಂಗಳು ಟೈಮ್ ಕೇಳಿ, ಆ 2 ತಿಂಗಳಲ್ಲಿ ಇಂಪ್ಲಿಮೆಂಟ್ ಮಾಡದೇ ಪುನಃ ಒಂದು ರಾಂಗ್ ಆರ್ಡರ್ ಇಷ್ಯೂ ಮಾಡಿ, ಪುನಃ ಅವರು ಹೋದಮೇಲೆ ಈ ರೀತಿಯಾಗಿ ಒಂದು ತಿಂಗಳು ಶಿಕ್ಷೆ ತೆಗದುಕೊಂಡು ಇವತ್ತು ಏನಾಗಿದೆ ಎಂದರೆ ನಾವು ಸರ್ಕಾರದ ಆಜ್ಞೆ ಪಾಲನೆ ಮಾಡಬೇಕೋ ಬೇಡವೋ ಅನ್ನತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿದೆ, ಅನೇಕ ಸಲ ಮಂತ್ರಿಗಳಾದವರು ಆಡಳಿತದಲ್ಲಿ, ಡೆಪ್ಯುಟಿ ಕಮೀಷನರ್ ಆಗಲೀ, ಡಿವಿಷನಲ್ ಕಮೀಷನರ್ ಆಗಲೀ, ಸೆಕ್ರೆಟರಿಗಳು ಆಗಲೀ, ಮಿನಿಸ್ಟರ್ ಆಗಲೀ ಟೆಲಿಫೋನನಲ್ಲಿ ಆರ್ಡರ್ ಕೊಡುತ್ತಾರೆ. ಏನು? ಇದನ್ನು ಇಂಪ್ಲಿಮೆಂಟ್ ಮಾಡಿ, ಇಂಥಹ ದುಡ್ಡು ರಿಲೀಸ್ ಮಾಡಿ ಅಥವಾ ಇಂಥಹ ಕೆಲಸ ಮಾಡಿ ಅಥವಾ ಇಂಥಾದ್ದನ್ನು ಸ್ಯಾಂಕ್ಷನ್ ಮಾಡಿ ಅನ್ನತಕ್ಕಂಥಾದ್ದನ್ನು ಹೇಳುತ್ತಾರೆ ಅನೇಕ ಸಾರಿ. ಆಮೇಲೆ ಇದನ್ನು ರೈಟಿಂಗನಲ್ಲಿ ಬರೆದ ಮೇಲೆ ಕನಫರಮೇಷನ್ ತೆಗೆದುಕೊಳ್ಳುತ್ತಾರೆ, ಒಂದು ತಿಂಗಳೋ, ಎರಡು ತಿಂಗಳೋ, ಮೂರು ತಿಂಗಳೋ ಆದಮೇಲೆ. ಇಂಥ ಪರಿಸ್ಥಿತಿ ಇರುತ್ತದೆ. ಏಕೆಂದರೆ ಒಂದು ಮನೆ ಸುಟ್ಟಿತ್ತು,..... ನ್ಯಾಚುರಲ್ ಕೆಲಾಮಿಟಿಯಲ್ಲಿ ಇಂಥವು ಎಷ್ಟೋ ಇರುತ್ತವೆ ಜನರಲ್ಲಾಗಿ. ಆಗ ಅಂಥಹ ಒಂದು ನ್ಯಾಚುರಲ್ ಕೆಲಾಮಿಟಿಯಲ್ಲೂ ಕೂಡ ಆಕ್ಟ್ ಮಾಡಲಾರದೇ ಇರತಕ್ಕಂಥ ಪರಿಸ್ಥಿತಿ ಇವತ್ತು ಉದ್ಭವಿಸಿದೆ. ಇವತ್ತು ಫ್ಲಡ್ ಬಂತು. ಯಾವುದೇ ಒಂದು ಇನ್ಸಸ್ಟಸ್ಸ ಕೊಟ್ಟರೆ ಒಬ್ಬ ಡಿ.ಸಿ. ಕೂಡ ಕೆಲಸ ಮಾಡುವುದಿಲ್ಲ, ಒಬ್ಬ ತಹಸೀಲ್ದಾರನೂ ಕೂಡ ಕೆಲಸ ಮಾಡುವುದಿಲ್ಲ. ಏನಪ್ಪಾ ಮಾಡುವುದು, ರೈಟಿಂಗನಲ್ಲಿ ಬರುವ ತನಕ ವೈಟ್ ಮಾಡೋಣ ಎಂದು ಹೇಳುತ್ತಾರೆ. ಏಕೆಂದರೆ ಇವರ ಇನಟೆನಷನ್ ಸರಿ ಇಲ್ಲ. ಒಂದು ವೇಳೆ ಮುಖ್ಯಮಂತ್ರಿಗಳವರ ಇನಟೆನಷನ್ ಸರಿ ಇದ್ದಿದ್ದರೆ, ಆ ಫೈಲನ್ನು ತರಿಸಿಕೊಂಡು, ಹೋಗಿ ಇಂಪ್ಲಿಮೆಂಟ್ ಮಾಡಿ ಎಂದು ಹೇಳುತ್ತಿದ್ದರು. ಅವರು ಇದನ್ನು ಇಡಬೇಕು ಅಂದರೆ ಇದರಲ್ಲಿ ಮೋಟೀವ್ ಇದೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. Intentionally he has delayed this file because of that delay that Secretary has gone to jail.

ಇಲ್ಲ ಅಂದರೆ ಇಲ್ಲಿ ಪ್ರಶ್ನೆಯೇ ಬರುತ್ತಿರಲಿಲ್ಲ. ನೀವು ಸುಮ್ಮನೆ ಇಂಪ್ಲಿಮೆಂಟ್ ಮಾಡಿದ್ದರೆ ಈ ಪ್ರಶ್ನೆ ಉದ್ಭವಿಸುತ್ತಿರಲಿಲ್ಲ. ಅದಕ್ಕಾಗಿ ಇದರ ಡೈರೆಕ್ಟ ರೆಸ್ಪಾನ್ಸಿಬಿಲಿಟಿ ನಿಮ್ಮ ಮೇಲೆ ಇದೆ. ಅದಕ್ಕೆ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇದನ್ನು ಸರ್ಕಾರದವರು ಒಪ್ಪಿಕೊಳ್ಳಬೇಕು ಇದಕ್ಕೆ ಒಂದು ಜ್ಯುಡಿಷಿಯಲ್ ಎನಕ್ವೈರಿ ಮಾಡಿಸಬೇಕು. ಸುಪ್ರೀಮ್ ಕೋರ್ಟ ಜಡ್ಜ ಅನ್ನು ಅಪಾಯಿಂಟ್ ಮಾಡಬೇಕು. till then the Chief Minister should resign. Deputy Chief Minister let him continue, we don't want to say anything about your Government as far as this act is concerned. ಅವರು ಇವತ್ತು ಈ ಪರಿಸ್ಥಿತಿಯನ್ನು ಕ್ರಿಯೇಟ್ ಮಾಡಿದ್ದಾರೆ. ಆಮೇಲೆ, ಇವತ್ತು ಸರ್ಕಾರಿ ನೌಕರರು ಎಷ್ಟು ಜನ ಇದ್ದಾರೆ ಕರ್ನಾಟಕ ರಾಜ್ಯದಲ್ಲಿ, ಅವರೆಲ್ಲರಿಗೂ ಕೂಡ ಒಂದು ಭಯ ಬಂದಿದೆ; ನಾವು ಆಡಳಿತ ನಡೆಸಬೇಕೋ, ಹೇಗೆ? ಒಬ್ಬರೂ ಕೂಡ ನಿಮ್ಮ ಮಾತು ಕೇಳುವುದಿಲ್ಲ.

ಎಂಟೈರ್ ಆಡ್ಮಿನಿಸ್ಟ್ರೇಷನ್ ಕೊಲ್ಯಾಪ್ಸ್ ಆಗಿದೆ. ಇವತ್ತು ಯಾರೂ ಕೂಡ ನಿಮ್ಮ ಮಾತು ಕೇಳುವುದಿಲ್ಲ. ಇಂಥಹ ಒಂದು ಪರಿಸ್ಥಿತಿಯಲ್ಲಿ ನೀವು ಹೇಗೆ ಕಂಟಿನ್ಯೂ ಮಾಡುತ್ತೀರಿ ಮತ್ತೆ. ಇಂಥಹ ಒಂದು ಸನ್ನಿವೇಶದಲ್ಲಿ ನೀವು ಕಂಟಿನ್ಯೂ ಮಾಡಿದರೆ, ಈಗ ಏನು ಮೊದಲೇ ಡೆವೆಲಪಮೆಂಟ್ ವರ್ಕ್ಸ್ ಇಲ್ಲ, ಯಾವ ಅಭಿವೃದ್ಧಿ ಕೆಲಸವೂ ಕೂಡ ನಡೆದಿಲ್ಲ. ಇನ್ನು ಮುಂದೆ ಇದೇ ಪರಿಸ್ಥಿತಿ ಉಳಿಯುತ್ತದೆ ಏತಕ್ಕೆಂದರೆ ಒಬ್ಬರೂ ಕೂಡ ನಡೆದಿಲ್ಲ. ಇನ್ನು ಮುಂದೆ ಇದೇ ಪರಿಸ್ಥಿತಿ ಉಳಿಯುತ್ತದೆ ಏತಕ್ಕೆಂದರೆ ಒಬ್ಬರೂ ಕೂಡ ನಿಮ್ಮ ಮಾತು ಕೇಳುವುದಿಲ್ಲ. ಜನರ ಕೆಲಸ ಆಗುವುದಿಲ್ಲ. ಕೊನೆಗೆ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಕೂಡ ಕ್ರಿಯೇಟ್ ಆಗುತ್ತದೆ. ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಏಕೆಂದರೆ ನಾಳೆ ಪೋಲೀಸಿನವರು ಇದೇ ರೀತಿಯಾಗಿ ಮಾಡುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಯಾರ ಕಾಲದಲ್ಲಿಯೂ ಅದು ಇಂಪ್ಲಿಮೆಂಟ್ ಆಗದೇ ಇರುವುದುಕ್ಕೆ ಮೂಲಭೂತವಾಗಿ ಮಲ್ಲಿಕಾರ್ಜುನ ಖರ್ಗೆಯವರು, ವೀರಪ್ಪಮೊಯಿಲಿಯವರು ಕಾರಣ. ಯಾರು ಕಾರಣರು ಎಂದು ಹೇಳದೇ ಹೋದರೆ, ಈ ರಾಜ್ಯದ ಜನಕ್ಕೆ ಗೊತ್ತಾಗಬೇಕಲ್ಲಾ!

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾರು ಅಂಡರಟೇಕಿಂಗ್ ತೆಗೆದುಕೊಂಡು ಬಂದಿದ್ದಾರೆ ಎಂಬುದು ಗೊತ್ತಾಗಲಿ.

(ಗೊಂದಲ)

ಅವರ ಗಮನಕ್ಕೆ ಬಂದಿಲ್ಲ ಎನ್ನತಕ್ಕಂಥಾದ್ದು ಸತ್ಯಕ್ಕೆ ದೂರವಾದಂಥ ಮಾತು.

12.00 ಪಿ.ಎಂ

ಕಂಟೆಂ ಆಫ್ ಕೋರ್ಟ್ ಬಗ್ಗೆ ಹೇಳಿರತಕ್ಕಂಥಾದ್ದು ಸತ್ಯಕ್ಕೆ ದೂರವಾದ ಮಾತು. ಈ ಎಲ್ಲಾ ದೃಷ್ಟಿಯಿಂದ ವಿಮರ್ಶೆ ಮಾಡಿ ನೋಡಿದರೆ ಇವತ್ತು ನೇರವಾಗಿ ಮುಖ್ಯಮಂತ್ರಿಗಳು ಇದರ ಹೊಣೆಯನ್ನು ಹೊತ್ತುಕೊಂಡು ಅವರು ಎನಕ್ವೈರಿ ರೆಡಿಯಾಗಬೇಕು. ಈ ಎನಕ್ವೈರಿ ಮುಕ್ತಾಯವಾಗುವವರೆಗೆ ಅವರು ರಾಜೀನಾಮೆ ಕೊಡಬೇಕು ಎಂದು ಹೇಳುತ್ತಾ ತಾವು ಇದನ್ನು ವಿವರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿ ತಮ್ಮನ್ನು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಅಧ್ಯಕ್ಷರೇ, ಇವತ್ತು ಇಡೀ ರಾಜ್ಯದ ಆಡಳಿತ ವ್ಯವಸ್ಥೆಗೆ ಒಂದು ಗ್ರಹಣ ಹಿಡಿದಿರುವಂಥ ಸಂದರ್ಭದಲ್ಲಿ ಇಂಗ್ಲೀಷಿನಲ್ಲಿ ಒಂದು ಮಾತು ಇದೆ. Pot calling the kettle black ಅಂತ. ಯಾವುದು pot, ಯಾವುದು kettle ಎಂಬುದು ಈ ವಿದ್ಯಾಮಾನವನ್ನು ನೋಡಿದರೆ ಗೊತ್ತಾಗುತ್ತದೆ. ಮನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಒಂದು ಕಾಲದಲ್ಲಿ ಇಲ್ಲಿನ ಅಧಿಕಾರಿಗಳ ಬಗ್ಗೆ ಎಲ್ಲಾ ಗೌರವದಿಂದ, ಇವರ ದಕ್ಷತೆ ಬಗ್ಗೆ ಆದರ ತೋರಿಸತಕ್ಕಂಥ ಕಾಲ ಇತ್ತು. ಎರಡು-ಮೂರು ವರ್ಷಗಳ ಹಿಂದೆ ನಮ್ಮರಾಜ್ಯದ ಹಿರಿಯ ಅಧಿಕಾರಿಗಳು ಕೆಲವರೇನು ದಕ್ಷರು ಇದ್ದರು, ಪ್ರಾಮಾಣಿಕರು ಇದ್ದರು, ಅವರು ಈ ರಾಜ್ಯದಿಂದ

ಕೇಡರ್ ಬದಲಾವಣೆ ಮಾಡಿ ಆಜೆ ಕಳುಹಿಸಿ ಎನ್ನುವ ಕಾಲವೂ ಒಂದಿತ್ತು. ಇದನ್ನು ಈ ಸಂದರ್ಭದಲ್ಲಿ ಜ್ಞಾಪಿಕದಲ್ಲಿಟ್ಟುಕೊಳ್ಳಬೇಕು. ಇವತ್ತು ಏನು ಘಟನೆ ನಡೆದಿದೆ, ಒಬ್ಬ ಪ್ರಾಮಾಣಿಕ ಅಧಿಕಾರಿ he is in jail, but the Government which is responsible for this is in the dock.

ಇಡೀ ರಾಜ್ಯದ ಇವತ್ತು ಸರ್ಕಾರದ ಅರ್ಹತೆಯನ್ನು ಹೇಳಿ ಸರ್ಕಾರವು ನಡೆಸತಕ್ಕಂಥ ಕ್ಷಮತೆಯನ್ನು ಪ್ರಶ್ನಿಸತಕ್ಕಂಥ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಇದರ ಹಿಂದೆ ಇವತ್ತು ವಾಸುದೇವನ್ ಎಂಬ ಒಬ್ಬ ವ್ಯಕ್ತಿಗೆ ಒಬ್ಬ ಪ್ರಾಮಾಣಿಕ, ದಕ್ಷ ಅಧಿಕಾರಿ ಎಂದು ಎಲ್ಲರಿಗೂ ಗೊತ್ತಿದೆ. ನಿನ್ನೆ ಹಿರಿಯರಾದ ಮಾನ್ಯ ದೇಶಪಾಂಡೆಯವರು ಅವರ ಪ್ರಮಾಣಿಕತೆ ಬಗ್ಗೆ ಜೈಲಿನಲ್ಲಿ ಮಾತನಾಡಿದರು ಎಂದು ನಾನು ಕೇಳಿದ್ದೇನೆ. ಹೀಗೆ ಇರುವಾಗ ಇಡೀ ರಾಜ್ಯದ ಅಧಿಕಾರಿಗಳಿಗೆ ಒಂದು ಎಚ್ಚರಿಕೆಯೂ ಇದರಲ್ಲಿ ಇದೆ. Please do not crawl when you are asked to bend. ಯಾರು ಮಂತ್ರಿಗಳು ಹೇಳುತ್ತಾರೆ ಎಂಬ ಪ್ರತೀತಿ ಇದೆ, ಬ್ಯುರೋಕ್ರಸಿಗೆ when they are asked to bend they crawl, ಅಂತ ಅವರ ಒಂದು ಪರಿಸ್ಥಿತಿ ಇವತ್ತು ಬಂದಿದೆ. ಇವತ್ತು ಶ್ಯಾಮಸುಂದರ್ ಅಂತ ಪ್ರಿನ್ಸಿಪಲ್ ಚೀಫ್ ಕನ್ಸರವೇಟರ್ ಆಫ್ ಫಾರೆಸ್ಟ ಒಂದು ಪತ್ರವನ್ನು ಇಂಡಿಯನ್ ಎಕ್ಸಪ್ರೆಸ್‌ನಲ್ಲಿ ಬರೆದಿದ್ದಾರೆ. My friend Vasu, ಅಂತ ಶುರುಮಾಡಿ ವಾಸುದೇವನ್ ಬಗ್ಗೆ ಬಹಳ ಪ್ರಮುಖ ಅಂಶ, ವಾಸುದೇವನಗೆ ಅವರು ಒಂದು ಸಲಹೆ ಹೇಳಿದರಂತೆ. 'ಬೇಡಪ್ಪ, ನೀನು ಒಂದಲ್ಲ ಒಂದು ದಿವಸ ಕಷ್ಟಕ್ಕೆ ಸಿಕ್ಕಿಕೊಳ್ತಿಯಾ' ಅಂತ. ``Look here Vasu, would it be safer to get the Minister's signature for your work?" His answer always used to be.

"Sham, when we are doing something which will benefit the State and the Country and our people we don't need an armour." ಅಂತ ಹೇಳಿದರು. ವಾಸುದೇವನ್‌ಗೆ ಜನಹಿತ ಕೆಲಸ ಮಾಡುವುದೇ ಒಂದು ಹವ್ಯಾಸ. ರಾಜ್ಯದ ಹಿತ ನೋಡುವುದೇ ಅವರ ಒಂದು ಅಭ್ಯಾಸ. ಇದು ಅವರ ಹ್ಯಾಬಿಟ್. ಅವರು ಹೇಳಿದರು-

" We are doing something which will benefit the State and the Country and our people we don't need an armour." ಅಂತ. ಮುಂದೆ ಅವರು ಹೇಳುತ್ತಾರೆ,

"Vasu going to jail proves that all bureaucrats need to be well armoured."

ಇಂದಿನ ವ್ಯವಸ್ಥೆಯಲ್ಲಿ ಅವರಿಗೆ ಈಗಿನ ರಕ್ಷಣೆ ಸರಿಯಲ್ಲವೆಂದು ಕೂಡ ಅವರು ಹೇಳುತ್ತಾರೆ. ಇದೇ ಹಿನ್ನೆಲೆಯಲ್ಲಿ ನಾನು ಹೇಳಬಯಸುವುದು ಏನೆಂದರೆ, ಕೆಲವು ದಿವಸಗಳ ಹಿಂದೆ ಇಲ್ಲಿ ಒಂದು ಪ್ರೈವೇಟ್ ಬಗ್ಗೆ ಭಾರಿ ವಿವಾದವಾಯಿತು. ನಾನು ಅವತ್ತೇ ಹೇಳಿದ್ದೆ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ

"It is instructed that if any oral instructions are issued either from this Office or from the Minister's Office the same shall be..."

ಈ ಒರಲ್ ಇನ್‌ಸ್ಟ್ರಕ್ಷನ್ಸ್, ಟೆಲಿಫೋನ್ ಇನ್‌ಸ್ಟ್ರಕ್ಷನ್ಸ್ ಬಗ್ಗೆ ಏನಿದೆ, ಇದರ ಪ್ರಭಾವದಿಂದ ಇವತ್ತು ಈ ಸ್ಥಿತಿಗೆ ನಾವು ಬಂದುಬಿಟ್ಟಿದ್ದೇವೆ. ಯಾವುದೇ ಒಬ್ಬ ಅಧಿಕಾರಿಗೆ ನ್ಯಾಯಬದ್ಧವಾಗಿ, ರಾಜ್ಯಾಂಗಬದ್ಧವಾಗಿ, ಕ್ರಮಬದ್ಧವಾಗಿ ಏನು ಒಂದು ಪೋಸ್ಟ್ ಸಿಗಬೇಕಿತ್ತು, ಅಡಿಶನಲ್ ಚೀಫ್ ಇಂಜಿನಿಯರ್ ಪೋಸ್ಟ್. ಇದು ಅವರಿಗೆ ಪ್ರಾಮಾಣಿಕರಾಗಿ, ರಾಜ್ಯಾಂಗಬದ್ಧವಾಗಿ ಸಿಗಬೇಕಿತ್ತು ಅದನ್ನು ಪಡೆಯುವುದಕ್ಕೋಸ್ಕರ ಕಳೆದ ಹದಿನಾರು ವರ್ಷಗಳಿಂದ ನಗರಪಾಲಿಕೆಯಲ್ಲಿ, ಸರ್ಕಾರದಲ್ಲಿ, ಹೈಕೋರ್ಟಿನಲ್ಲಿ, ಸುಪ್ರೀಂ ಕೋರ್ಟಿನಲ್ಲಿ ಅಲೆದಾಡಿ ಇವತ್ತು ಒಬ್ಬ ಕಾರ್ಯದರ್ಶಿಯನ್ನು ಜೈಲಿಗೆ ಕಳುಹಿಸಿಬಿಟ್ಟು ಆ ಪೋಸ್ಟನ್ನು ತೆಗೆದುಕೊಳ್ಳುವ ದುಸ್ಥಿತಿಗೆ ನಾವು ಬಂದುಬಿಟ್ಟಿದ್ದೇವೆ. ನೀವು ಹೇಳುತ್ತೀರಿ ಯಾರದ್ದೋ ಉದ್ಧಾರ ಮಾಡುತ್ತೇವೆ ಎಂದು. ನಿಮಗೆ ಇವರ ಓಟು ಬೇಕು, ಆದರೆ ಇವರಿಗೆ ಪೋಸ್ಟನ್ನು ನೀವು ಕೊಡುವುದಿಲ್ಲ. ಇದು ವಿಚಿತ್ರವಾದಂಥ ಪರಿಸ್ಥಿತಿ. ಸನ್ಮಾನ್ಯ ಅಧ್ಯಕ್ಷರೇ, ಇದು successive Government's conspiracy, ಅಂತ ಹೇಳಿದರೆ ತಪ್ಪಾಗಲಾರದು. ನನಗಿಂತ ಮುಂಚೆ ಮಾತನಾಡಿರತಕ್ಕಂಥವರು ನಿಮ್ಮ ಸರ್ಕಾರದಲ್ಲಿ ಮೂರು ತಿಂಗಳಿಂದ ಏನು ಆಗಬೇಕಿತ್ತು ಅದನ್ನು ಮಾಡಲಿಲ್ಲವೆಂದು ಒಳ್ಳೆಯ ಅಭಿಪ್ರಾಯವನ್ನು ಹೇಳಿದ್ದಾರೆ. ಆದರೆ 11.10.93ರಲ್ಲಿ ಅಂದಿನ ವಸತಿ ಸಚಿವರು ಶ್ರೀ ಗೋಪಿನಾಥ ಸಾಂಡ್ರಾರವರು ಅಂದಿನ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿಯವರಿಗೆ ಒಂದು ಪತ್ರ ಬರೆದರು.

"ಶ್ರೀಮಾನ್ ಟಿ.ಆರ್. ಧನಂಜಯ, ಸೂಪರಿಂಟೆಂಡಿಂಗ್ ಇಂಜಿನಿಯರ್, ಬೆಂಗಳೂರು ಮಹಾನಗರ ಪಾಲಿಕೆ, ಇವರನ್ನು ಅನೇಕ ವರ್ಷಗಳಿಂದ ಪ್ರಮೋಷನ್ ನೀಡದೆ, ಅವರಿಗೆ ನ್ಯಾಯವಾಗಿ ಸಿಗುವ ಹಕ್ಕನ್ನು ಕೊಡದೇ ಇರುವ ವಿಚಾರದ ಬಗ್ಗೆ ಒಂದು ವರ್ಷ ಹಿಂದೆ ತಾವು ಮುಖ್ಯಮಂತ್ರಿಗಳು ಆದೊಡನೆ ಅವರಿಗೆ ಆದ ಅನ್ಯಾಯದ ಬಗ್ಗೆ ತಮಗೆ ಪತ್ರ ಮುಖಾಂತರ ತಿಳಿಸಿದ್ದೆ. ತಾವೂ ಸಹ ಸೂಕ್ತ ಆದೇಶವನ್ನು ಹೊರಡಿಸಿದ್ದೀರಿ. ಆದರೂ ಕೂಡ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಈ ಅನ್ಯಾಯವನ್ನು ಸರಿಪಡಿಸಬೇಕು. ಆದರೆ ವಸತಿ ನಗರಾಭಿವೃದ್ಧಿ ಇಲಾಖೆಯವರು, ಮಹಾನಗರಪಾಲಿಕೆಯವರು ಇದಕ್ಕೆ ಮನ್ನಣೆ ಕೊಡದಿದ್ದ ಕಾರಣ ಹೈಕೋರ್ಟ್, ಸುಪ್ರೀಂ ಕೋರ್ಟಿಗೆ ಧನಂಜಯ ಅವರು ಹೋಗಬೇಕಾಯಿತು. ಈ ಎರಡೂ ನ್ಯಾಯಾಲಯಗಳಲ್ಲಿ ಅವರಿಗೆ ಪ್ರಮೋಷನ್ ಕೊಡಬೇಕು ಎಂದು ಆದೇಶ ನೀಡಲಾಗಿದೆ. ಈ ಆದೇಶವನ್ನು ಧಿಕ್ಕರಿಸಿ ಕಡತವನ್ನು ಆ ಕಡೆಯಿಂದ ಈ ಕಡೆಗೆ, ಈ ಕಡೆಯಿಂದ ಆ ಕಡೆಗೆ, ಕಳುಹಿಸುತ್ತಿದ್ದಾರೆ. ಧನಂಜಯ ಅವರು ಕಂಟೆಂಪ್ಟ್ ಆಫ್ ಕೋರ್ಟಿಗಾಗಿ ಮೊರೆಹೋದಾಗ ನ್ಯಾಯಾಲಯದವರು ಮತ್ತೊಮ್ಮೆ ಅರ್ಜಿದಾರರ ಪರವಾಗಿ ಆದೇಶವನ್ನು ನೀಡಿದ್ದಾರೆ. ಇದು ಪತ್ರ ಬರೆದಿರುವುದು 11.10.93ರಂದು. ಇದಾದಮೇಲೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿಯವರು 12.10.93ರಲ್ಲಿ ಮಾನ್ಯ ಸಾಂಡ್ರಾರವರಿಗೆ ಬರೆಯುತ್ತಾರೆ - ಮಾನ್ಯ ಸಾಂಡ್ರಾರವರಿಗೆ, ವಂದನೆಗಳು' ಬೆಂಗಳೂರು ನಗರಪಾಲಿಕೆಯ ಸೂಪರಿಂಟೆಂಡೆಂಟ್ ಇಂಜಿನಿಯರ್ ಟಿ.ಆರ್. ಧನಂಜಯ ಅವರಿಗೆ ಬಡ್ತಿ ನೀಡುವ ಬಗ್ಗೆ ಸುಪ್ರೀಂ ಕೋರ್ಟಿನ ಆದೇಶವನ್ನು ಅನುಷ್ಠಾನಗೊಳಿಸಲು ಕೋರಿ 11.10.93ರಂದು ಬರೆದ ಪತ್ರ ತಲುಪಿದೆ. ಈ ವಿಷಯವನ್ನು ಕೂಡಲೇ ಪರಿಶೀಲಿಸಿ ವರದಿ ಕೊಡಲು ನಾನು ಸೂಚನೆ ನೀಡಿದ್ದೇನೆ. - ಎಂದು 12.10.93ಕ್ಕೆ ಬರೆಯುತ್ತಾರೆ. ಇವತ್ತು We are

in 1995. 93ನೇ ಅಕ್ಟೋಬರ್‌ನಿಂದ ನವೆಂಬರ್ 94ರವರೆಗೆ ಅವರದ್ದೇ ಸರ್ಕಾರ ಇತ್ತು. ಏಕೆ ಅವರು ಕ್ರಮವನ್ನು ತೆಗೆದುಕೊಳ್ಳಲಿಲ್ಲ? ಒಬ್ಬ ಕಾರ್ಯದರ್ಶಿಯನ್ನು ಜೈಲಿಗೆ ಕಳುಹಿಸುವುದು ಇವರ ಪಾಲಿಗೆ ಬರಬೇಕು ಎಂದು ಏಕೆ ಪ್ರಯತ್ನಪಟ್ಟರು? ಈ ಪಾಪದ ಕೂಸು ಎರಡೂ ಸರ್ಕಾರಕ್ಕೆ ಸೇರುತ್ತದೆ. ಅವರಿಗೆ ವರ್ಷಗಳು ಇದ್ದವು. ಇವರಿಗೆ ಕ್ರೂಷಿಯಲ್ ತಿಂಗಳುಗಳು ಇದ್ದವು. ಆದರೂ ಕೂಡ ಈ ಕೆಲಸವನ್ನು ಮಾಡದೆ ಮೊನ್ನೆ 25.8.95ರಂದು ರಾತ್ರಿ, ಈ ರಾತ್ರಿ ಕೆಲಸ ಅಂತಾರಲ್ಲಾ, ಹಾಗೆ ಅಂದು ರಾತ್ರಿ ಒಂದು ಪೋಸ್ಟ್‌ನ್ನು ಅವರಿಗೆ ಅಂದರೆ ಶ್ರೀ ಧನಂಜಯಗೆ ಕೊಟ್ಟರು

ಸನ್ಮಾನ್ಯ ಅಧ್ಯಕ್ಷರೇ, ಯಾವುದೇ ಪಕ್ಷ ಆಡಳಿತ ಮಾಡುವಾಗ ಸ್ವಜನಪಕ್ಷಪಾತ ಮಾಡುವುದಕ್ಕೆ ಹೋದಾಗ ಇಂತಹ ದುರಂತಗಳು ಆಗುತ್ತವೆ. ಇದಕ್ಕೆ ಇವರೇ ಕಾರಣ. ಯಾರ ಸರ್ಕಾರ ಬರುತ್ತದೆ, ಯಾವ ಕಾರ್ಪೊರೇಷನಗೆ ಆದೇಶ ಕಳುಹಿಸುತ್ತಾರೆ, ಇಂತಿಂಥ ರೆಸಲ್ಯೂಷನ್ ಮಾಡಿ ಎಂದು ಹೇಳಿ, ಅದನ್ನು ಇಂಪ್ಲಿಮೆಂಟ್ ಮಾಡಿ ಗೂಬೆಯನ್ನು ಕಾರ್ಯದರ್ಶಿಗಳ ಮೇಲೆ ಕೂಡಿಸಿ ಅವರನ್ನು ಬಲಿಪಶುವಾಗಿ ಮಾಡುತ್ತಿರುವುದು, ಈ ವಾಸುದೇವನ್ ಮೇಲೆ ನನಗೆ ಪ್ರಾಯಶಃ ವೈಯಕ್ತಿಕವಾಗಿ ಅನ್ನಿಸುವುದು ಹೀಗೆ. ಶ್ರೀ ವಾಸುದೇವನ್ ಅವರಿಗೆ ಇಡೀ ರಾಜ್ಯದ ಸಿಂಪತಿ ಇದೆ. ಒಂದು ತಿಂಗಳು ಜೈಲಿಗೆ ಹೋಗಿ ಅವರಿಗೇನೂ ಆಗುವುದಿಲ್ಲ. But it is the State that suffers; it is the State's image that has suffered; it is the sincere officers who are feeling.

ಈ ಒಂದು ಹಿನ್ನೆಲೆಯಲ್ಲಿ ಮೊನ್ನೆ ನಂಜೇಗೌಡರು ಹೇಳುತ್ತಿದ್ದರು. ಇದು ನಾವು ನಡೆಸುತ್ತಿರುವುದು ಮಿನಿಸ್ಟರಿಯಲ್ ರೆಸ್ಪಾನ್ಸಿಬಿಲಿಟಿಯ ಒಂದು ಆಡಳಿತ. Anybody cannot escape. ಯಾರೆ ಮೇಲೋ ಹಾಕಿಬಿಟ್ಟು ಇವರು ನಿಜವಾಗಿ ಕೂಡ ಮರ್ಸಿ ಪಿಟಿಷನ್ ಹಾಕುವ ಬದಲು ನಮ್ಮ ಹೆಚ್.ಯು.ಡಿ. ಮಂತ್ರಿಗಳು, ಬೆಂಗಳೂರು ಅಭಿವೃದ್ಧಿ ಸಚಿವರು ಅಥವಾ ಸನ್ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ನಾನು ನೈತಿಕವಾಗಿ ಕಾರಣ ಇದ್ದೇನೆ, ನನ್ನ ಮೇಲೆ ಶಿಕ್ಷೆ ಕೊಡಿ ಎಂದು ಅವರು ಸುಪ್ರೀಂ ಕೋರ್ಟಿಗೆ ಹೋಗಿದ್ದರೆ ಇವತ್ತು ಅವರಿಗೆ ಅರ್ಹತೆ ಇರುತ್ತಿತ್ತು, ಗೌರವ ಬರುತ್ತಿತ್ತು. ಆದರೆ ಒಬ್ಬರು ಮಂತ್ರಿಗಳು ಡೆಲ್ಲಿಗೆ ಹೋಗಿ ಹೇಳುತ್ತಾರೆ. ನೀವೇನೂ ಯೋಚನೆ ಮಾಡಬೇಡಿ. We are behind you ಅಂತ. We are behind you in pushing you behind the bars.

ಏತಕ್ಕಾಗಿ ಈ ಕೆಲಸ ಮಾಡುವುದಕ್ಕೆ ಹೋದರು? ದಿನಾಂಕ : 10.5.95ರಲ್ಲಿ ಒಂದು ಅಂಡರ್ ಟೇಕಿಂಗ್ ಕೊಟ್ಟರು. ನಾವು ಇಂಪ್ಲಿಮೆಂಟ್ ಮಾಡುತ್ತೇವೆ ಎಂದು. ನಿಜವಾಗಿಯೂ ಇವರಿಗೆ ಅನಿಸಿದ್ದರೆ, ಧನಂಜಯ ಅವರಿಗೆ ಕಾನೂನು ಪ್ರಕಾರ ಕೊಡುವುದಕ್ಕೆ ಬರುವುದಿಲ್ಲವೆಂದು ಕೋರ್ಟಿನಲ್ಲಿ ಕೊಡಬಹುದಿತ್ತು. ಅಂಡರ್ ಟೇಕಿಂಗ್ ಕೊಟ್ಟಮೇಲೂ ಕೂಡ ಈ ಮೂರು ತಿಂಗಳು ಏಕೆ ಇವರು ಕೆಲಸ ಮಾಡಲಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಖರ್ಗೆಯವರು ಯಾವ ಪತ್ರವನ್ನು ಉಲ್ಲೇಖ ಮಾಡಿದರೋ ಆ ಪತ್ರದ ಒಂದು ಅಂಶವನ್ನು ಸದನದ ಗಮನಕ್ಕೆ ತರಲು ಇಷ್ಟ ಪಡುತ್ತೇನೆ. ಇದು 10.8.95ರ ಪತ್ರ. ಇನ್ನೂ ಕೂಡ ಇದಕ್ಕೆ ಜೀವ ಇತ್ತು, ವಾಸುದೇವನ್ ಉಳಿಸುವುದಕ್ಕೆ. ಅವರು ಹೇಳುತ್ತಾರೆ, ಮೇಲ್ಕಂಡ ಎಲ್ಲಾ ಅಂಶಗಳನ್ನೂ ಗಮನಿಸಿದ್ದೇನೆ. ಬೆಂಗಳೂರು ಬೆಳೆಯುತ್ತಿದೆ, ತುಂಬಾ

ಕೆಲಸ ಇದೆ, ಬೇಕಾದಷ್ಟು ಯೋಜನೆಗಳು ಮಂಜೂರಾಗಬೇಕಾಗಿವೆ, ವಿಸ್ತೀರ್ಣ ಜಾಸ್ತಿಯಾಗುತ್ತಿದೆ. ಇವೆಲ್ಲಾ ವರದಿ ಕೊಟ್ಟಮೇಲೆಯೂ ಅವರು ಹೇಳುತ್ತಾರೆ. ಮೇಲ್ಕಂಡ ಎಲ್ಲಾ ವಿಷಯಗಳನ್ನು ಗಮನಿಸಿದರೆ, ಹಾಲಿ ಇರುವ ಇಬ್ಬರು ಮುಖ್ಯ ಅಭಿಯಂತರು ಎಲ್ಲಾ ಕೆಲಸಗಳನ್ನು ನಿರ್ವಹಿಸಲು ಕಷ್ಟಸಾಧ್ಯವಾಗಿ, ಸಾರ್ವಜನಿಕರ ಕುಂದುಕೊರತೆಗಳು ಜಾಸ್ತಿಯಾಗಿ, ಸಾರ್ವಜನಿಕರು ಕಷ್ಟ ಅನುಭವಿಸಬೇಕಾಗುತ್ತಿದೆ. ಅಂದರೆ, ಈಗ ಇಬ್ಬರು ಚೀಫ್ ಇಂಜಿನಿಯರ್ ಇದ್ದಾರೆ, ಕಷ್ಟವಾಗುತ್ತಿದೆ ಎಂದು ಹೇಳಿದರು. ಅವರು ಮುಂದೆ ಹೇಳುತ್ತಾರೆ. ಆದ್ದರಿಂದ ಇವೆಲ್ಲವನ್ನೂ ತಾವು ಗಮನದಲ್ಲಿಟ್ಟುಕೊಂಡು, ಬೆಂಗಳೂರು ಮಹಾನಗರ ಪಾಲಿಕೆಯಲ್ಲು 29.4.94ರಂದು ಮಾಡಿರುವ ನಿರ್ಣಯ ತೆಗೆದುಕೊಂಡು, ಒಂದು ಇಂಜಿನಿಯರ್ ಇನ್ ಚೀಫ್ ಹುದ್ದೆಯನ್ನು ನಿರ್ಮಿಸುವುದು. ಅವರು ಚೀಫ್ ಇಂಜಿನಿಯರ್ ಎಂದು ಹೇಳಲಿಲ್ಲ. ಆ ಹುದ್ದೆಯನ್ನು ಪಿ.ಡಬ್ಲ್ಯು.ಡಿ. ಇಲಾಖೆಯಿಂದ ತುಂಬುವುದು. ಕಾರ್ಪೊರೇಷನ್ ಹೇಗೆಂದರೆ, ಇಬ್ಬರು ಚೀಫ್ ಇಂಜಿನಿಯರ್ ಇದ್ದಾರೆ. ಒಬ್ಬರನ್ನು ಡೆಪ್ಯೂಟೇಷನ್ ಮೇಲೆ ತರುತ್ತಾರೆ, ಇನ್ನೊಬ್ಬರು ಕಾರ್ಪೊರೇಷನನಲ್ಲಿ ಪ್ರಮೋಷನ್ ಆಗುತ್ತಾರೆ. ಡೆಪ್ಯುಟೇಷನ್ ಮೇಲೆ ತರುವಂತಾದ್ದು ಏನಿದೆ, ಅದನ್ನು ರದ್ದುಗೊಳಿಸಿ, ಅದನ್ನು ಇಂಜಿನಿಯರ್ ಇನ್ ಚೀಫ್ ಎಂದು ಮಾಡಿ, ಈ ಡೆಪ್ಯುಟೇಷನನಿಂದ ಬರತಕ್ಕ ಸೀಟನ್ನೂ ಕೂಡ ಕಾರ್ಪೊರೇಷನ್‌ನಿಂದ ಭರ್ತಿ ಮಾಡಿ ಎಂದು ಹೇಳಿದರು. ಇದರ ಜೊತೆಗೆ, ಇನ್ನೊಂದು ಮುಖ್ಯ ಅವರು ಆಗಿಬಿಡುತ್ತಾರೆ, ಮಾಡಲೇಬೇಕು. ಜೊತೆಗೆ, ಇನ್ನೊಬ್ಬರನ್ನು ಮಾಡೋಣವೆಂಬ ಪ್ರಯತ್ನವೂ ಆಯಿತು. ಅಂದರೆ, On 10.8.95 when our Hon'ble colleagues they gave a letter to the Chief Minister, they made the Chief Minister know the facts that ಧನಂಜಯ ಅವರಿಗೆ ಚೀಫ್ ಇಂಜಿನಿಯರ್ ಹುದ್ದೆ ಕೊಡಬೇಕೆಂದು ಮನದಟ್ಟು ಮಾಡಿದರು. ಏತಕ್ಕೆ ಇದುವರೆಗೆ ಮಾಡಲಿಲ್ಲ. ಒಂದು ಚೀಫ್ ಇಂಜಿನಿಯರ್ ಪೋಸ್ಟ ಕ್ರಿಯೇಟ್ ಏತಕ್ಕೆ ಇದುವರೆಗೆ ಮಾಡಲಿಲ್ಲ. ಒಂದು ಚೀಫ್ ಪೋಸ್ಟ ಕ್ರಿಯೇಟ್ ಮಾಡುವುದಕ್ಕೆ ಮುಂಚೆ, ನಮ್ಮ ಸದಸ್ಯರು ಕಾರ್ಪೊರೇಷನನಲ್ಲಿ ಏಕೆ ಮಾಡಲಿಲ್ಲ? ಈ ಹಂತದಲ್ಲಿ ನನಗನಿಸುತ್ತದೆ, ಈ ದೇಶದಲ್ಲಿ ಒಂದು ಸಿವಿಲ್ ರೈಟ್ಸ್ ಆಕ್ಟ್ ಇದೆ. ಈ ಸಿವಿಲ್ ರೈಟ್ಸ್ ಏನೆಂದು ನಮಗೆಲ್ಲರಿಗೂ ತಿಳಿದಿದೆ. ಈ ಸಿವಿಲ್ ರೈಟ್ಸ ಆಕ್ಟ ಪ್ರಕಾರ, ಯಾರೇ ವ್ಯಕ್ತಿ ಅಥವಾ ಯಾವುದೇ ಅಧಿಕಾರಿ.....

ಉಪಾಧ್ಯಕ್ಷರು : ಪ್ರಿಲಿಮಿನರಿ ಸಬ್‌ಮಿಷನ್ ಮಾಡುವಾಗ, ಡೀಟೈಲ್ಸಗೆ ಹೋಗಬೇಡಿ.

ಶ್ರೀ ಎಸ್. ಸುರೇಶ್ ಕುಮಾರ್ : ಒಬ್ಬ ಹರಿಜನವ್ಯಕ್ತಿಗೆ ಕೊಡಬೇಕಾದ ಸವಲತ್ತನ್ನು ನಿರಾಕರಿಸಿದರೆ ಆಕ್ಟ ಪ್ರಕಾರದ ಕ್ರಮ ತೆಗೆದುಕೊಳ್ಳಬಹುದು, ಅವರನ್ನು PCR Act ಪ್ರಕಾರವ ಪ್ರಾಸಿಕ್ಯೂಟ್ ಮಾಡಬಹುದು. Mr. Deputy Speaker Sir, I have not yielded.

ಶ್ರೀ ಸಿ. ಬೈರೇಗೌಡ : ಪ್ರಿಲಿಮಿನರಿ ಸಬ್‌ಮಿಷನ್ ಆಗಿ, ತಾವು ಇದಕ್ಕೆ ಒಪ್ಪಿಗೆ ಕೊಟ್ಟಮೇಲೆ ವಿವರವಾಗಿ ಚರ್ಚೆಯಾಗಲಿ. ಪ್ರಿಲಿಮಿನರಿಯಾಗ ತಮ್ಮ ಮನಸ್ಸನ್ನು ಒಲಿಸುವುದಕ್ಕೆ ಹೇಳಬೇಕಾಗಿರುವಷ್ಟು ಸೀಮಿತಗೊಳಿಬೇಕು. ಅದು ಬಿಟ್ಟು, ಪ್ರತಿಯೊಂದು ವಿವರವಾಗಿ ಹೇಳುತ್ತಾ ಹೋದರೆ, ಅಲ್ಲಿಗೆ ತಾವು

ಸಂಪೂರ್ಣವಾದ ಚರ್ಚೆಗೆ ಒಪ್ಪಿಗೆ ಕೊಟ್ಟಿದ್ದೀರೋ ಅಥವಾ ತಮ್ಮ ಮನಸ್ಸನ್ನು ಒಲಿಸತಕ್ಕ ಕೆಲಸವಾಗುತ್ತಿದೆಯೋ ದಯಮಾಡಿ ನಮಗೆ ತಿಳಿಸಿದರೆ ಒಳ್ಳೆಯದು. ಏಕೆಂದರೆ, ನಾವು ಮೂಕಪ್ರೇಕ್ಷಕರಾಗಿ ಕುಳಿತು ಕೇಳಬೇಕಾಗಿದೆ. ದಯಮಾಡಿ, ಇಂಥಾದ್ದನ್ನು ನಮಗೆ ತಂದೊಡ್ಡಬೇಡಿ ಎಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಆ ಕಂಡೀಷನ್ ಮೇಲೆಯೇ ಮಾತನಾಡುತ್ತಿದ್ದೇನೆ. ಒಬ್ಬ ಪ್ರಾಮಾಣಿಕ ಅಧಿಕಾರಿ, ಒಳಗೆ ಹೋಗಿ, ಇಡೀ ರಾಜ್ಯದ ಆಡಳಿತ ವರ್ಗ ಮೂಕಪ್ರೇಕ್ಷಕರಾಗಿ ನೋಡುತ್ತಿದೆ. ನಾನು ಕೊನೆಗೆ ಒಂದು ಮಾತು ಹೇಳುತ್ತೇನೆ. ಈ ವಿಷಯ ಇತ್ಯರ್ಥವಾಗುವವರೆಗೆ, ಮುಖ್ಯಮಂತ್ರಿಗಳು ಹಾಲಿ ಬೆಂಗಳೂರು ನಗರದ ವಿಚಾರಗಳನ್ನೂ ನೋಡಿ ಕೊಳ್ಳುತ್ತಿದ್ದಾರೆ. ಅದಕ್ಕೋಸ್ಕರ, ಬೆಂಗಳೂರು ಅಭಿವೃದ್ಧಿಗೇ ಒಬ್ಬರು ಸಚಿವರನ್ನು ತಂದಿದ್ದೇವೆ. ಬೆಂಗಳೂರು ಅಭಿವೃದ್ಧಿಗೋಸ್ಕರ ಒಬ್ಬರು ಮಂತ್ರಿಗಳನ್ನು ಮಾಡಿದ್ದಾರೆ. ಇಷ್ಟೆಲ್ಲಾ ಇದ್ದರೂ ಕೂಡ ಈ ರೀತಿ ಘೋರ ಅನ್ಯಾಯವಾಗುವುದಕ್ಕೆ ಕಾರಣೀಭೂತರಾದ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸಚಿವರು ಕೂಡಲೇ, ಇದು ಇತ್ಯರ್ಥವಾಗುವವರೆಗೂ ರಾಜಿನಾಮೆ ಕೊಡಬೇಕು. ಜೈಲಿಗಂತೂ ಹೋಗಲಿಲ್ಲ, ನಾನು ಹೋಗುತ್ತೇನೆಂಬ ಧೈರ್ಯವನ್ನೂ ಮಾಡಲಿಲ್ಲ. ಕೊನೇ ಪಕ್ಷ ಇದು ಇತ್ಯರ್ಥವಾಗುವವರೆಗೆ ರಾಜಿನಾಮೆ ಕೊಡಬೇಕು. ನಾನು ಹೇಳಿದೆ, ಸಿವಿಲ್ ಪ್ರೊಟೆಕ್ಷನ್ ಆಕ್ಟ್ ವಿರುದ್ಧ, ಸರ್ಕಾರದ ವಿರುದ್ಧ, ಪ್ರಾಸಿಕ್ಯೂಟ್ ಮಾಡುವ ಅವಕಾಶ, ಒಂದು ಸನ್ನಿವೇಶ ಇವತ್ತು ಬಂದಿದೆ. ಆದುದರಿಂದ, ಈ ನಿಲುವಳಿ ಸೂಚನೆಯನ್ನು ಮಂಡಿಸುತ್ತಾ, ಯಾವುದೇ ರೀತಿಯಿಂದ ಈ ಸರ್ಕಾರಕ್ಕೆ, ಈ ರಾಜ್ಯದಲ್ಲಿ ತನ್ನ ಅಧಿಕಾರಿಗಳಿಗೆ ರಕ್ಷಣೆ ಕೊಡುವುದಕ್ಕಾಗದೇ ಇರುವುದರಿಂದ, ಈ ಸರ್ಕಾರ ಮುಂದುವರಿಯಲು ನೈತಿಕ ಹಕ್ಕಿಲ್ಲವೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ ಆರ್. ವಾಸುದೇವನ್‌ರವರ ಪ್ರಕರಣ ಒಂದು ಘಟ್ಟ ಮುಗಿದಿದೆ. ವಾಸುದೇವನ್‌ರವರ ನ್ಯಾಯಾಲಯ ನಿಂದನೆಯಿಂದ ಒಂದು ತಿಂಗಳು ಜೈಲು ಶಿಕ್ಷೆ. ಅದರಿಂದ ಬಿಡುಗಡೆ ಮಾಡಿಸಬೇಕೆಂದು ರಾಜ್ಯದ ಮುಖ್ಯಮಂತ್ರಿಗಳು, ತಮ್ಮ 40 ವರ್ಷದ ಸಾರ್ವಜನಿಕ ಜೀವನ ಎಂದೇನು ಹೇಳುತ್ತಾರೆ, ಆ ಜೀವನದಲ್ಲೂ ಇಷ್ಟು ಕಷ್ಟಪಡಲಿಲ್ಲವೆಂದು ಕಾಣುತ್ತದೆ. ನನಗನಿಸುತ್ತದೆ, ಅವರು ಡೆಲ್ಲಿಯಲ್ಲಿ ಕುಳಿತುಕೊಂಡು ನಡೆಸಿದಂಥ ಕಾರ್ಯಭಾರವನ್ನು ನೋಡಿದಾಗ, ಈ ರಾಜ್ಯವನ್ನು ಮರೆತಿದ್ದಾರೆ, ಶಾಸನ ಸಭೆಯನ್ನು ಮರೆತಿದ್ದಾರೆ, ರಾಜ್ಯದ ಜನರನ್ನು ಮರೆತಿದ್ದಾರೆ. ಒಂದೇಒಂದು ದೃಷ್ಟಿ, ಅಧಿಕಾರಿಯೊಬ್ಬರಿಗೆ ಈ ರೀತಿ ಶಿಕ್ಷೆಯಾಗಿದೆ, ಈ ಶಿಕ್ಷೆಯಿಂದ ಪಾರು ಮಾಡುವುದು ಹೇಗೆ ಎನ್ನತಕ್ಕ ದೃಷ್ಟಿಯಿಂದ ಸತತವಾಗಿ ತಮ್ಮ ಶಕ್ತಿಮೀರಿ, ಏನೇನು ಪ್ರಯತ್ನಗಳಾಗಬೇಕು, ಆ ಪ್ರಯತ್ನಗಳನ್ನೆಲ್ಲಾ ಮಾಡುವುದಕ್ಕೆ ಹೊರಟಿದ್ದಾರೆ. ಆದರೆ, ಅವರು ಆ ಪ್ರಯತ್ನದಲ್ಲಿ ಸಫಲರಾಗಲಿಲ್ಲ, ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಇದು ಒಂದು ಘಟ್ಟ ಮುಟ್ಟಿದೆ. ಏಕೆ ಇಷ್ಟೆಲ್ಲಾ ಪ್ರಯತ್ನಪಡುತ್ತಿದ್ದಾರೆ ಎನ್ನತಕ್ಕಂಥ ಪ್ರಶ್ನೆಯನ್ನು ಹಾಕಿಕೊಂಡಾಗ, ಯಾವ ಅಧಿಕಾರಿಯ ಮೇಲೆ ಶಿಕ್ಷೆ ಆಗಿದೆ, ಆ ಅಧಿಕಾರಿ, ವ್ಯಕ್ತಿಯನ್ನು ತೆಗೆದುಕೊಂಡಾಗ, ಒಬ್ಬ ಒಳ್ಳೆಯ ಅಧಿಕಾರಿ ಎನ್ನುವ

ಬಗ್ಗೆ ಕರುಣೆ, ಇಷ್ಟಕ್ಕೆ ನಾವು ನಿಲ್ಲಬೇಕು. ಆದರೆ, ಸುಪ್ರೀಂಕೋರ್ಟ್, ಸರ್ವೋಚ್ಛ ನ್ಯಾಯಾಲಯ ಕೊಟ್ಟಿರತಕ್ಕ ಶಿಕ್ಷೆ ಸರಿಯೇ ಅಲ್ಲವೇ ಎನ್ನತಕ್ಕ ಪ್ರಶ್ನೆಯನ್ನು ನಾವು ಮಾಡುವುದಕ್ಕಾಗುವುದಿಲ್ಲ. ಈಗಾಗಲೇ ನಾನು ಪ್ರಾರಂಭದಲ್ಲಿ, ಆ ಸಂದರ್ಭ ಬಂದಾಗ, ಇದನ್ನು ಸದನದಲ್ಲಿ ಕೇಳಿದಾಗ, ಮನವಿಯನ್ನು ಸಲ್ಲಿಸಬೇಕು, ನಮ್ಮ ಮನವಿ ಯಾವ ರೂಪದಲ್ಲಾದರೂ ರಾಷ್ಟ್ರಪತಿಯವರಿಗೆ ಆಗಬಹುದು ಅಥವಾ ಸರ್ವೋಚ್ಛ ನ್ಯಾಯಾಲಯವಾಗಬಹುದು. ಆ ಮನವಿಯಿಂದ ಅನುಕೂಲವಾದರೂ ಆಗಬಹುದು ಎನ್ನತಕ್ಕಂದತಾದ್ದು. ನಾವು ತಕ್ಷಣವಾಗಿ, ತರಾತುರಿಯಲ್ಲಿ, ಶಿಕ್ಷೆ ಖಾಯಂ ಎಂದು ಬಂದಾಗ, ಈ ಸದನದಲ್ಲಿ ಒಂದು ರೀತಿಯ ಗಂಭೀರ ವಾತಾವರಣ ನಿರ್ಮಾಣವಾಯಿತು. ಮತ್ತೆ ಆ ಶಿಕ್ಷೆಯನ್ನು ಜಾರಿಗೊಳಿಸುವುದಕ್ಕಿಂತ ಮುಂಚೆಯೇ ಅವರು ಜೈಲಿಗೆ ಹೋಗಿದ್ದಾರೆ. ಇದು ಒಂದು. ಮತ್ತೊಂದು, ಮುಖ್ಯಮಂತ್ರಿಗಳು ಡೆಲ್ಲಿಗೆ ಹೋಗಿ, ಪುನರ್ ಪರಿಶೀಲನಾ ಅರ್ಜಿಯನ್ನು ಹಾಕಿ, ಆ ಪುನರ್ ಪರಿಶೀಲನಾ ಅರ್ಜಿಯೂ ತಿರಸ್ಕೃತವಾಗಿದೆ. ಅಲ್ಲಿಗೆ ಒಂದು ತಿಂಗಳು ಶಿಕ್ಷೆ ಖಾಯಂ ಎನ್ನುವುದು ನಿರ್ವಿವಾದ. ಅದಕ್ಕೆ ಪರದೆ, ತೆರೆ ಬಿದ್ದಿದೆ. ಮುಂದೆ ಏನು ಎನ್ನುವುದು ಅತ್ಯಂತ ಮಹತ್ತರವಾದ ಪ್ರಶ್ನೆ.

ಒಬ್ಬ ಅಧಿಕಾರಿಗೆ ಈ ರೀತಿ ಶಿಕ್ಷೆ ಸರ್ವೋಚ್ಚ ನ್ಯಾಯಾಲಯ ಕೊಟ್ಟಿರತಕ್ಕಂಥಾದ್ದು ದೇಶದ ಇತಿಹಾಸದಲ್ಲೇ ಮೊದಲೇನೋ ಎನ್ನತಕ್ಕಂಥಾದ್ದು ನನ್ನ ಮನವರಿಕೆ. ಯಾರಿಗಾದರೂ ಈ ಹಿಂದೆ ಆಗಿದೆಯೋ ಏನೋ ಅದು ನನಗೆ ಗೊತ್ತಿಲ್ಲ ಇದು ನನ್ನ ಮನವರಿಕೆ. ಒಂದು ರೀತಿಯಲ್ಲಿ ನಮ್ಮ ಈ ಅಧಿಕಾರಿಯನ್ನು ನೋಡಿದಾಗ ಬಹಳಕರುಣೆ, ಪ್ರೀತಿ ವಿಶ್ವಾಸ ಈ ರೀತಿ ಆಗಬಾರದಾಗಿತ್ತಲ್ಲಾ ಎನ್ನತಕ್ಕಂಥಾದ್ದು ಒಂದು ಕಡೆ. ಮತ್ತೊಂದು ಕಡೆ ಈ ಶಿಕ್ಷೆ ಆಗಬೇಕಾದರೆ ಕಾರಣ ಏನು? ಈ ಶಿಕ್ಷೆ ಐ.ಎ.ಎಸ್. ಅಧಿಕಾರಿಯೊಬ್ಬರಿಗೆ ಆಗಬೇಕಾದರೆ ಕಾರಣ ಏನು ಎನ್ನತಕ್ಕಂಥಾದ್ದು ಅತಿ ಮುಖ್ಯ ನಮಗೆ. ಆ ಕಾರಣಗಳ ಬಗ್ಗೆ ಇಲ್ಲಿ ಸಮಗ್ರವಾಗಿ ಚರ್ಚೆ ಆಗಬೇಕು. ಆ ಕಾರಣಗಳಿಗೆ ಆಗಿರತಕ್ಕಂಥ ಸರ್ಕಾರದ ಪತ್ರ ವ್ಯವಹಾರಗಳು. ಮತ್ತು ನಿಂದನಾ ಅರ್ಜಿಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಹಾಕತಕ್ಕಂಥ ಪರಿಸ್ಥಿತಿ. ಆ ಸಂದರ್ಭದಲ್ಲಿ ಇದ್ದಂತಹ ಸರ್ಕಾರಗಳು ನಡೆದುಕೊಂಡಂತಹ ರೀತಿನೀತಿಗಳು ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಆಗಬೇಕು. ಈ ಚರ್ಚೆಗೆ ಯಾರು ಕೂಡತಕ್ಕಂಥವು. ತಾವು ಉತ್ತರ ಕೊಡತಕ್ಕಂಥ ತಯಾರಿ ಇದ್ದರೆ ನಿಮ್ಮ ಉತ್ತರ ಕೊಟ್ಟ ನಂತರ ಮತ್ತೇ ನಾವು ಚರ್ಚೆ ಮಾಡುತ್ತೇವೆ. ನೀವು ಇವತ್ತು ಉತ್ತರ ಕೊಡಲೇಬೇಕು. ನಾವಂತು ನಿಮ್ಮ ಉತ್ತರವನ್ನು ನಿರೀಕ್ಷೆ ಮಾಡಿಯೇ ನೋಡುತ್ತಿರುವುದು. ಉತ್ತರ ಕೊಡುವುದು ಬಿಡುವುದು ನಿಮಗೆ ಸೇರಿದ್ದು. ನಿಮಗೆ ಉತ್ತರ ಕೊಡುವುದಕ್ಕೆ ನಾವು ಸಹಾಯಕರಾಗಿದ್ದೇವೆ. ನಮ್ಮಲ್ಲಿ ಉತ್ತರ ಕೊಡುವುದಕ್ಕೆ ಯಾರೂ ಇಲ್ಲ. ನಮ್ಮ ಕೈಯಲ್ಲಿ ಆಗುವುದೇ ಇಲ್ಲ.

ಶ್ರೀ ಜೆ.ಎಚ್. ಪಟೇಲ್ : ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ ನಾನು ಮೊದಲೇ ಹೇಳಿದೆ ಚರ್ಚೆ ಮಾಡುವುದನ್ನೇ ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಚರ್ಚೆ ಮಾಡಿದರೆ ಅದು ಒಂದು ಅರ್ಥಪೂರ್ಣವಾಗುತ್ತದೆ. ತಮಗೆ ಉತ್ತರ ಕೊಡಬೇಕಾದರೆ ಅವರು ಬರಲೇಬೇಕು. ಮನ್ಯ

ಅಧ್ಯಕ್ಷರೇ, ಅವರಿಗೆ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳು ಬಂದು ಕೊಡಬೇಕೇ ವಿನಹಃ ಸರ್ಕಾರದ ಪರವಾಗಿ ಬೇರೆ ಯಾರೂ ಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ನನಗೆ ಒಂದು ಅರ್ಥವಾಯಿತು. ಮಂತ್ರಿಗಳು ಉತ್ತರ ಕೊಡುವುದಕ್ಕೆ ಯಾರೂ ಸಮರ್ಥರಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಸಮರ್ಥರಲ್ಲ ಎನ್ನುವ ಪ್ರಶ್ನೆ ಬರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಕೊಡಬೇಕಾಗುತ್ತದೆ. ಅವರೇ ಹೇಳಿದಹಾಗೆ ಮಾನ್ಯ ಮುಖ್ಯಮಂತ್ರಿಗಳು ಕಳೆದ 6-7 ದಿವಸಗಳಿಂದ ಏನೇನು ಪ್ರಯತ್ನಮಾಡಿದ್ದಾರೆ ಏನಾಗಿದೆ ಎನ್ನುವ ಸತ್ಯಸಂಗತಿ ಎಲ್ಲಾ ಅವರಿಗೆ ಗೊತ್ತಿದೆ. ಅವರೇ ಹೇಳಿದ ಹಾಗಗೆ ಆ ಇಲಾಖೆಯನ್ನು ಅವರು ಹ್ಯಾಂಡಲ್ ಮಾಡಿದ್ದಾರೆ. ಆದ್ದರಿಂದ ಏನೇನು ಆಗಿದೆ ಎಂದು ಅವರು ಹೇಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, 7-8 ದಿವಸದದಿಂದ ಇದೇ ರೀತಿಯಲ್ಲಿ ಆದರೆ ಹೇಗೆ ಸಾಧ್ಯ ತಾವೇ ಹೇಳಿ. ಎಲ್ಲಿಯಾದರೂ ಈ ರೀತಿ ಆಗಿದೆಯೇ? ಈ ದೇಶದಲ್ಲಿ ಮುಖ್ಯಮಂತ್ರಿಗಳು ಸದನ ನಡೆಯುವಾಗ 6-7 ದಿವಸ ಮುಖ್ಯಮಂತ್ರಿಗಳು ಇರಲಿಲ್ಲ ಅಂದರೆ ಮತ್ತೆ ನಡೆಸುವುದು ಹೇಗೆ?

ಶ್ರೀ ಜೆ.ಎಚ್. ಪಟೇಲ್ : ಮಾನ್ಯ ಉಪಾಧ್ಯಕ್ಷರೇ, ಸರ್ಕಾರದ ಜವಾಬ್ದಾರಿ ಏನು ಇದೆ ಅದನ್ನು ನಾವು ನಿಭಾಯಿಸುತ್ತಿದ್ದೇವೆ. ಬೇರೆ ವಿಷಯಗಳಲ್ಲಿ, ನಾನು ಹೇಳುತ್ತಿರುವುದು ಪರ್ಟಿಕ್ಯುಲರ್ ಆಗಿ ಈ ವಿಷಯದಲ್ಲಿ ಅಂತಿಮವಾಗಿ ಅವರ ಅಭಿಪ್ರಾಯವೇ ಬೇಕು. ಬೇರೆ ವಿಷಯ ಆದರೆ ನಾವು ಹೇಳುತ್ತೇವೆ. ತಾವು ಮಾನ್ಯ ಸದಸ್ಯರುಗಳು ನೋಡಿದ್ದೀರಿ. ಬೇರೆ ಯಾವುದಾದರೂ ವಿಷಯಗಳು ಬಂದಾಗ ನಾವು ಸಮಯ ಕೇಳಿದ್ದೇವೆಯೇ? ಕೇಳಿಲ್ಲ. ಅದು ಯಾವುದೇ ಡಿಪಾರ್ಟ್‌ಮೆಂಟ್ ಇರಲಿ ಉತ್ತರ ಕೊಟ್ಟಿದ್ದೇವೆ. ಅದು ಬಿಟ್ಟು ಮಾನ್ಯ ಉಪಾಧ್ಯಕ್ಷರೇ ತಾವು ತಪ್ಪು ತಿಳಿದುಕೊಳ್ಳಬಾರದು. ಈ ಸದನದ ಸಮಯವನ್ನು ಕರ್ನಾಟಕ ರಾಜ್ಯದ ಇಂತಹ ಒಂದು ಪವಿತ್ರ ಸದನದ ಸಮಯವನ್ನು ಬರೀ ಧರಣೆ ಕುಳಿತೇ ವಾಕ್‌ಔಟ್ ಮಾಡಿದೆ ಇದೇನು ಇದು.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಮಾಡುವುದು ನೋಡಿದರೆ ನಿಜವಾಗಿಯಾ ಧರಣೆಗೋಸ್ಕರವೇ, ಮತ್ತೆ 8 ದಿವಸ ಏಕೆ ಹೋಗಿ ಅಲ್ಲಿ ಕುಳಿತಿರಿ, ನೀವು ಮಾಡುವುದು ಮಾಡುತ್ತೀರಿ ಧರಣೆ ಕೂಡುತ್ತಾರೆ ಅಂದರೆ ಹೇಗೆ? ನಾವು ಎಲ್ಲಾ ವಿಚಾರಗಳಲ್ಲಿ ಕೋ-ಆಪರೇಟ್ ಮಾಡುತ್ತಿದ್ದೇವೆ. ನೀವು ಕೇಳಿದಂತೆ ಬಿಜಿನೆಸ್ ಪಾಸ್ ಮಾಡಿಕೊಟ್ಟಿದ್ದೇವೆ. ಒಮ್ಮೆಲೇ 27 ಡಿಮ್ಯಾಂಡಗಳನ್ನು ಪಾಸ್ ಮಾಡಿಕೊಂಡಿರಿ

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ನಾನು ಒಂದು ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ಇಡೀ ನಮ್ಮ ರಾಷ್ಟ್ರದ ಆಡಳಿತ ವ್ಯವಸ್ಥೆಯಲ್ಲಿ ಇಂತಹ ಘಟನೆ ಆಗಿರತಕ್ಕಂಥಾದ್ದು ಅದರಲ್ಲೂ ಕರ್ನಾಟಕ ರಾಜ್ಯದಲ್ಲಿ ಆಗಿರತಕ್ಕಂಥಾದ್ದು ಇದು ಮೊದಲಸೇ ಭಾರಿ.

ಸದನ ನಡೆಯುತ್ತಿದೆ ಒಬ್ಬ ಅಧಿಕಾರಿ ಸರ್ಕಾರದ ತಪ್ಪಿನಿಂದಾಗಿ ಏಕೆಂದರೆ ನಮ್ಮ ಅಡ್ಮಿನಿಸ್ಟ್ರೇಟೀವ್ ಸಿಸ್ಟಂನಲ್ಲಿಯಾವುದೇ ಕೋರ್ಟ್ ವ್ಯವಹಾರದಲ್ಲಿ ಮಂತ್ರಿಗಳನ್ನು ಪಾರ್ಟಿ ಮಾಡುವುದಕ್ಕೆ ಆಗುವುದಿಲ್ಲ. ಚೀಫ್ ಸೆಕ್ರೆಟರಿಯನ್ನು ಮಾಡಬೇಕು ಇಲ್ಲಾ ಅಂದರೆ, ಇಲಾಖೆಯನ್ನು ಮಾಡಬೇಕು. ಇದು administrative systemನಲ್ಲಿರುವ ವ್ಯವಸ್ಥೆ. In the administrative system that has been an accepted philosophy; otherwise, somebody else would have gone. ಇವತ್ತು ಅಂತಹವರು ಒಬ್ಬರು ಜೈಲಿಗೆ ನೆನ್ನೆಯ ದಿವಸ ಹೋಗಿದ್ದಾರೆ. ಸದನ ಇವತ್ತು ನಡೆಯುತ್ತಿದೆ. ಬಹುಶಃ ಇದಕ್ಕಿಂತ ಪ್ರಮುಖವಾದ ವಿಚಾರ ಬೇರೆ ಇರುವುದಕ್ಕೆ ಸಾಧ್ಯವೇ ಇಲ್ಲ. ಯಾವುದೇ ಪಕ್ಷ ಬಂದರೂ ಅಧಿಕಾರಿಗಳು ಮತ್ತು ಮಂತ್ರಿಗಳು ಸಾಮರಸ್ಯದಿಂದ ಕೆಲಸ ಮಾಡಬೇಕು. ಆದ್ದರಿಂದ ಮುಖ್ಯಮಂತ್ರಿಗಳು ಇವತ್ತು ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು.....

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಇವತ್ತು 10.30 ಗಂಟೆಗೆ ಸುಪ್ರೀಂ ಕೋರ್ಟ ಎದುರಿಗೆ ಈ ರಿವ್ಯೂ ಪಿಟಿಷನ್ ಇತ್ತು. The Revision Petition was presented by the Government of Karnataka and not by any person. ಇವತ್ತು ಇತ್ತು.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳತಕ್ಕಂಥ ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮೊದಲು ಮಾಡಬೇಕಾಗಿತ್ತು. ಅದು ನನಗೆ ಇರತಕ್ಕಂಥ ಆತಂಕ. ಮೊದಲು ಆದಂತಹ ಘಟನೆಯನ್ನು ಸದನಕ್ಕೆ ಬಂದು ವಿವರಿಸಿ ಹೇಳಿ ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದಾರೆ ಬಹುಶಃ ಈ ಒಂದು ಪರಿಸ್ಥಿತಿಯನ್ನು ನಿಬಾಯಿಸಬಹುದಾಗಿತ್ತೋ ಏನೋ ಆದ್ದರಿಂದ ಮುಖ್ಯಮಂತ್ರಿಗಳು ಇರಲೇಬೇಕು ಎಂದು ಹೇಳತಕ್ಕಂಥಾದ್ದು ಅವರು ಇರಲೇಬೇಕು, ಇದು ಚರ್ಚೆ ಆಗಲೇಬೇಕು ಅದರಲ್ಲಿ ಬಿನ್ನಾಭಿಪ್ರಾಯ ಇಲ್ಲ. ಆದ್ದರಿಂದ ನಾವು ಮಾಡುವಂತಹ ಚರ್ಚೆಯನ್ನು ಮುಂದುವರಿಸುವುದಕ್ಕೆ ಆಗುವುದಿಲ್ಲ. ಇವತ್ತು ಇದನ್ನು ರಾಜ್ಯದ ಜನ ನೋಡುತ್ತಿದ್ದಾರೆ.

+ ಶ್ರೀ ಬಿ. ಮುನಿಯಪ್ಪ (ಗಾಂಧಿನಗರ) : ಮಾನ್ಯ ಅಧ್ಯಕ್ಷರೇ, ಇವತ್ತು ತಾವು ಇಲ್ಲಿ ಏನು ಮಾತನಾಡುವುದಕ್ಕೆ ಅವಕಾಶ ಕೊಡುತ್ತಿದ್ದೀರಿ ಉತ್ತರ ಕೊಡುವಂತಾದ್ದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇವರ ಹತ್ತಿರ ಏಷ್ಟೋ ದಾಖಲೆಗಳು ಆಧಾರಗಳು ಇಲ್ಲ. ಉತ್ತರ ಇಲ್ಲದೇ ಇರುವಂತಹ ಸಂದರ್ಭದಲ್ಲಿ ತಾವು ಎಷ್ಟು ಹೊತ್ತು ಮಾತನಾಡಿದರೂ ಏನು ಪ್ರಯೋಜನ? ಈಗಾಗಲೇ ಏನಾಗಿದೆ ಒಬ್ಬರು ಈ ಮುಖ್ಯಮಂತ್ರಿಗಳು ಪಕ್ಷಪಾತ ಮಾಡಿದ್ದಾರೆ. ಅವರಿಗೆ ಬೇಕಾದವರನ್ನು ಹಾಕಿಕೊಳ್ಳುವುದಕ್ಕೆ ತಡೆ ಹಿಡಿದರು ಎಂದು ಮಾತನಾಡಿದ್ದನ್ನು ನಾವು ಕೇಳಿದೆವು. ನಮಗೆ ಗೊತ್ತಿಲ್ಲ ನಾವು ಹೊಸಬರು. ಈಗ ನಮ್ಮ ಸುರೇಶ್ ಕುಮಾರರವರು ಮಾತನಾಡುವಾಗ 93ನೇ ಇಸವಿಯಲ್ಲಿದ್ದಂತಹ ಕಥೆಗಳನ್ನು ಹೇಳುತ್ತಿದ್ದಾರೆ. ಆವತ್ತಿನ ಮುಖ್ಯಮಂತ್ರಿಗಳು ಯಾರಿಗೋಸ್ಕರ ಇದನ್ನು ತಡೆಹಿಡಿದರು. ಅದನ್ನು ನಮಗೆ ಹೇಳಬೇಕಾಗಿದೆ. ಅವೆಲ್ಲ ನಮಗೆ ಈಗ ಬೇಕಾಗಿದೆ. ಅದ್ದರಿಂದ ನಾವು ಈ ಸದನಕ್ಕೆ ಬರೀ ಮಾತನಾಡಿಕೊಂಡು ಕೇಳಿಕೊಂಡು ಹೋಗುವುದಕ್ಕೆ ಬಂದಿಲ್ಲ. ಸರ್ಕಾರ ಉತ್ತರ ಕೊಡುವ ಪರಿಸ್ಥಿತಿಯಲ್ಲಿ ಇದ್ದಾರೆ ತಾವು ಮಾತನಾಡುವುದಕ್ಕೆ ಅಲೋ ಮಾಡಿ. ಇಲದಿದ್ದರೆ ವ್ಯರ್ಥ ಅಲ್ಲವೇ ಇದು.

ಶ್ರೀ ಕಾಗೋಡು ತಿಮ್ಮಪ್ಪ : ಅವರ ಅನುಕೂಲಕೋಸ್ಕರ ನಮ್ಮ ಚರ್ಚೆಯನ್ನು ಮುಂದುವರಿಸುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನನ್ನದೊಂದು ಕ್ರಿಯಾಲೋಪ. ನಾವು ರೂಲ್ 60ರ ಕೆಳಗೆ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಅದನ್ನು ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವುದಕ್ಕೋಸ್ಕರ ನಾವು ತಮ್ಮ ಮನಸ್ಸನ್ನು ಒಲಿಸುವುದಕೋಸ್ಕರ ಇದನ್ನು ಮಾಡುತ್ತಿದ್ದೇವೆ. ತಾವು ಪರ್ಮಿಷನ್ ಕೊಟ್ಟ ಮೇಲೆ ಪುನಃ ಚರ್ಚೆ ಆದ ಮೇಲೆ ಅವರು ಉತ್ತರ ಕೊಡುವುದು. ಮುಂದೆ ಏನಾಗುತ್ತದೆ. ನೋಡೋಣ, ತಮ್ಮ ಮನಸ್ಸು ಒಲಿಸುವುದಕೋಸ್ಕರ ಇದೆಲ್ಲಾ ಪ್ರಯತ್ನ. ಅಲ್ಲಿಯವರೆಗೂ ಮುಖ್ಯಮಂತ್ರಿಗಳು ಬರಬಹುದು, ಅವರಿಗೆ ಒಂದು ಉತ್ಸಾಹ ಬರಬಹುದು ನಾನೇ ಉತ್ತರ ಹೇಳೋಣ ಅಂತ. ಮುಂದೆ ಏನಾಗುತ್ತದೆ ಅಂತನೋಡೋಣ.

ಶ್ರೀ ಬಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೇ, ಏನಾಗಿದೆ ಅಂದ್ರೆ, ಅವರು ಒಬ್ಬ ಒಳ್ಳೆಯ ಅಧಿಕಾರಿ ಅವರನ್ನು ಈ ಸರ್ಕಾರ ಜೈಲಿಗೆ ದಬ್ಬಿಬಿಟ್ಟಿತು ಎಂದು ಹೇಳಿ ಅನುಕಂಪ ತೋರಿಸುತ್ತಿದ್ದೇವೆ ಎಲ್ಲರೂ. ಅದೇ ಬಾಯಿಗಳು ಕೇಳುತ್ತವೆ ಮುಖ್ಯಮಂತ್ರಿಗಳು 5 ದಿವಸದಿಂದ ಎಲ್ಲಿ ಹೋಗಿದ್ದಾರೆ ಅಂತಲೂ ಕೇಳುತ್ತಾರೆ. ಇದು ಯಾವ ನ್ಯಾಯ? ಮಾನ್ಯ ಮುಖ್ಯಮಂತ್ರಿಗಳು ಒಳ್ಳೆಯ ಅಧಿಕಾರಿಗಯೊಬ್ಬರನ್ನು ಕಾಪಾಡುವ ದೃಷ್ಟಿಯಿಂದ ಅಲೆಯುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಒಳ್ಳೆಯ ಅಧಿಕಾರವನ್ನು ಕಾಪಾಡಲಿಕ್ಕೆ ಅಲ್ಲ; only to kill it ಎಂದೂ ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಬಿ. ಮುನಿಯಪ್ಪ : ಹೊಸ ಸರ್ಕಾರ ಬಂದಿದೆ ಅವರು ತಪ್ಪು ಮಾಡಿದರೂ ತಪ್ಪೇ ಆದರೆ 1993ರಲ್ಲಿ ಗೋಪಿನಾಥ ಸಾಂದ್ರಾರವರಿಗೆ ಅಂದಿನ ಮುಖ್ಯಮಂತ್ರಿಗಳು ಪತ್ರ ಬರೆದಾಗ ಏಕೆ ಜಾರಿಗೆ ತರಲಿಲ್ಲ? ಅದನ್ನು ಹೇಳಬೇಕು ಇವತ್ತು.

(ಗೊಂದಲ)

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ನಿಯಮ 69ರ ಅಡಿಯಲ್ಲಿ ನಿಲುವಳಿ ಸೂಚನೆಯಲ್ಲಿ ಏನು ಇದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಲು ಪ್ರಯತ್ನ ಮಾಡುತ್ತೇನೆ. ಇದರಲ್ಲಿ ಸರ್ಕಾರ ಉತ್ತರ ಕೊಡುವಂತಹ ಸ್ಟೇಜ್ ಇದು ಅಲ್ಲವೇ ಅಲ್ಲ. ಈಗ ಇರತಕ್ಕಂಥಾದ್ದು ನಿಲುವಳಿ ಸೂಚನೆ ಪ್ರಕಾರ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ. ಈ ನಿಲುವಳಿ ಸೂಚನೆಯಲ್ಲಿ ಬರುತ್ತದೆಯೋ ಇಲ್ಲವೋ ಎಂದು ಅವರು ಪ್ರಿಲಿಮಿನರಿ ಸಬಮಿಷನ್ ಮಾಡುತ್ತಾರೆ. ತಾವು ಅದನ್ನು ಅಡ್ಮಿಟ್ ಮಾಡಿಕೊಂಡು ಚರ್ಚೆಗೆ ತೆಗೆದುಕೊಂಡಗ ಸರ್ಕಾರದ ಉತ್ತರ ಬರುವುದು. ಈ ಸ್ಟೇಜಿನಲ್ಲಿ ಏನೂ ಉತ್ತರ ಇಲ್ಲವೇ ಇಲ್ಲ. ಅವರು ನಾವು ಪರಸ್ಪರ ವಿಚಾರ ತಿಳಿದುಕೊಳುವುದಕೆ, ಒಂದು ಹೇಳಬಹುದು. ಸರ್ಕಾರದ ಕಡೆಯಿಂದ ಈ ಸ್ಟೇಜಿನಲ್ಲಿ ಉತ್ತರ

ಬರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಈಗ ಉತ್ತರ ಹೇಳುವುದಕ್ಕೆ ಬರುವುದಿಲ್ಲ. ಅದ್ದರಿಂದ ತಾವು ಪ್ರಿಲಿಮಿನರಿ ಸಬಮಿಷನಗೆ ಎಷ್ಟು ಬೇಕೋ ಅಷ್ಟುನೋಡಿ ರೂಲಿಂಗ್ ಕೊಟ್ಟರೆ ಒಳ್ಳೆಯದು. At this stage, it is not between the Government and the member. The preliminary submission now is only between the Chair and the Member.

12.30 ಪಿ.ಎಂ

ಶ್ರೀ ವಾಟಾಳ್ ನಾಗರಾಜ್ : ಸ್ವಾಮಿ, ನಿಲುವಳಿ ಸೂಚನೆಗೆ ಅವಕಾಶ ಕೊಡಬೇಕಾದರೆ, ಸದನದ ಎಲ್ಲಾ ಕಲಾಪಗಳನ್ನು ರದ್ದುಗೊಳಿಸಿ ನಿಲುವಳಿ ಸೂಚನೆಗೆ ಪ್ರಥಮ ಆಧ್ಯತೆ ಕೊಟ್ಟು ಚರ್ಚೆಯಾಗಬೇಕು. ಆದರೆ, ಈಗ ಉಪ ಮುಖ್ಯ ಮಂತ್ರಿಗಳು, ನಮ್ಮಲ್ಲಿ ಯಾರೂ ಇದಕ್ಕೆ ಉತ್ತರ ಕೊಡುವುದಕ್ಕೆ ಶಕ್ತರಲ್ಲ ಎನ್ನುವ ರೀತಿಯಲ್ಲಿ ಹೇಳಿದ್ದಾರೆ

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ನಾವು ಆ ರೀತಿ ಹೇಳಿಲ್ಲ. ಸರಿಯಾದ ಮತ್ತು ಅರ್ಥಪೂರ್ಣ ಉತ್ತರ ಕೊಡಬೇಕಾದರೆ ಮುಖ್ಯಮಂತ್ರಿಗಳು ಬರಬೇಕೆಂದು ಮಾತ್ರ ಹೇಳಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರ್ಕಾರದ ಅಬ್ಜಕ್ಷನ್ ಇಲ್ಲವೆಂದಮೇಲೆ ಆಟೋಮೆಟಿಕ್ ಆಗಿ ಚರ್ಚೆಗೆ ಅವಕಾಶ ಕೊಟ್ಟ ಹಾಗೆಯೇ.

ಶ್ರೀ ಎಂ.ಪಿ. ಪ್ರಕಾಶ್ : ಇದರ ಬಗ್ಗೆ ಅಧ್ಯಕ್ಷರ ಮನ ಒಲಿಸುವಾಗ ಅದರ ಅರ್ಹ ಮತ್ತು ಅನರ್ಹತೆ ವಿಷಯಗಳನ್ನು ಪ್ರಸ್ತಾಪ ಮಾಡತಕ್ಕಂಥಾದ್ದು ಸಾಧುವಲ್ಲ. ಇದರ ಆಗತ್ಯತೆ ಬಗ್ಗೆ ಮಾತ್ರ ಪ್ರಶ್ನೆ ಮಾಡಬಹುದೇ ವಿನಹ ಬೇರೆ ವಿಚಾರಗಳನ್ನು ಇಲ್ಲಿ ಎತ್ತಕ್ಕಂಥಾದ್ದು ಕೂಡ ಸಾಧುವಾದುದಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಮುಖ್ಯ ಮಂತ್ರಿಗಳು ಅವರ ಇಚ್ಛೆ ಬಂದ ಕಡೆ ಹೋದಾಗ ಅವರ ಹಿಂದೆ ಸದನ ಹೋಗುವುದಕ್ಕಾಗುವುದಿಲ್ಲ. ಮುಖ್ಯಮಂತ್ರಿಗಳು ಈ ಸದನದ ನಾಯಕರೇ ಹೊರತು ಬೇರೆ ಅಲ್ಲ. ಈ ಸದನ ಸರ್ವೋಚ್ಛ. ಮುಖ್ಯಮಂತ್ರಿಗಳು ಇಲ್ಲಿ ಇರಬೇಕೇ ಹೊರತು, ಅವರು ದೆಹಲಿಯಲ್ಲಿ ಕುಳಿತಿರುವುದರಿಂದ ಅವರು ಬರುವವರೆಗೂ ನಾವು ಸದನಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲವೆಂದು ಅವರು ಏನು ಹೇಳಿದ್ದಾರೋ ಅದೂ ಕೂಡ ಈ ಸದನಕ್ಕೆ ಅಗೌರವ ಮಾಡಿದ ಹಾಗಾಗುತ್ತದೆ. ಸರ್ಕಾರದ ಪರವಾಗಿ ನಾವು ಜವಾಬ್ದಾರಿಯಿಂದ ಉತ್ತರ ಕೊಡುತ್ತೇವೆಂದು ಅವರು ಹೇಳಬೇಕು. ಮುಖ್ಯಮಂತ್ರಿಗಳು ಬರುವವರೆಗೂ ಉತ್ತರ ಕೊಡುವುದಿಲ್ಲವೆಂದಾದರೆ, ಮಂತ್ರಿ ಮಂಡಲ ಇಲ್ಲ ಎನ್ನುವ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಮಾನ್ಯ ನಾಗೇಗೌಡರು ಪ್ರಸ್ತಾಪ ಮಾಡಿದಂತೆ ಈಗ ಉತ್ತರ ಕೊಡುವಂಥ ಸನ್ನಿಹಿತ ಬಂದಿಲ್ಲ. ಈ ಚರ್ಚೆ ಅರ್ಥಪೂರ್ಣ ಮತ್ತು ಫಲಕಾರಿಯಾಗಬೇಕಾದರೆ ಮುಖ್ಯ ಮಂತ್ರಿಗಳು ಮಾತ್ರ ಉತ್ತರ ಕೊಟ್ಟರೆ ಸರಿ ಎನ್ನುವ ರೀತಿ ಮಾನ್ಯ ಉಪ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಒಂದು ಪಕ್ಷ ಈ ನಿಲುವಳಿ ಸೂಚನೆಗೆ ಮಾನ್ಯ ಸದಸ್ಯರು ಹೇಗೆ

ಉತ್ತರವನ್ನು ಪಡೆಯುತ್ತಾರೆ? ಆದ್ದರಿಂದ, ಈ ಸಂದರ್ಭದಲ್ಲಿ ಉತ್ತರ ಕೊಡತಕ್ಕಂಥ ಪ್ರಶ್ನೆ ಇಲ್ಲ. ಮಾನ್ಯ ಸದಸ್ಯರುಗಳು ಅಧ್ಯಕ್ಷರ ಮನ ಒಲಿಸಿ ಈ ನಿಲುವಳಿ ಪ್ರಸ್ತಾಪವಾಗುತ್ತದೆಂದು ಆಜ್ಞೆಯನ್ನು ತೆಗೆದುಕೊಂಡಾದ ನಂತರ ಉತ್ತರವನ್ನು ಕೊಡಲಾಗುತ್ತದೊ ಇಲ್ಲವೋ ಎನ್ನುವ ವಿಚಾರ ಬರುತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಸದನವನ್ನು ವಿಶ್ವಾಸಕ್ಕೆ ಮುಖ್ಯಮಂತ್ರಿಗಳು ತೆಗೆದುಕೊಂಡಿಲ್ಲ ಎನ್ನುವ ಎರಡನೆಯ ಅಭಿಪ್ರಾಯ ಇದರಿಂದ ಬರುತ್ತದೆ. ಮುಖ್ಯ ಮಂತ್ರಿಗಳು ಹೋಗುವಾಗ ಈ ಸದನದಲ್ಲಿ ಹೇಳಿಕೆ ಕೊಟ್ಟು ಹೋಗಬೇಕಾಗುತ್ತದೆ. ಕರ್ನಾಟಕ ರಾಜ್ಯದಲ್ಲಿ ಒಬ್ಬ ಅಧಿಕಾರಿ ಬಗ್ಗೆ ಈ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ಇದರ ಬಗ್ಗೆ ದೆಹಲಿಗೆ ಹೋಗುತ್ತಿದ್ದೇನೆಂದು ಅವರು ಹೇಳಬೇಕಾಗಿತ್ತು. ಅವರು ಯಾರಿಗೂ ಹೇಳದೆ ಕೇಳದೆ ದೆಹಲಿಗೆ ಹೋಗಿದ್ದಾರೆ. ಇವತ್ತು ಮುಖ್ಯ ಮಂತ್ರಿಗಳು ದೆಹಲಿಯಲ್ಲಿದ್ದಾರೆಂದು ನಾವು ಪತ್ರಿಕೆಗಳ ಮೂಲಕ ತಿಳಿದುಕೊಳ್ಳಬೇಕಾಗಿದೆ. ಆಮೇಲೆ, ನಿನ್ನೆ ದಿವಸ ಮದುವೆ ಮನೆಗೆ ಗಂಡು ಕರೆದುಕೊಂಡು ಹೋಗುವ ಹಾಗೆ ಹೋಗುವ ಹಾಗೆ ಅನುಕಂಪ ತೋರಿಸಲು ಮಾನ್ಯ ಮಂತ್ರಿಗಳಾದ ದೇಶಪಾಂಡೆಯವರು ಜೈಲಿನ ಹತ್ತಿರ ಹೋಗಿದ್ದರು. ಅವರು ಅಲ್ಲಿಗೆ ಏತಕ್ಕೆ ಹೋಗಿದ್ದರು? ಜೈಲಿನ ಹತ್ತಿರ ಅವರಿಗೆ ಏನು ಕೆಲಸ ಇತ್ತು?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ನನಗೆ ಏನು ಕೆಲಸ ಇತ್ತು ಎಂಬುದನ್ನು ಮಾನ್ಯ ಸದಸ್ಯರಿಗೆ ಹೇಳುವ ಅವಶ್ಯಕತೆ ಇಲ್ಲ. ಒಬ್ಬ ಒಳ್ಳೆಯ ಅಧಿಕಾರಿಗೆ ಹೀಗಾಗಿದೆ ಎಂದು ತಿಳಿದು ಬಂದ ಮೇಲೆ ನಾನು ಅಲ್ಲಿಗೆ ಹೋಗಿದ್ದುದು ನಿಜ. ಇದರಿಂದ ನಾವು ಯಾವ ಪಾಪದ ಕೆಲಸ ಮಾಡಿಲ್ಲ, ಸದನಕ್ಕೆ ಅಗೌರವ ಮಾಡಿಲ್ಲ ಮತ್ತು ಯಾರಿಗೂ ಅಗೌರವ ಮಾಡಿಲ್ಲ. It was my duty. I have gone and met him. What is wrong in it? If you feel it is wrong, that is your opinion. ಇದು ನನ್ನ ಅಭಿಪ್ರಾಯ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ಒಳ್ಳೆಯ ಅಧಿಕಾರಿ ಇವರು ಎಂಬ ಮನವರಿಕೆ ಮಾಡಿಕೊಡಲು ಮನವಿ ಸಲ್ಲಿಸುವ ಬಗ್ಗೆ ನಮ್ಮದೇನೂ ಅಭ್ಯಂತರವಿಲ್ಲ. ಆ ಅಧಿಕಾರಿ ಜೈಲಿಗೆ ಹೋದ ತಕ್ಷಣ ಅವರನ್ನು ಬೀಳ್ಕೊಡುವುದಕ್ಕೆ ಒಬ್ಬ ಮಂತ್ರಿ, ಇಬ್ಬರು ಐ.ಎ.ಎಸ್. ಅಧಿಕಾರಿಗಳು ಹೋಗುವುದಕ್ಕೆ ಕಾರಣ ಏನು? ಇದೇ ರೀತಿ ಜೈಲಿಗೆ ಹೋದವರನ್ನೆಲ್ಲಾ ನೋಡಲು ಅವರು ಹೋಗುತ್ತಾರೇನು?

ಶ್ರೀ ಆರ್.ವಿ. ದೇಶಪಾಂಡೆ : ಅವರನ್ನು ಬೆಳಿಗ್ಗೆ 10.30 ಗಂಟೆಗೆ ಅರೆಸ್ಟ್ ಮಾಡಿದ್ದಾರೆ, ನಾನು ಅಲ್ಲಿಗೆ ಹೋಗಿದ್ದುದು ಸಂಜೆ.

ಶ್ರೀ ವಾಟಾಳ್ ನಾಗರಾಜ್ : ಸಂಜೆ ಏಕೆ ಹೋಗಿದ್ದರು? ಅದಕ್ಕೆ ಕಾರಣ ಏನು?

(ಗೊಂದಲ)

(ಈ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಅಲ್ಲಿಗೆ ಬರೀ ದೇಶಪಾಂಡೆ ಒಬ್ಬರೇ ಅಲ್ಲ, ಮಾನ್ಯ ರಾಯರೆಡ್ಡಿ ಕೂಡಾ ಹೋಗಿದ್ದರು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈ ಇಬ್ಬರು ಮಂತ್ರಿಗಳು ಅಲ್ಲಿಗೆ ಹೋದ ನಂತರ ಐ.ಎ.ಎಸ್. ಅಧಿಕಾರಿಗಳು ಇವರ ಮುಖಕ್ಕೆ ಮಂಗಳಾರತಿ ಮಾಡಿದ್ದಾರೆ. ಇದು ನಿಮ್ಮ ಸರ್ಕಾರ ಮಾಡಿರತಕ್ಕಂಥ ಅಗೌರವ ಎಂದು ಹೇಳಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ : ಪಾಯಿಂಟ್ ಆಫ್ ಆರ್ಡರ್, ಮಾನ್ಯ ಅಧ್ಯಕ್ಷರೆ, ನಾನು ಅಲ್ಲಿಗೆ ಹೋಗಿದ್ದು ನಿಜ. ಅದರಲ್ಲಿ ಏನೂ ತಪ್ಪಿದ್ದರೆ ಅದು ತಪ್ಪು ಎಂದು ತಾವು ಹೇಳಬೇಕು. ಅವರಿಗೆ ಸಿಂಪತಿ ತೋರಿಸುವುದಕ್ಕೆ ಮಾತ್ರ ನಾನು ಹೋಗಿದ್ದೆ. ಮಾನ್ಯ ಸದಸ್ಯರು ಹೇಳಿದಂತೆ ಅಲ್ಲಿ ಅಧಿಕಾರಿಗಳು ನಮಗೆ ಯಾವ ರೀತಿಯ ಮಂಗಳಾರತಿಯಾ ಮಾಡಿಲ್ಲ. ನಾವು ಯಾವ ಆಫೀಸರಗಳನ್ನು ಭೇಟಿ ಆಗಿಲ್ಲ ಹಾಗೂ ಮಾತುಕತೆ ಮಾಡಿಲ್ಲ. ಅವರು ಹೇಳಿದ್ದನ್ನು ಪ್ರೂವ್ ಮಾಡಿದರೆ I am ready to resign from this post. He should apologise.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ದೇಶಪಾಂಡೆಯವರು ಮತ್ತು ಮಾನ್ಯ ರಾಯರೆಡ್ಡಿಯವರು ಜೈಲಿನ ಹತ್ತಿರ ಹೋದದ್ದು ನಿಜವೆಂದು ಹೇಳಿದ್ದಾರೆ. ಅವರು ಅಲ್ಲಿಗೆ ಏಕೆ ಹೋದರು?

ಶ್ರೀ ಆರ್.ವಿ. ದೇಶಪಾಂಡೆ : ನಾವು ಎಲ್ಲಿಗಾದರೂ ಹೋಗಬೇಕಾದರೆ ವಾಟಾಳ್ ನಾಗರಾಜರವರಿಗೆ ಕೇಳಿ ಹೋಗಬೇಕೇನು? It is your right, it is your prerogative. ಬೇಜವಾಬ್ದಾರಿಯಿಂದ ಆಪಾದನೆ ಮಾಡಬೇಡಿ. If you prove, I will resign this post right now.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಂಗಳಾರತಿ ಎಂದರೆ ಇದು ಬಹಳ ಒಳ್ಳೆಯ ಪದ. ಅದು ಮಾನ್ಯ ದೇಶಪಾಂಡೆಯವರಿಗೆ ಅರ್ಥವಾಗಲಿಲ್ಲ. ಮಂಗಳಾರತಿ ಎನ್ನುವುದನ್ನು ದೇವರುಗಳಿಗೆಲ್ಲಾ ಮಾಡುತ್ತಾರೆ. ಇವರಿಗೆ ಮಾಡತಕ್ಕಂಥ ಮಂಗಳಾರತಿ ಬೇರೆ. ಇವರು ಮಂಗಳಾರತಿ ಆಗಲಿಲ್ಲವೆಂದು ಹೇಳುತ್ತಾರೆ. ಹಾಗಾದರೆ ಯಾವ ಆರತಿ ಆಯಿತು? ಅವರು ಅಲ್ಲಿಗೆ ಏಕೆ ಹೋಗಿದ್ದರು? ಹೋಗುವುದಕ್ಕೆ ಕಾರಣ ಏನು? ನಾನೂ ಬೇಕಾದಷ್ಟು ಸಾರಿ ಜೈಲಿಗೆ ಹೋಗಿದ್ದೇನೆಂದು ಮಾನ್ಯ ದೇಶಪಾಂಡೆಯವರು ಹೇಳಿದ್ದಾರೆ. ನಾನು ಜೈಲಿಗೆ ಹೋಗಿದ್ದಾಗ ಯಾವೊತ್ತಾದರೂ ಒಂದು ಸಾರಿ ನನ್ನನ್ನು ನೋಡಲು ಬಂದರೋ?

ಶ್ರೀ ಬಸವರಾಜ ರಾಯರೆಡ್ಡಿ : ದಿವಸ ಸಾಯುವರಿಗೆ ಅಳುವುದಕ್ಕೆ ಯಾವ ರೀತಿ ಆಗುವುದಿಲ್ಲವೋ ಹಾಗೆ ಯಾವಾಗಲೂ ಜೈಲಿಗೆ ಹೋಗುವವರನ್ನು ನೋಡುವುದಕ್ಕಾಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ರಾಯರೆಡ್ಡಿಯವರು ಮಾತನಾಡತಕ್ಕಂಥ ಧಾಟಿಯನ್ನು ನಾನು ಒಪ್ಪುವುದಿಲ್ಲ. ದಿವಸ ಸಾಯುವರು ಮತ್ತು ವರ್ಷಗಟ್ಟಲೆ ಸಾಯುವರ ಪ್ರಶ್ನೆ ಬೇರೆ. ಈ ಸದನದ

ಮಿಕ್ಕ ಅನೇಕ ಸದಸ್ಯರುಗಳೂ ಜೈಲಿಗೆ ಹೋಗಿರುವಂಥ ಸಂದರ್ಭಗಳಿವೆ. ಆ ಸಮಯದಲ್ಲಿ ಯಾವ ಮಂತ್ರಿಗಳಾದರೂ ಅಲ್ಲಿಗೆ ಹೋಗಿ, ಏನು ಕಾರಣಕ್ಕೆ ಜೈಲಿಗೆ ಹೋಗಿದ್ದೀರೆಂದು ಕೇಳುವುದಕ್ಕೆ ಹೋಗಿದ್ದಾರೆಯೇ? ಮೊನ್ನೆ ದಿವಸ ಸಾಗರವಳ್ಳಿ ರೇವಣ್ಣನವರು ಜೈಲಿನಲ್ಲಿ ಇದ್ದರು, ಅವರನ್ನು ನೋಡಲು ಯಾರಾದರೂ ಹೋಗಿದ್ದಾರೋ? ಮಾನ್ಯ ವೈ.ಕೆ. ರಾಮಯ್ಯನವರು ಜೈಲಿನಲ್ಲಿ ಇದ್ದರು, ಅವರನ್ನು ನೋಡಲು ಯಾರಾದರೂ ಹೋಗಿದ್ದರೋ?

ಅಧ್ಯಕ್ಷರೇ, ಏನಾಗಿದೆ ಎಂದರೆ ಒಂದು ಪ್ರಶ್ನೆ ನಾವು ಮಾತನಾಡೋಣ. ಒಬ್ಬ ಅಧಿಕಾರಿಗೆ ವೈಯಕ್ತಿಕವಾಗಿ ನಿಮ್ಮಷ್ಟೇ ನನಗೂ ಕಳಕಳಿ ಇದೆ. ಅದರ ಪ್ರದರ್ಶನ ನಮ್ಮ ರೀತಿನೀತಿ ಸದನದ ಗಾಂಭೀರ್ಯ ಎಲ್ಲವನ್ನೂ ಗಾಳಿಗೆ ತೂರಿ ಹೋಗತಕ್ಕಂತಹ ವ್ಯವಸ್ಥೆಯಿದೆಯೇ? ಎರಡನೆಯದು ಆ ಅಧಿಕಾರಿ ಏನು ಜೈಲಿಗೆ ಹೋದರು ನೀವೇನು ಜೈಲಿನ ಹೊರಗಿದ್ದಿರಿ ನನ್ನ ಪ್ರಕಾರ ನೀವು ಒಳಗಿರಬೇಕಾಗಿತ್ತು ನೀವು ಮಾಡಿದ ತಪ್ಪಿಗೆ ಅಧಿಕಾರಿ ಹೊರಗಿರಬೇಕಾಗಿತ್ತು - ಅದೇ ತೀರ್ಮಾನವಾಗಬೇಕಾದದ್ದು. ಜೈಲು ಅಂದರೆ ನಿಮಗಲ್ಲ, ದುರ್ದೈವ ನಿಮ್ಮ ಪಾಪದ ಕೆಲಸದಿಂದ ಹೆಜ್ಜೆಹೆಜ್ಜೆಗೂ ನಿಮ್ಮ ಆದೇಶಗಳನ್ನು ಪಾಲಿಸಿದ ಅಧಿಕಾರಿ ಇವತ್ತು ಒಳಗಡೆ ಹೋಗಬೇಕಾಯಿತು, ಆದರೆ ದುರ್ದೈವ, ಆ ಅಧಿಕಾರಿ ಬಿಟ್ಟು ಬೇರೆ ಯಾವ ಅಧಿಕಾರಿ ಆಗಿದ್ದರೆ ನಿಮ್ಮನ್ನು ಜೈಲಿಗೆ ಕಳುಹಿಸುತ್ತಿದ್ದರು ಪಾಪ ಏನೋ ನಿಮ್ಮ ಮಾತನ್ನು ಕೇಳಿ, ನನಗೆ ಆ ಅಧಿಕಾರಿ ನಿನ್ನೆ ಜೈಲಿಗೆ ಹೋದದ್ದು ಈ ಸದನವೆಲ್ಲಾ ಸೇರಿ ಅಧಿಕಾರಿ ಪರವಾಗಿ ಮಾತನಾಡುತ್ತಿದ್ದೇವೆಂಬ ಭಾವನೆ ಬರುವುದು ಬೇಡ. ಏಕೆಂದರೆ ಸಮಾಜದಲ್ಲಿ ಅಧಿಕಾರಿಗಳಿಗಿಂತ ಸಾರ್ವಜನಿಕರು ಅತ್ಯಂತ ನೋವಿನಿಂದ ಶಿಕ್ಷೆಗೊಳಗಾಗಿ ಅಪರಾಧವೆಸಗಿದೆ ಜೈಲಿಗೆ ಹೋಗಿರುವ ಜನ ಪ್ರಶ್ನೆ ನೇರವಾಗಿ ಮಾತಾಡುತ್ತಿದ್ದೇನೆಂದರೆ ಒಬ್ಬ ಪ್ರಾಮಾಣಿಕ ಅಧಿಕಾರಿ ಈ ಪರಿಸ್ಥಿತಿಗೆ ಬಂದರು ಎಂಬುದು ಈ ವ್ಯವಸ್ಥೆ ಯಾವುದು, ಅದನ್ನು ತಾವು ಹೇಳಿ ಸ್ವಾಮಿ. ಅದಕ್ಕಾಗಿ ನಾವು ಅಧಿಕಾರದಲ್ಲಿ ಒಂದು ನಿಮಿಷ ಇರುವುದಕ್ಕೆ ಆಗುವುದಿಲ್ಲವೆಂದು ನೀವು ತೀರ್ಮಾನ ತೆಗೆದುಕೊಳ್ಳುವುದು ಬಿಟ್ಟು ಸುಮ್ಮನೆ ವಾದ ಮಾಡುತ್ತಿದ್ದೀರಿ ಮುಖ್ಯಮಂತ್ರಿಗಳು ಬರುತ್ತಾರೆ ಅವರು ಉತ್ತರ ಕೊಡುತ್ತಾರೆ ಎಂದು ಏನು ಉತ್ತರ ಕೊಡುವುದು? ನಿಮ್ಮ ಬೇಜವಾಬ್ದಾರಿಯಿಂದ ಇದು ಬರೀ ಕರ್ನಾಟಕವಲ್ಲ ಇಡೀ ದೇಶದಲ್ಲೇ ಐಎಎಸ್ ಅಧಿಕಾರಿಗಳ ವ್ಯವಸ್ಥೆ ಈವತ್ತು ಗಂಭೀರವಾಗಿದೆ, ಲ್ಲಾ ರಾಜ್ಯದಲ್ಲೂ ಒಬ್ಬ ಐಎಎಸ್ ಅಧಿಕಾರಿಯನ್ನು ತಪ್ಪುದಾರಿಗೆಳೆದು ಆತ ಕಾರಾಗೃಹಕ್ಕೆ ಹೋಗುವಂತಹ ವ್ಯವಸ್ಥೆ ಮಾಡಿದ್ದರಲ್ಲ ಕರ್ನಾಟಕ ಸರ್ಕಾರ ಮೊದಲನೆಯದಾಗಿದೆ. ಆದ್ದರಿಂದ, ಈ ಕ್ಷಣದಲ್ಲಿ ನಮ್ಮ ಸರ್ಕಾರ ಇರುವುದಕ್ಕೆ ಸಾಧ್ಯವಿಲ್ಲ ಎಂಬ ದೃಷ್ಟಿಯಿಂದ ಮೊದಲು ರಾಜೀನಾಮೆ ಕೊಟ್ಟಿದ್ದರೆ ನೀವು ಬಹಳ ಮೇಲಕ್ಕೆ ಹೋಗುತ್ತಿದ್ದಿರಿ, ಈಗಲೂ ಕಾಲಮಿಂಚಿಲ್ಲ, ಉಪಮುಖ್ಯಮಂತ್ರಿಗಳು ತಮ್ಮ ಮುಖ್ಯಮಂತ್ರಿಗಳಿಗೆ ಹೇಳಿ ದೆಹಲಿಯಿಂದಲೇ ತಮ್ಮ ರಾಜೀನಾಮೆ ಕಳುಹಿಸಲಿ, ನಮ್ಮ ಸರ್ಕಾರ ಎಡವಿ ಅನ್ಯಾಯ ಮಾಡಿದ್ದೇವೆ ತಪ್ಪುಮಾಡಿದ್ದೇವೆ ಆದ್ದರಿಂದ ಈ ತತ್ವ ನಿಷ್ಠೆ ಪ್ರಾಮಾಣಿಕತೆಗಾಗಿ ರಾಜೀನಾಮೆ ಕೊಡುತ್ತೇವೆಂದು ಹೇಳಿದರೆ ದೇಶದಲ್ಲಿ ಮತ್ತೆ ಚುನಾವಣೆ ಬರುತ್ತವೆ ಅದಕ್ಕೆ ತಲೆಕೆಡಿಸಿಕೊಳ್ಳಬೇಕಾಗಿಲ್ಲ ನೀವೊಂದು ತೀರ್ಮಾನಕ್ಕೆ ಬನ್ನಿ ಎಂದು ಹೇಳುತ್ತೇನೆ.

ಒಂದೇ ಅಲ್ಲ ನಿಮ್ಮ ಮೇಲೆ ಅಧಿಕಾರಿಗಳೇ ಒಂದು ರೀತಿಯ ವ್ಯವಸ್ಥಿತ ತೀರ್ಮಾನಕ್ಕೆ ಬರಬೇಕಾಗುತ್ತದೆ. ನಾನು ಏಕೆ ಹೇಳುತ್ತೇನೆಂದರೆ ಒಬ್ಬ ಅಧಿಕಾರಿಯನ್ನು ಉಳಿಸುವುದಕ್ಕೆ ಆತನಿಗೆ ಆದ ಶಿಕ್ಷೆ ಬಗ್ಗೆ ನಾವಿಲ್ಲಿ ಚರ್ಚೆಮಾಡುತ್ತಿಲ್ಲ ಅದು ಅನುಚಿತವೆಂದು ನನಗನ್ನಿಸುತ್ತದೆ. ಇಷ್ಟೊಂದು ಚರ್ಚೆಯಾಗುವುದು - ಆದರೆ ಅಧಿಕಾರಿ ಬಗ್ಗೆ ಮಾತನಾಡುತ್ತಿಲ್ಲ, ಅಧಿಕಾರಿ ಜೈಲಿಗೆ ಹೋಗುವಂತಹ ಪರಿಸ್ಥಿತಿ ನಿರ್ಮಾಣ ಯಾರಿಂದಾಯಿತು ಎಂಬುದಷ್ಟೆ.

ಶ್ರೀ ಕೆ.ಎನ್. ನಾಗೇಗೌಡ : 4 ವರ್ಷದಿಂದ ಹೆಚ್‌ಯುಡಿ ಕಾರ್ಯದರ್ಶಿಯಾಗಿದ್ದರು ಈ ಸರ್ಕಾರ ರಾಜೀನಾಮೆ ಕೊಡಬೇಕೆಂದು ಹೇಳುತ್ತೀರಲ್ಲಾ ಆಗ ಕಾರ್ಯದರ್ಶಿ ಯಾರಿದ್ದರು? ಅಧಿಕಾರಿಗಳು ಅಲ್ಲೂ ಅಡ್ಜಸ್ಟ್ ಆಗುತ್ತಾರೆ. ಇಲ್ಲೂ ಅಡ್ಜಸ್ಟ್ ಆಗುತ್ತಾರೆ, ಯಾವ ಸರ್ಕಾರ ಬಂದರೂ ಅಡ್ಜಸ್ಟ್ ಆಗುತ್ತಾರೆ, ಕೊನೆಗೆ ನಾವು ರಾಜೀನಾಮೆ ಕೊಡಬೇಕೆಂದು ನೀವು ಕೇಳುತ್ತೀರಿ. ಅಧಿಕಾರಿ ಏಕೆ ಮಾಡಲಿಲ್ಲವೆಂದು ಕೇಳಲಿಲ್ಲವಲ್ಲಾ? ವಾಸುದೇವನ್ ನಿನ್ನೆ ಬಂದರೇನು? 4 ವರ್ಷದಿಂದ ಇರಲಿಲ್ಲವೇ? ಅದಕ್ಕೆ ನಮ್ಮ ಸರ್ಕಾರ ರಾಜೀನಾಮೆ ಕೊಡಬೇಕು ಅಂದರೆ?

(ಗೊಂದಲ)

ಖರ್ಗೆಯವರು ಬಹಳ ಹೇಳಿದರು, ನೈತಿಕ ಹೊಣೆಗಾರಿಕೆ ಹೊತ್ತು ಒಂದು ನಿಮಿಷ ಅಧಿಕಾರದಲ್ಲಿರಲು ಇವರು ಸಾಧ್ಯವಿಲ್ಲ ಇಲ್ಲ ಎಂದು, ಅವರು ಮಂತ್ರಿಯಾಗಿ ಕೆಲಸ ಮಾಡಿದವರು, ನಾನೂ ಆ ಮಂತ್ರಿ ಮಂಡಲದಲ್ಲಿದ್ದೆ, ಪಕ್ಕದಲ್ಲೇ ಮಾಜಿಮುಖ್ಯಮಂತ್ರಿಗಳು ಕುಳಿತಿದ್ದಾರೆ - ಸುರೇಶಕುಮಾರ್ ಬಹಳ ಚೆನ್ನಾಗಿ ಹೇಳಿದರು, ಆ ಕೇಸ್ 92 ರಿಂದ ಇತ್ತಲ್ಲಾ, ಹೆಚಯುಡಿ ಸೆಕ್ರೆಟರಿಯಾಗಿ ಯಾರಿದ್ದರು? ಅದೇ ಮನುಷ್ಯ ಇದ್ದವನು. ಇವತ್ತು ಬ್ಯೂರಾಕ್ರಸಿ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದ ಕಡೆ ಸೇರಿಕೊಂಡು ನಮ್ಮನ್ನು ನಿಮ್ಮನ್ನು ಕುಣಿಸುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಯಾವಾಗಲೂ ಡೆಲಿವರಿ ಆಗುವುದು 9 ತಿಂಗಳ 9 ದಿವಸವಾದ ಮೇಲೇ ಆಗುವುದು. ನೀವು 9 ತಿಂಗಳು ಆಯಿತು 8 ತಿಂಗಳಾಯಿತು ಎಂದರೆ ಕಂಟೆಂಪ್ಟ್ ಬಂದದ್ದು 10.5.95ರಲ್ಲಿ. ಅದನ್ನು ನೀವು ಏಕೆ ಮಾಡಲಿಲ್ಲ ಹೇಳಿ. ಅದರ ಅಂಡರಟೇಕಿಂಗ್ ಕೊಟ್ಟಿದ್ದೀರಲ್ಲಾ.

ಶ್ರೀ ಕೆ.ಎನ್. ನಾಗೇಗೌಡ : ನೀವು ಏಕೆ ಮಾಡಲಿಲ್ಲವೆಂದು ನಾನು ಕೇಳುವುದು. ವಾಸುದೇವನ್‌ರನ್ನು ನೀವೂ ಉಪಯೋಗಿಸಿಕೊಂಡಿದ್ದೀರಿ ಅವರೂ ಉಪಯೋಗಿಸಿಕೊಂಡಿದ್ದಾರೆ ಎಲ್ಲಾ ಉಪಯೋಗಿಸಿಕೊಂಡಿದ್ದಾರೆ.

ಶ್ರೀ ಎಂ.ಪಿ. ಪ್ರಕಾಶ್ : ಯುಕ್ತ ಕ್ರಮ ತೆಗೆದುಕೊಳ್ಳಬೇಕಾಗಿತ್ತೆಂದು ಖರ್ಗೆಯವರು ಹೇಳುತ್ತಾರೆ. ಹಾಗಾದರೆ ತಮ್ಮ ಕಾಲದಲ್ಲಿ ಬಂದ ಈ ಎಲ್ಲಾ ಪ್ರಕರಣಗಳ ಬಗ್ಗೆ ಮಾನನಷ್ಟ ಮೊಕದ್ದಮೆ ಆಗುವವರೆಗೂ ವಿಳಂಬ ಮಾಡುವುದು ಅವರ ನೀತಿಯಾಗಿತ್ತೇ? ಅಯಾಯ ಸಂದರ್ಭಗಳು ಬಂದಾಗ ಅಯಾ ನಿರ್ಣಯ ತೆಗೆದುಕೊಳ್ಳುವುದು ಆಗಬೇಕು. ಕಂಟೆಂಪ್ಟ್ ಈಗ ಬಂದಿದೆ ನೀವು ತೆಗೆದುಕೊಳ್ಳಲಿಲ್ಲವೆಂಬ ಮಾತು ಬೇರೆ ಆದರೆ ಅವರಿಗೂ ಅವಕಾಶವಿತ್ತು ಆಗ ವಿಳಂಬ ಮಾಡಿದ್ದರಿಂದ

ವಿಳಂಬದ ರೀತಿ, ಅಮೃತವೂ ವಿಷವಾಗುತ್ತದೆ ವಿಳಂಬವಾದರೆ. ಹಾಗೆ ಈಗ ವಿಷವಾಗಿ ಪರಿವರ್ತನೆಗೊಂಡಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಮಾಧಾನವಾಗುತ್ತದೆಂದರೆ ಹೇಳಿಕೊಳ್ಳಿ ಆದರೆ ಇದಕ್ಕೆ ನೀವು ಕಾರಣಕರ್ತರಿದ್ದೀರೆಂಬುದನ್ನು ಒಪ್ಪಿಕೊಳ್ಳಿ; ರೆಸ್ಪಾನ್ಸಿಬಿಲಿಟಿ ನಿಮ್ಮದಿಟ್ಟುಕೊಂಡು ಇನ್ನೊಬ್ಬರ ಮೇಲೆ ಹಾಕುವುದು ಮಾಡಬೇಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಅಧ್ಯಕ್ಷರೇ, ಮೊಯಿಲಿಯವರ ಪಾಪದ ಕೂಸು ಇವರು ಹೊತ್ತುಕೊಂಡು ಬೆಳಸುವ ಹಾಗಾಯಿತು; ಕೂಸು ಯಾರದು ಎನ್ನುವುದರ ಬಗ್ಗೆ ಚರ್ಚೆಯಾಗಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾಗೇಗೌಡರು ಶಿವರಾಮೇಗೌಡರು ಒಂದಾಗಿ ಬಹಳ ಒಳ್ಳೆಯ ಮಾತು ಕೇಳುತ್ತಿದ್ದಾರೆ, ನಾವು ಒಪ್ಪಿಕೊಳ್ಳುತ್ತೇವೆ, ನಾವು ಕೇಳಿದ್ದೇವಲ್ಲಾ ಸುಪ್ರೀಂಕೋರ್ಟ ಜಡ್ಜನ್ನು ನೇಮಕಮಾಡಿ ನ್ಯಾಯಾಂಗತನಿಖೆ ಮಾಡಿಸಿ. ಅದರಲ್ಲಿ ನಮ್ಮಮೇಲೇ ಬಂತು ಅಂದರೆ ನಾವೇ ಒಳಗೆಹೋಗುವುದಕ್ಕೆ ತಯಾರಿದ್ದೇವೆ. ಈ ಕಂಟೆಂಪ್ಟಕೇಸಿಗೆ ನೀವು ಕಾರಣಕರ್ತರೆಂದಾದರೆ ನೀವು ಹೋಗಿ.

ಶ್ರೀ ವಾಟಾಳ್ ನಾಗರಾಜ್ : ಕಾಂಗ್ರೆಸ್ ಸರ್ಕಾರ ಇದಕ್ಕೆ ಹೊಣೆ ಅನ್ನುತ್ತಾರೆ. ಅವರು ಹೊಣೆಯಾಗಿದ್ದರೆ ನೀವು ಮಾಡಿದ್ದು ಸರಿ ಎಂದು ಯಾರೂ ಹೇಳುವ ಮಟ್ಟದಲ್ಲಲ್ಲ ಕಾಂಗ್ರೆಸನವರಾಗಲಿ ಜನತಾದಳದವರಾಗಿರಲಿ ನೀವು ಆ ಕಾಗದಪತ್ರಗಳನ್ನು ಸಂಪೂರ್ಣವಾಗಿ ಸದನದ ಮುಂದೆ ಮಂಡಿಸಿ. ಯಾವ್ಯಾವ ಕಾಲದಲ್ಲಿ ಯಾರ್ಯಾರು ಮುಖ್ಯಮಂತ್ರಿಯಿದ್ದಾಗ ಏನೇನು ನಡೆದಿದೆ ಎಂದು ಸದನದ ಮುಂದೆ ಮಂಡಿಸಿ ಇವತ್ತೇ ಮುಖ್ಯಮಂತ್ರಿಗಳನ್ನು ಬರಹೇಳಿ, ಅಥವಾ ಮುಖ್ಯಮಂತ್ರಿಗಳು ಬರುವುದಕ್ಕಾಗುವುದಿಲ್ಲ ಇವತ್ತು ನಮ್ಮಕೈಲಿ ಉತ್ತಾರಾನೂ ಕೊಡುವುದಕ್ಕಾಗುವುದಿಲ್ಲವೆಂದರೆ ಸದನವನ್ನು ಮುಂದೂಡಿ ನಾಳೆ ಚರ್ಚೆಗೆ ತೆಗೆದುಕೊಳ್ಳಿ ಇನ್ನೇನೂ ಮಾಡುವುದಕ್ಕಾಗುವುದಿಲ್ಲ. ಯಾವುದೇ ಕಾರ್ಯಕಲಾಪ ನಡೆಯಲು ಆಗುವುದಿಲ್ಲ ಅನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇದರಲ್ಲೇನು ಕಾಂಗ್ರೆಸನವರು ಮಾಡಿದ್ದು ಸರಿ ಎಂದು ಹೇಳುವುದಿಲ್ಲ. ನಿಮ್ಮಿಬ್ಬರ ಕೆಲಸದಿಂದ ಒಬ್ಬ ಅಧಿಕಾರಿ ಬಲಿಪಶುವಾಗಿರುವ ವಿಚಾರವಿದೆಯಲ್ಲಾ ಇದು ಬಹಳ ಗಹನವಾದುದು. ಯಾರಕಾಲದಲ್ಲಾಯಿತು ಹೇಗಾಯಿತು, ಯಾರ್ಯಾರು ಪತ್ರ ಬರೆದಿದ್ದಾರೆ ಯಾವ್ಯಾವ ಸಂದರ್ಭದಲ್ಲಿ ಕಿವಿಗೊಟ್ಟಿದ್ದಾರೆ, ಇವರು ಮೌಖಿಕವಾಗಿ ಹೇಳಿದ ವಿಚಾರಗಳೇನು? ನನಗನ್ನುಸುತ್ತದೆ ವಾಸುದೇವನ್ ಇವತ್ತು ಜೈಲಲ್ಲಿದ್ದಾರೆ ಯಾರ್ಯಾರ ಕಾಲದಲ್ಲಿ ಏನೇನು ಮಾಡಿದ್ದಾರೆ ಎಂಬ ಸತ್ಯ ಅವರಿಗೆ ಗೊತ್ತಿದೆ. ಈ ಸದನದ ಮುಂದೆ ನೇರವಾಗಿ ಅವರಿಗೆ ಮನವಿ ಮಾಡುತ್ತೇನೆ ಯಾವ್ಯಾವ ಸರ್ಕಾರದಲ್ಲಿ ಯಾರ್ಯಾರು ಏನೇನು ಹೇಳಿದರು ಅನ್ನುವುದನ್ನು ಬಹಿರಂಗಪಡಿಸಬೇಕೆಂದು ಅವರಿಗೆ ಒತ್ತಾಯ ಮಾಡಿ ಹೇಳುತ್ತಿದ್ದೇನೆ. ಅದರಿಂದ ಮತ್ತೆ ಸತ್ಯ ಹೊರಬರುತ್ತದೆ. ಇದು ಅತಿ ಮುಖ್ಯವಾಗಿರುವುದರಿಂದ ಇದನ್ನು ಚರ್ಚೆಗೆ ತೆಗೆದುಕೊಳ್ಳಲೇಬೇಕು ಇದನ್ನು ಬಿಟ್ಟು ಸದನದಲ್ಲಿ ಬೇರೆ ಯಾವುದೇ ಕಾರ್ಯಕಲಾಪ ನಡೆಯುವುದಕ್ಕೆ ಆಗುವುದಿಲ್ಲ, ನಾವೇನು ಬಿಡುವುದಿಲ್ಲ ಅಂತಲ್ಲ, ಅಧ್ಯಕ್ಷರೇ, ಇದು ಗಂಭೀರ ಸ್ವರೂಪದ್ದು, ಕೇವಲ ಯಾವುದೋ ಜಿಲ್ಲೆ,

ರಾಜ್ಯದಲ್ಲಿ ನಡೆದದ್ದೋ, ಈ ದೇಶದಲ್ಲೇ ಪ್ರಪ್ರಥಮ ಪರಿಸ್ಥಿತಿ. ಇದಕ್ಕೆ ಮಂತ್ರಿಮಂಡಲದಲ್ಲಿ ಯಾರೂ ಉತ್ತರ ಕೊಡುವುದಕ್ಕೆ ಇಲ್ಲವೆಂದು ಸರ್ಕಾರ ತೀರ್ಮಾನ ಮಾಡಿದೆ.

SRI . J.H. PATEL : This should not go on record. ನಾವು ಹೇಳುವುದ್ದೇನು? ಉತ್ತರ ಕೊಡುವುದಕ್ಕೆ ನಮಗೆ ಶಕ್ತಿ ಇಲ್ಲ ಅಂತಲ್ಲ; ಯಾವುದೇ ಚರ್ಚೆ ಅರ್ಥಪೂರ್ಣವಾಗಬೇಕಾದರೆ ಅವರು ಬರಬೇಕೆಂದು ಹೇಳಿದ್ದುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವೈಯಕ್ತಿಕ ನಿಮ್ಮ ಶಕ್ತಿ ಬಗ್ಗೆ ನಾವು ಚಾಲೆಂಜ್ ಮಾಡಲಿಲ್ಲ. ಸರ್ಕಾರಕ್ಕೆ ಶಕ್ತಿಯಲ್ಲವೆಂದು ಹೇಳಿದ್ದುದು.

ಶ್ರೀ ವಾಟಾಳ್ ನಾಗರಾಜ್ : ಪಟೇಲರು ಹೇಳುತ್ತಾರೆ ನನ್ನ ಶಕ್ತಿ ಗೊತ್ತು ಇವರಿಗೆ ಎಂದು ಅದು ಹೇಗೆ ಗೊತ್ತು ನಮಗೆ? ನೀವು ಹಾಗೆ ಅಂದುಬಿಟ್ಟರೆ ಹೇಗೆ?

ಶ್ರೀ ಜೆ.ಎಚ್. ಪಾಟೇಲ್ : ವೈಜ್ಞಾನಿಕ ಶಕ್ತಿ, ಉಳಿದವನೆಲ್ಲಾ ನಾನು ತೋರಿಸುವುದಕ್ಕೆ ಹೋಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಪಟೇಲರ ಶಕ್ತಿ ಎಲ್ಲರಿಗೂ ಗೊತ್ತಿದೆ, ಉಳಿದವನ್ನು ನಾವು ಕೇಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು : ಒಂದೇ ಒಂದು ಚಿಕ್ಕ ಸೂಚನೆ. ಮಾನ್ಯ ನಾಗೇಗೌಡರು ಹೊರಗೆ ಹೋಗುತ್ತಿದ್ದಾರೆ, ನಾಗೇಗೌಡರು ಒಂದು ಮಾತನ್ನು ಅವರು ಮಾತನಾಡುವಾಗ ಹೇಳಿದರು ಇದೇ ಅಧಿಕಾರಿಯೇ ಇದ್ದರು ಎಂದು, ಅವರು ಇದ್ದರೋ ಇರಲಿಲ್ಲವೋ, ನಾನು ಏನು ಹೇಳುತ್ತೇನೆಂದರೆ ಮೂಲಭೂತವಾಗಿ ನಾವೆಲ್ಲಾ ಮನುಷ್ಯರು; ಮಾನವೀಯ ಭಾವನೆಗಳನ್ನು ಆಧಾರವಾಗಿಟ್ಟು ಕೆಲಸ ಮಾಡಬೇಕು. ಸರಿಯೋ ತಪ್ಪೋ ಆ ಮನುಷ್ಯ ಈಗ ಒಳಗಿದ್ದಾನೆ. ಮತ್ತೆ ಅದನ್ನೇ ಅಸ್ತ್ರವಾಗಿಟ್ಟು ಆತ ತಪ್ಪು ಮಾಡಿದ್ದಾನೆಂದು ಹೇಳುತ್ತಾ ಹೋದರೆ ಹೇಗೆ. ಅವರದ್ದೊಂದು ಕುಟುಂಬ ಅಂತ ಒಂದಿರುತ್ತದೆ ನೋಡಿ, ಈಗಾಗಲೇ ಅವರು ಏನೇನಾಗಿದ್ದಾರೋ ಊಹೆ ಕೂಡ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ ಮತ್ತೆ ನಾವು ಆ ಅಭಿಪ್ರಾಯದಲ್ಲಿ ಚರ್ಚೆ ಮಾಡಿದೆವು ಎಂದು ಪತ್ರಿಕೆ ಮೂಲಕ ಹೊರಗೆಹೋದರೆ ಅಷ್ಟೇನೂ ಗೌರವ ತರುವುದಿಲ್ಲ. ದಯಮಾಡಿ ಎಲ್ಲಾ ಸದಸ್ಯರಲ್ಲಿ ವಿನಂತಿ ಮಾಡುತ್ತೇನೆ, ನೀವು ಏನು ಬೇಕಾದರೂ ವಿಷಯ ಪ್ರಸ್ತಾಪ ಮಾಡಿ ಎಲ್ಲೋ ಒಂದು ಕಡೆಗೆ ಆ ಮಾನವ ಧರ್ಮಕ್ಕೆ ಗೌರವಕೊಡುವ ನೀತಿ ಇಟ್ಟುಕೊಂಡು ಮಾಡಿದರೆ ನಮಗೆಲ್ಲರಿಗೂ ಗೌರವ ಬರುತ್ತದೆ, ಅದರ ಮೇಲೆ ತಮ್ಮ ಸ್ವಾತಂತ್ರ್ಯ, ನಾನು ಯಾರಿಗೂ ಅಡ್ಡಿಅತಂಕ ಮಾಡುವುದಿಲ್ಲ.

+ ಶ್ರೀ ಹೆಚ್.ಎನ್. ನಂಜೇಗೌಡ (ಬಸವನಗುಡಿ) : ಅಧ್ಯಕ್ಷರೇ, ಈ ಸಭೆಯ ಚರಿತ್ರೆಯಲ್ಲಿ ಈ ದಿನ ಒಂದು ದುರ್ದಿನ ಎಂದು ನಾನು ಕರೆಯುತ್ತೇನೆ. ಏಕೆಂದರೆ ಅಳವಡಿಸಿಕೊಂಡಿರುವ ವ್ಯವಸ್ಥೆ the system we have accepted ಪದೇ ಪದೇ ಅಲ್ಲ ಅದನ್ನು ನಾನು ನೂರು ಸಲ ಹೇಳಲೇ ಬೇಕಾಗುತ್ತದೆ. ಇದನು ಏಕೆ ದುರ್ದಿನವೆಂದು ನಾನು ಕರೆದೆನೆಂದರೆ ಇತ್ತೀಚೆಗೆ ನಡೆದಂತಹ

ವ್ಯವಹಾರಗಳು, ಧನಂಜಯ ಅವರಿಗೆ ಪ್ರಮೋಷನ್ ಕೊಡದೇ ಇರುವಂಥಥದ್ದು, ಅದರಲ್ಲಿ 8 ಕೇಸಗಳಿವೆ 4 ಹೈಕೋರ್ಟ್ 4 ಸುಪ್ರೀಂಕೋರ್ಟ್ ಈಗೊಂದು ಐದು, ಇದೂ ಸೇರಿದರೆ 6 - ಆರ್ಡರ್ಸ್ ಜಡ್ಜಮೆಂಟ್‌ಗಳು ಎಲ್ಲಾ ಸೇರಿ 10. ಅಂತೂ ದಲಿತವರ್ಗಕ್ಕೆ ಸೇರಿದ ಈ ಧನಂಜಯ, ಅವನ ಜೊತೆ ಅದೇ ದಿನ ಕೆಲಸಕ್ಕೆ ಸೇರಿದ ಒಬ್ಬ ಉತ್ತಮ ಅವನು ಚೀಫ್ ಇಂಜಿನಿಯರಾಗಿ ಸುಮಾರು ಕಾಲ ಆಯಿತು. ಅದರಲ್ಲಿ ಧನಂಜಯ ಈಚಿಗಾದ, ಅವನ ಜೊತೆ ಅದೇ ದಿನ ಸೇರಿದ ಬೇರೆಯವ ಅವನಿಗೆ ಮುಂಚೆಯೇ ಚೀಫ್ ಇಂಜಿನಿಯರ್ ಅದರು, ಅವರು ಉತ್ತಮರು. ಅದಕ್ಕೆ ಯಾರು ಹೊಣೆ? ಏಕೆಂದರೆ ಇವರು ಹೇಳಿಬಿಟ್ಟರು ಪ್ರಸವವೇದನೆ ಬಂದದ್ದು ಈಗ ಅಂತ, ಪ್ರಸವವೇನು ಬರುವಂತೆ ಮಾಡಿದವರ್‍ಯಾರೋ, 9 ತಿಂಗಳು ಹಿಡಿಯುತ್ತದಲ್ಲಾ, ಆ ವಿಚಾರಕ್ಕೆ ನಾನು ಹೋಗುವುದಿಲ್ಲ. ಇದನ್ನು ಕ್ರಾನೊಲಾಜಕಲ್ ಆರ್ಡರಲ್ಲಿಸುಮ್ಮನೆ ಆಸಕ್ತಿಗಾಗಿ ತೆಗೆದುಕೊಂಡರೆ ಡೇಟವಾರು ಗುರುತುಮಾಡಿಕೊಂಡು ಹೋದೆ ಏನು ನಡೆದಿರಬಹುದು ಈತನ ವಿಚಾರದಲ್ಲಿ ಎಂದು. ಬೇರೆಯವರನ್ನು ಕೇಳಿ. ಇದನ್ನು ನಾವು ಉದಾಹರಿಸುವುದಾದರೆ ಇವತ್ತು ಸುಪ್ರೀಂಕೋರ್ಟಿನ ಅನಿಸಿಕೆಯೂ ಸೇರಿದರೆ 34 ಐಟಂ ಮಾಡಬಹುದು ಅಧ್ಯಕ್ಷರೇ. ಈತ ಕೆಲಸಕ್ಕೆ ಸೇರಿದಂದಿನಿಂದ ಹಿಡಿದು ಬೇರೆಯವರಿಗೆ ಯಾವಾಗ ಪ್ರಮೋಷನ್ ಕೊಟ್ಟರು, ಬೇರೆ ಬೇರೆಕಾಲದಲ್ಲಿ ಕಾರ್ಪೊರೇಷನ್ ಏನೇನು ಕಾನೂನು ರೆಸಲ್ಯೂಷನ್ಸ್ ಕೇಡರ್, ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಏನೇನು ತೀರ್ಮಾನ ತೆಗೆದುಕೊಂಡರು, ಸುಪ್ರೀಂಕೋರ್ಟ್ ಆರ್ಡರೇನಾಯಿತು ಇವೆಲ್ಲಾ ತೆಗೆದುಕೊಂಡರೆ 35 ಐಟಂ ಮಾಡಬಹುದು, ಇರಲಿ ಆ ವಿಚಾರಕ್ಕೆ ನಾನು ಹೋಗುವುದಿಲ್ಲ ಏಕೆಂದರೆ ಅದು ಸರ್ಕಾರ ಮಾಡಬೇಕಾದ ಕೆಲಸ. ಸುಪ್ರೀಂ ಕೋರ್ಟ ಜಡ್ಜಮೆಂಟ್ ಹೈಕೋರ್ಟ ಜಡ್ಜ್‌ಮೆಂಟ್ ನಿಮ್ಮ ಸರ್ಕಾರದ ಆರ್ಡರ್ಸ್, ಕಾರ್ಪೊರೇಷನ್ ಆರ್ಡರ್ ಎಲ್ಲ ಸೇರಿಸಿ ಸರ್ಕಾರ ಸದನದ ಮುಂದಿಡ ಬೇಕಾಗುತ್ತದೆ. ಇದನ್ನು ಒಂದು ದುರ್ದಿನೊವೆಂದು ನಾನು ಕರೆದೆ. ಏಕೆಂದರೆ this is a day, a naive experience ಜ್ಯುಡಿಷಿಯಲ್ ಟೆರನಿ ಅನ್ನುವ ಮಾತು ನಾವು ಹೇಳಬೇಕಾಗುತ್ತದೆ. ಯಾವುದಾದರೂ ಒಂದು ದಿನ. ಒಂದು ಕಡೆ ಧನಂಜಯನಿಗೆ ಅನ್ಯಾಯವಾದದ್ದು ಮೊದಲು ನಾನು ಹೇಳಿಬಿಡುತ್ತೇನೆ. ಅನ್ಯಾಯರಾಗಿದ್ದುದು ನಿಜ, ಅದಕೆ ಎರಡು ಮಾತು ಬೇಡವೇ ಬೇಡ. ಈ ರಿಕ್ರೂಟಮೆಂಟ್ ರೂಲ್ಸ್ ಎಲ್ಲಾ ಹೇಳಿಕೊಂಡು ಅವನು ಅರ್ಹನಲ್ಲ ಎಂದು ಹೇಳಿಕೊಂಡು ಬಂದಿದ್ದರು ನಾನು ಅಂತೆಯೇ ಅಂದು ಕೊಂಡಿದ್ದೆ. ಆದರೆ ವಿಚಾರಗಳನ್ನೆಲ್ಲಾ ತಿಳಿದುಕೊಂಡಾಗ ಅವನ ಜೊತೆ ಸೇರಿದ ಉತ್ತಮನೊಬ್ಬ ಮೊದಲೇ ಚೀಫ್ ಇಂಜಿನಿಯರ್ ಆಗಿಬಿಟ್ಟ ಎಂದಾಗ ಇದು ತರವಲ್ಲ ಅನ್ನಿಸಿತು. ಅದಕ್ಕೆ ವಾದ ವಿವಾದ ಹೆಚ್ಚಿಗೆ ಬೇಕೀ ಇಲ್ಲ. ಕೊಡಬೇಕಾಗಿತ್ತು, ಕೊಡಲಿಲ್ಲ. ಆದರೆ ವಾಸುದೇವನರದು ಸಾಂಕೇತಿಕ ಅಷ್ಟೆ. ನಾನು ಅಷ್ಟಕ್ಕೇ ಇಟ್ಟುಕೊಳ್ಳುವುದು. ಬಹುಶಃ ಈ ದೇಶದಲ್ಲಿ ಎಷ್ಟೋ ಜನರನ್ನು ಜೈಲಿಗೆ ಹಾಕುತ್ತಾರೆ. ಒಂದು ಮಾತು ಅಧ್ಯಕ್ಷರೇ, ಕೂನೂನು ಬಡವರಿಗೆ ಕಬ್ಬಿಣದ ಬಲೆ ಬಲಿಷ್ಟರಿಗೆ ಜೇಡರ ಬಲೆ. Cobwebs for the strong and cobbles for the poor ಇದರ ಅರಿವು ನನಗಿದೆ.

SRI J.H. PATEL : Where the weaker ones sneek through and stronger ones breake through; the little ones are caught. ಜ್ಯೂರಿಸ್ ಪ್ರೂಡೆನ್ಸನಲ್ಲಿ ಇದು ಬರುತ್ತದೆ.

ಶ್ರೀ ಹೆಚ್.ಎನ್. ನಂಜೇಗೌಡ : ಏಕೆ ಈ ಮಾತು ಹೇಳಿದೆ ಅಂದರೆ ಅಮೆರಿಕದ ಸುಪ್ರೀಂಕೋರ್ಟ ಜಡ್ಜ ಜಸ್ಟೀಸ್ ಜಾಕ್ಸನ್ ಒಂದು ಮಾತು ಹೇಳುತ್ತಾರೆ. ತಮ್ಮನ್ನು ಕುರಿತು ತಾವೇ ಹೇಳುವಂಥದ್ದು "We are not final because we are infallible; But we are infallible because we are final" ಇದು ಅವರಿಗೆ ಅರಿವಿದೆ. ನಮ್ಮ ರಾಷ್ಟ್ರದಲ್ಲಿ ಈ ಅರಿವು ಜಡ್ಜಗಳಿಗೆ ಇನ್ನೂ ಬಂದಿಲ್ಲ. ಅಧ್ಯಕ್ಷರೇ, the judges are not accountable. ಈ ರಾಷ್ಟ್ರದಲ್ಲಿ ಎಲ್ಲರನ್ನೂ ಅಕೌಂಟಬಲ್ ಮಾಡಿದ್ದೇವೆ. Executive is accountable. Even the legislature is accountable. Even the legislature is accountable because the next day if we go to the people they will kick us back. Every one is accountable. An officer is accountable. A minister is accountable. A chaprasi is accountable. Governor is also accountable. But judges are not accountable. ನನಗೆ ಒಂದೊಂದು ಸಲ ಅನ್ನಿಸುತ್ತದೆ. Accountable through impeachment, ಅದು ಎಲ್ಲಿ ಆಗುತ್ತದೆ?

Sri M.P. Prakash : They are also accountable by way of impeachment. Otherwise, no.

ಶ್ರೀ ಹೆಚ್.ಎನ್. ನಂಜೇಗೌಡ : ಏತಕ್ಕೆ ಇಂಪೀಚ್‌ಮೆಂಟ್ ಮಾಡುತ್ತೀರಿ?

Sri M.P. Prakash : They are liable to be impeached. When they are liable for impeachment, they are accountable.

ಶ್ರೀ ಹೆಚ್.ಎನ್. ನಂಜೇಗೌಡ : ಇಂಪೀಚಮೆಂಟ್ ಯಾಕೆ ಮಾಡುತ್ತಾರೆಂದು ನನಗೆ ಗೊತ್ತಿದೆ, Judges not because of their pronouncements ಇಂಪೀಚ್ ಮಾಡುವುದು.

1.00 ಪಿ.ಎಂ

ಅಧ್ಯಕ್ಷರು : ಮಾನ್ಯ ಪ್ರಕಾಶ್‌ರವರೇ, ತಾವು ಹೇಳಿದ್ದನ್ನು ನಾನು ಕೇಳಿಸಿಕೊಂಡೆ. ಇವರ ಸ್ಟ್ಯಾಂಡರ್ಡ್ ಆಫ್ ಇಂಟೆಗ್ರಿಟಿ ಯಾವ ಮಟ್ಟದ್ದು ಆಗಿರಬೇಕು ಎಂದರೆ even if there is a murmur that an impeachment motion would be tabled, the man concerned should not remain in office for a second. But, now we have people who watch the outcome of the impeachment motion. Is that the criteria? Are we to give respect to them?

SRI. M.P. PRAKASH : Legislators have taken sides on parochial consideration and the realignment of their favour.

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಒಂದೂವರೆ ಗಂಟೆ ತಡವಾಗಿ ಒಳಗೆ ಬಂದೆ. ಯೋಚನೆ ಮಾಡುತ್ತಿದ್ದೆ. ನಾವು ರಾಜ್ಯಾಂಗ ರಚನೆ ಮಾಡಿಕೊಂಡಿದ್ದೇವೆ. ಫಂಡಮೆಂಟಲ್ ರೈಟ್ಸ್ ಯಾರಿಗೆ

ಬೇಕು? ಇವತ್ತು ಕೋರ್ಟ್ ಯಾರಿಗೆ ಬೇಕು ಎಂಬುದನ್ನು ವಿಚಾರ ಮಾಡಬೇಕು. ಈ ರಾಷ್ಟ್ರದಲ್ಲಿರತಕ್ಕಂತಹ ಬಡವರ ಪೈಕಿ ಎಷ್ಟು ಜನ ಕೋರ್ಟಿನಿಂದ ನ್ಯಾಯ ದೊರಕಿದೆ ಎಂದು ಹೇಳಿದ್ದಾರೆ ಎಂದು ಇಲ್ಲಿಯವರೆಗೂ ಗೊತ್ತಾಗಲಿಲ್ಲ,

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ, .......

ಅಧ್ಯಕ್ಷರು : ರಾಜಣ್ಣನವರೇ, ತಾವು ಕುಳಿತುಕೊಳ್ಳಿ ನಿಮಗೆ ಗೊತ್ತಾಗುವುದಿಲ್ಲ. Debate is going on at a very high level. Please be seated. You, kindly continue.

ಶ್ರೀ ಹೆಚ್.ಎನ್. ನಂಜೇಗೌಡ : ಅಧ್ಯಕ್ಷರೇ, ನಾವು ಒಪ್ಪಿಕೊಂಡಿರತಕ್ಕಂತಹ ವ್ಯವಸ್ಥೆ ನನಗೆ ಬಹಳ ದುಃಖವಾಗುತ್ತದೆ. ಉಳ್ಳವರಿಗೆ ಇರತಕ್ಕಂಥಾದ್ದೇ ನ್ಯಾಯಾಲಯ. ಉಳ್ಳವರು ಮಾತ್ರವೇ ಹೋಗಬಹುದು. ಈಗ ಧನಂಜಯ ಅವರು ಸೇವೆಯಲ್ಲಿ ಇದ್ದ ಎಂದು ಸುಪ್ರೀಂ ಕೋರ್ಟಿನವರೆಗೆ ಹೋದ, ಹತ್ತು ಸಲ ಹೋದ. ಅದೇ ಬಡವರು ಹೋಗುವುದಕ್ಕಾಗುತ್ತದೆಯೇ? ಅದೇ ಬಡವರು ನನಗೆ ಊಟ ಇಲ್ಲವೆಂದು ಯಾರಾದರೂ ಕೋರ್ಟಿಗೆ ಹೋದರೆ ಕೋರ್ಟಿನವರು ಊಟ ಕೊಡುತ್ತಾರೋ? ಡೈರೆಕ್ಟೀವ್ ಪ್ರಿನ್ಸಿಪಲ್ ಸ್ಟೇಟ್ ಪಾಲಿಸಿ ಇದು ಇದೇ ಮಾಡಬೇಕೆಂದು ಇದೆ. ಅದು ಎನಫೋರ್ಸಬಲ್ ಅಲ್ಲವೆಂದು ಸುಪ್ರೀಂ ಕೋರ್ಟಿನವರೇ ಹೇಳಿದರು. ಫಂಡಮೆಂಟಲ್ ರೈಟ್ ಫ್ರೀಡಂ ಆಫ್ ಸ್ಪೀಚ್. ನಮ್ಮ ಗೋಪಾಲಗೌಡರು ಇಲ್ಲಿ ಕುಳಿತಿದ್ದಾಗ ಹೇಳಿದರು. ಇವನ್ನೆಲ್ಲಾ ಬರೆದು ನೆಕ್ಕಿದರೆ ಅವನಿಗೆ ಹೊಟ್ಟೆ ತುಂಬುತ್ತದೆಯೇ? ರೈಟ್ ಸ್ಪೀಕ್; ರೈಟ್ ಟು ಟಾಕ್. ನನಗೆ ಬದುಕುವುದಕ್ಕೆ ಮೂಲಭೂತವಾದ ಹಕ್ಕು. ನಮಗೆ ಬದುಕುವುದಕ್ಕೆ ಅವಕಾಶ ಮಾಡಿಕೊಡಿ ಅಂದರೆ ಕೋರ್ಟಿನವರು ತೀರ್ಮಾನ ಕೊಡುವುದಿಲ್ಲ. ನಾವು ಏಕೆ ಇಂತಹ ಜ್ಯುಡಿಷಿಯರಿಯನ್ನು ಅಡಾಪ್ಟ್ ಮಾಡಿಕೊಂಡೆವೆಂದು ಗೊತ್ತಿಲ್ಲ. ಸುಮ್ಮನೆ ನಾನು ಯೋಜನೆ ಮಾಡಿದೆ. ಒಬ್ಬ ರಾಜಕಾರಣಿಯನ್ನು ನಾವು ಮಾಡಿದ್ದವೆಯೇ? ರಾಜನ್ ಕೇಸ್ ಆಯಿತು. ಕಣ್ಣಾನೂರು ಜೈಲಿನಲ್ಲಿ ಸತ್ತೇ ಹೋದ. ಆಗ ಶಿಕ್ಷೆ ಯಾರಿಗೂ ಆಗಲಿಲ್ಲ. ಮಾರಲ್ ರೆಸ್ಪಾನ್ಸಿಬಿಲಿಟಿ ಮೇಲೆ ಅಂದಿನ ಮುಖ್ಯಮಂತ್ರಿಯನ್ನು ಅಧಿಕಾರದಿಂದ ಬಿಡಿಸಿದರು. ಯಾರಿಗೂ ಶಿಕ್ಷೆಯಾಗಲಿಲ್ಲ. ಎಮರ್ಜೆನ್ಸಿ ಪೀರಿಯಡನಲ್ಲಿ ಅವನು ಸತ್ತು ಹೋದ ಯಾರಿಗೂ ಶಿಕ್ಷೆಯಾಗಲಿಲ್ಲ. ಕಿಸ್ಸಾ ಕುರ್ಸಿಕಾ ಒಂದು ಚಿತ್ರ. ವನ್ನು ಲಕ್ಷಾಂತರ ರೂಪಾಯಿ ಖರ್ಚು ಮಾಡಿ ತೆಗೆದರು. ಅದನ್ನು ಸುಟ್ಟೇ ಹಾಕಿದರು. ಆಗಲೂ ಶಿಕ್ಷೆ ಯಾರಿಗೂ ಆಗಲಿಲ್ಲ. ಇವತ್ತು ಅವರೆಲ್ಲಾ ಮಂತ್ರಿಗಳು. ಜಗನ್ನಾಥ್ ಮಿಶ್ರಾ ಅವರ ಕೇಸೆಂದು ಕಾಣಿಸುತ್ತದೆ. ಆ ಜಡ್ಜ್ ಅನ್ನು ತೆಗೆದುಕೊಂಡು ಹೋಗಿ ರಾಜ್ಯಸಭೆಯ ಸದಸ್ಯರನ್ನಾಗಿ ಮಾಡಿದರು. ಇದರ ಬಗ್ಗೆ ವಿಚಾರಣೆ ಮಾಡಿದ ಮೇಲೆ ಆ ಜಡ್ಜ ರಾಜ್ಯಸಭೆಯ ಸದಸ್ಯರಾದರು. ಜಸ್ಟೀಸ್ ಠಕ್ಕರ್ ಕಮಿಷನ್ ವರದಿ ಬಂದು. ನಾನು ಲೋಕ ಸಭೆಯಲ್ಲಿ ಇದ್ದೆ. ಒಂದು ಪೇಜ್ ಸೇರಿಸುತ್ತಾನೆ ಅದರ ವಿವರಕ್ಕೆ ನಾನು ಹೋಗುವುದಿಲ್ಲ. ರಿವಾರ್ಡ ಏನು ಎಂದರೆ ಲಾ ಕಮಿಷನ್ ಚೇರ್ಮನ್ ಅವರಿಗೆ. ಇವತ್ತು ನನ್ನ ಮಗನಿಗೆ ಒಂದು ಮದುವೆಯಾಗಿರುತ್ತದೆಂದು ಅಂದು ಕೊಳ್ಳಿ. ಅವನಿಗೆ ನಾನೇ ನಿಂತುಕೊಂಡು ಇನ್ವಿಟೇಷನ್ ಪ್ರಿಂಟ್ ಮಾಡಿಸಿ ಎರಡನೇ ಮದುವೆ ಮಾಡಿಸುತ್ತೇನೆ. ನನಗೆ ಏನು ಶಿಕ್ಷೆ ಕೊಡುತ್ತೀರಿ? Is it not an ofence? ಆ ತರಹ ಮದುವೆ ಮಾಡುಸುವವನಿಗೆ

ಸ್ಪೈಟ್ ಕೊಡುತ್ತೀರಿ. ನಾನು ಏನು ಹೇಳುವುದಕ್ಕೆ ಹೊರಟೆ ಅಂದರೆ we are experiencing the touch of the judicial tyranny. This, we have to control. ಸಂಘರ್ಷವಾದರೂ ಆಗಲಿ. ನಾನು ಏಕೆ ಹೇಳುತ್ತಿದ್ದೇನೆಂದರೆ, ಏಕೆ ಇದು ಜ್ಯುಡಿಷಿಯಲ್ ಟಿರನಿ ಎಂದು ಅನ್ನಿಸಿತು ಅಂದರೆ, judicial pronouncements must be tempered with human consideration, not with evil consideration. ಈವಿಲ್ ಕನ್ಸಿಡರೇಷನ್ ಅಂದರೆ ನನ್ನ ಇಜ್ಜತ್ತು. ನಾನು ಜಡ್ಜ್ ಹೀಗೆ ಆಗುತ್ತದೆ. ಇದು ಇರಬಾರದು. ಹ್ಯೂಮನ್ ಕನ್ಸಿಡರೇಷನ್ ಬೇಕಲ್ಲಾ. ಜ್ಯುಡಿಷಿಯಲ್ ಪ್ರನೌನ್ಸಮೆಂಟ್ಸ ಅಂದರೆ it should be tempered with human considerations. ಇವತ್ತು ಅದು ಆಗುತ್ತಿಲ್ಲ. ಇದು ದುರ್ದೈವದ ಸಂಗತಿ. ಇವತ್ತು ಜ್ಯುಡಿಷಿಯರಿನಲ್ಲಿ ಹಿಡಿತರೇ ಇಲ್ಲ. Were these fellows to legislate? ಕಾನೂನೇ ಮಾಡಿ ಬಿಡುತ್ತಾರೆ. Is it open to them? Just because they are not accountable or answerable or they cannot be questioned, they go on pronouncing laws. ಕೊನೆಗೆ ಎಲ್ಲಿಯವರೆಗೆ ಹೋಗುತ್ತಾರೆಂದರೆ ಕಾಲೇಜುಗಳಲ್ಲಿ ಫೀಸ್ ಇಷ್ಟು ತೆಗೆದುಕೊಳ್ಳಿ ಎನ್.ಆರ್.ಐ. ಸ್ಟೂಡೆಂಟ್ಸ್‌ಗೆ. ನಿನ್ನೆ ಯಾರೋ ಕೋರ್ಟಿಗೆ ಹೋದವರು ಹೇಳುತ್ತಿದ್ದರು. ಕಾನೂನು ಪ್ರಕಾರ ಒಂದು ವರ್ಷಕ್ಕೆ 1,56,000 ಫೀಸ್ ಇಂಜಿನಿಯರಿಂಗ್ ಕಾಲೇಜಿಗೆ ತೆಗೆದುಕೊಳ್ಳಬಹುದೆಂದು ಆರ್ಡರ್ ಮಾಡಿದ್ದಾರೆ ಅವರೇ ಫಿಕ್ಸ್ ಮಾಡಿದ್ದಾರೆ. ಇದು ನನಗೆ ಗೊತ್ತೇ ಇರಲಿಲ್ಲ. I don't know about the fees in medical colleges. ಮೆಡಿಕಲ್ ಕಾಲೇಜಿಗೆ ಎಷ್ಟು ಮಾಡಿದ್ದಾರೋ ಗೊತ್ತಿಲ್ಲ. Who are these fellows to fix this fee? ಇಂಜಿನಿಯರಿಂಗ್ ಕಾಲೇಜಿಗೆ ಮ್ಯಾನೇಜಮೆಂಟ್ ಕೋಟಾ ಎಂದು ಫಿಕ್ಸ ಮಾಡಿದ್ದಾರೆ. ನಿಮಗೇಕೆ 5 ಪರ್ಸೆಂಟ್ ಮೆಡಿಕಲ್ ಕಾಲೇಜಿಗೆ ಏಕೆ 15 ಪರ್ಸೆಂಟ್ ಕೊಟ್ಟಿದ್ದಾರೆಂದು ನಾನು ಯಾರೋ ಇಂಜಿನಿಯರಿಂಗ್ ಕಾಲೇಜಿನವರನ್ನು ಕೇಳಿದೆ. ಅದಕ್ಕೆ ಅವರು ಏನು ಮಾಡುವುದು. ನಾವು ಹಣ ಕಲೆಕ್ಟ ಮಾಡಲಿಲ್ಲವೆಂದು ಹೇಳುತ್ತಾರೆ. ನಾವು ಕಣ್ಣು ಮುಚ್ಚಿಕೊಂಡರೂ ಈ ರೀತಿ ಮಾತುಕತೆ ನಡೆಯುತ್ತಿದೆ. ಇಲ್ಲಿ ವಿಚಾರವಂತರು ಜ್ಯುಡಿಷಿಯಲ್ ಸಿಸ್ಟಂ ಬಗ್ಗೆ ಏನು ಅಂದು ಕೊಳ್ಳುತ್ತಾರೆಂಬುದನ್ನು ನೋಡಬೇಕಾಗುತ್ತದೆ. ಎಲ್ಲಾದಕ್ಕೂ ಮೂಗು ತೂರಿಸತಕ್ಕಂಥಾದ್ದು ಫೀಸ್ ನಾವೇ ಫಿಕ್ಸ್ ಮಾಡುತ್ತೇವೆ. ಕಾನೂನು ನಾವೇ ಮಾಡುತ್ತೇವೆ ಇಂತಹ ಲಾ ಅನ್ನ ಏನ್‌ಅಕ್ಟ ಮಾಡುವುದು. Judiciary today in our country have not realised their limitations. I don't know what is the opinion of people in other countries about our judicial system. ಇದೆಲ್ಲಾ ನಮಗೆ ತಲೆ ತಗ್ಗಿಸತಕ್ಕಂತಹ ವ್ಯವಹಾಗವಾಗುತ್ತದೆ. ನಾನು ಏಕೆ ಜ್ಯುಡಿಷಿಯಲ್ ಟಿರನಿ ಎಂದು ಹೇಳಿದೆ ಎಂದರೆ, ಇದು ಸರ್ವ ಮಾನ್ಯ ಸಭೆ. ಆ ಗುಂಪು ಈ ಗುಂಪು ಮರೆತು ಬಿಡೋಣ. ಇಜೀ ರಾಜ್ಯದ ಜನರನ್ನು ಪ್ರತಿನಿಧಿಸತಕ್ಕಂಥಾ ಸಭೆ ಇದಾಗಿದೆ. ತಪ್ಪು ದೇವೇಗೌಡರು ಮಾಡಿದ್ದರೋ ಅದಕ್ಕಿಂತ ಮುಂಚೆ ಮೊಯಿಲಿಯವರು ಮಾಡಿದ್ದರೋ ಬಂಗಾರಪ್ಪನವರು ಮಾಡಿದ್ದರೋ ವೀರೇಂದ್ರಪಾಟೀಲರು ಮಾಡಿದ್ದರೋ ಅದಕ್ಕೆ ಹಿಂದೆ ಮಾಡಿದ್ದರೋ ಆ ಪ್ರಶ್ನೆ ಬೇರೆ ನಾನು ಅದಕ್ಕೆ ಹೋಗುವುದಿಲ್ಲ. ಅದು ನನಗೆ ಬೇಕಾಗಿಲ್ಲ. ಈ ಸಭೆ ಈ ರಾಜ್ಯದ ಜನ ಎಲ್ಲಾ ವರ್ಗದವರು ಈ ತಬ್ಬಲಿ ಅಧಿಕಾರಿಗೆ ನೋವಾಯಿತಲ್ಲಾ ಎಂಬ ಒಂದು

ಫೀಲಿಂಗ್ ಏನು ಇದೆ ಇದನ್ನು ರಿಫ್ಲೆಕ್ಟ್ ಮಾಡತಕ್ಕಂತಹ ಒಂದು ಸೌಜನ್ಯ ಆ ಜ್ಯುಡಿಷಿಯಲ್‌ಗೆ ಇಲ್ಲ ಅಂದು ಬಿಟ್ಟರೆ, is it not a judicial tryranny against the legislators, against the executive, against the people, against the sovereign authority of this House?

ನನ್ನ ಅನಿಸಿಕೆಗಳನ್ನು ಹೇಳಬೇಕೆಂದು ಅನ್ನಿಸಿತು ನಾನು ಹೇಳುತ್ತಿದ್ದೇನೆ. ಒಟ್ಟಿನಲ್ಲಿ ಸರಕಾರದವರು ಇದನ್ನು ಚರ್ಚೆ ಮಾಡಿಕೊಂಡು ಈ ಸಭೆಯಲ್ಲಿ ಪದೇ ಪದೇ ಚರ್ಚೆ ಆಗುವುದಾದರೆ let there be confrontation. ಎಲ್ಲಾ ವಿಚಾರ ತೆಗೆದುಕೊಂಡು ಜ್ಯುಡಿಷಿಯರಿ ಬಗ್ಗೆ ಅದರ ರೋಲ್ ಬಗ್ಗೆ ಅದರ ಫಂಕ್ಷನ್ ಬಗ್ಗೆ ಮಾತನಾಡೋಣ. ನಾನು ನೂರೆಂಟು ಹೇಳುಬವುದಕ್ಕೆ ಅವಕಾಶ ಮಾಡಿಕೊಡಿ. ಕರ್ನಾಟಕ ಶಾಸನ ಸಭೆಯಲ್ಲಿ ಮೊದಲು ಆಗಲಿ. ಏನು ಬರುತ್ತದೆಯಯೋ ನೋಡಿಬಿಡೋಣ. ಆದರೆ ವಿನಾ ಕಾರಣ ಇದರಲ್ಲಿ ಅವರದ್ದು ತಪ್ಪು ಇವರದ್ದೂ ತಪ್ಪು 7.8.95 ತಿಂಗಳು 6 ತಿಂಗಳು -ಮಗುವಿದ್ದಾಗ ಯಾರು ಅಪ್ಪ ಆಗಿದ್ದ 3 ತಿಂಗಳಾಗಿದ್ದಾಗ ಯಾರು ಎಂಬುದು ಅಪ್ರಕೃತ. ಟೆನಿಸ್ ಆಡುವ ಜಡ್ಜಸ್ ಇದ್ದಾರೆ. ಒಂದು ಪಾಯಿಂಟ್ ಸೋತರೆ ಅವರ ಜೊತೆ ಆಡುವವರು ಇಷ್ಟು ರೂಪಿಯಿ ಎಂದು ಕೊಡಬೇಕು. ಕೆಲವು ಜಡ್ಜಸಗೆ ದಿನಕ್ಕೆ 1-2 ಸಾವಿರ ರೂಪಾಯಿ ಸಿಗುತ್ತದೆ ಎಂದರೆ ಅಂತಹ ಜಡ್ಜಸ್ ನಿಂದ ನಾವು ಏನು ನ್ಯಾಯ ನಿರೀಕ್ಷೆ ಮಾಡಬಹುದು? ನಾನು ವಾದಕ್ಕೆ ಹೇಳುತ್ತಿಲ್ಲ. ಇದು ನಡೆಯುತ್ತಾ ಇರತಕ್ಕಂಥಾದ್ದು. ಒಬ್ಬ ಜಡ್ಜ ಇನ್ವಿಟೇಷನ್ ಪ್ರಿಂಟ್ ಮಾಡಿಸಿ ಮಗನಿಗೆ ಎರಡನೇ ಸಂಬಂಧ ಮಾಡೇ ಬಿಡುತ್ತಾನೆ. ಅವನೇ ನಮ್ಮಂತಹ ನಿಮ್ಮಂತಹವರನ್ನೆಲ್ಲಾ ಕರೆಯುತ್ತಾನೆ. All things are happening in our society and judiciary have become a forum for the rich, for the strong, not for the weak, not for the meek, not for any ordinary man. ಆ ಮಟ್ಟಕ್ಕೆ ನಾವು ಇರತಕ್ಕಂಥಾದ್ದು. ಇದರಲ್ಲಿ.....

ಶ್ರೀ ಜೆ.ಹೆಚ್. ಪಟೇಲ್ : ಈಗ ಬಹಳ ಗಹನವಾದ ವಿಚಾರಗಳನ್ನು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. The Supreme Court has no police of its own. All the courts will have to implement the judgments through executive governments. ಎಲ್ಲಿ ಸ್ಟೇಟ್ ಗವರ್ನ್‌ಮೆಂಟ್ಸ ನಾನ್ ಎಗ್ಸಿಸ್ಟೆಂಟ್ ಲಾ ಅಂಡ್ ಆರ್ಡರ್ ಏನೂ ಗೌರವ ಇಲ್ಲ ಅಂತಹ ಕಡೆ ಇವತ್ತು ವಿದೇಶದ 4 ಜನ ಇವತ್ತು ಈ ಕಾನೂನಿಗೆ ಗೌರವ ಕೊಡದೇ ಇರುವವರು ಈ ಕೋರ್ಟಿಗೆ ಗೌರವ ಕೊಡದೇ ಇರುವವರು ಈ ಸಮಾಜದ ಯಾವುದೇ ವರ್ಗಕ್ಕೆ ಗೌರವ ಕೊಡದೇ ಇರುವವರಿಗೆ ಏನೂ ಮಾಡುವುದಕ್ಕೆ ಆಗಿಲ್ಲ. ಈ ದೇಶದಲ್ಲಿ ಯಾರೋ ಬೇರೆಯವರು ಬಂದು ನಾಲ್ಕು ಜನರು ಟೆರರಿಸ್ಟಗಳ ಕೈಗೆಸಿಕ್ಕಿದರೂ ಸುಪ್ರೀಂ ಕೋರ್ಟ ಏನೂ ಮಾಡುವುದಕ್ಕಾಗುವುದಿಲ್ಲ. ನಮ್ಮ ಸರ್ಕಾರಗಳು ಇವತ್ತು ನಮ್ಮ ಸಂವಿಧಾನಕ್ಕೆ ನಾವೇ ಗೌರವ ಕೊಟ್ಟು ಕೊಂಡು ಯಾರಿಗೆ ನಾವು ತಲೆ ತಗ್ಗಿಸುತ್ತೇವೋ ಅವುಗಳು ಅಲ್ಲಿ ಸವಾರಿ ಮಾಡುತ್ತವೆ. ಅದ್ದರಿಂದ ಇಷ್ಟಕ್ಕೆ ನಾನು ಸರ್ಕಾರದಲ್ಲಿರುವುದರಿಂದ ಅವರ ವಿಚಾರ ನಿಜವಾಗಲೂ ವಿಚಾರಾತ್ಮಕವಾಗಿ ಜನರ sovereignity of the people ಆ ದೃಷ್ಟಿಯಿಂದ I agree with him.

ಶ್ರೀ ಬಿ. ಸೋಮಶೇಖರ್ : ಕ್ಷಮಿಸಬೇಕು, ಮಾನ್ಯ ಅಧ್ಯಕ್ಷರೇ, ಮಾನ್ಯ ನಂಜೇಗೌಡರು ಮಾತನಾಡತಕ್ಕಂಥ ದಾಟಿ ನೋಡಿದರೆ ಬಹಳ ಎಮೋಷನಲ್ ಆಗಿ ಮಾತನಾಡುತ್ತಿದ್ದಾರೆಂದು ಹೇಳಿ ನನಗಾದರೂ ಅನಿಸುತ್ತದದೆ. ಈ ಒಂದು ಪ್ರಕರಣದಲ್ಲಿ ಒಂದು ತೀರ್ಪನ್ನು ಸರ್ವೋಚ್ಛ ನ್ಯಾಯಾಲಯ ಕೊಟ್ಟಿದೆ. ಆ ಸರ್ವೋಚ್ಛ ನ್ಯಾಯಾಲಯದ ತೀರ್ಪನಲ್ಲೂ ಸಹ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಏನು, ಈ ದೇಶದಲ್ಲಿ ನ್ಯಾಯಾಲಯದ ಬಗ್ಗೆ ಬಹಳ ಲಘುವಾಗಿ ಕಾಣತಕ್ಕಂಥ ಸಂದರ್ಭಗಳನ್ನು ನಾವು ಅನೇಕ ಸಾರಿ ನೋಡಿದ್ದೇವೆ. ತಪ್ಪು ಮಾಡಿದಂಥವರನ್ನು ಶಿಕ್ಷೆಗೆ ಒಳಪಡಿಸಿದ್ದರೆ ಯಾರ ಪ್ರಭಲರಾಗಿರುತ್ತಾರೆ ಅಂಥವರು ಕಾನೂನನ್ನು ಕೈಗೆ ತೆಗೆದುಕೊಳ್ಳುತ್ತಾರೆ. ಯಾರು ಅಬಲರಾಗಿರುತ್ತಾರೆ ಅಂಥವರು ದಾರಿಯುದ್ದಕ್ಕೆ ಕೆಳಗಡೆ ಬಿದ್ದುಹೋಗುತ್ತಾರೆ ಎನ್ನುವ ವಿಚಾರಗಳನ್ನು ಹೇಳಿದ್ದಾರೆ. ಎಷ್ಟೋ ಕಂಟೆಮ್ಟ್ ಕೇಸುಗಳಲ್ಲಿ ಕ್ರಮ ತೆಗೆದುಕೊಳ್ಳದೇ ಇರುವ ಸಂದರ್ಭಗಳನ್ನು ನಾವು ಅನೇಕ ಸರ್ಕಾರಗಳಲ್ಲಿ ನೋಡಿದ್ದೇವೆ. ಆದರೆ ಎಲ್ಲಾದರೂ ಒಂದು ಕಡೆ ಇದಕ್ಕೊಂದು ಕಡಿವಾಣವನ್ನು ಹಾಕಲೇಬೇಕಾಗುತ್ತದೆ. ಇಂತಹ ಒಂದು ಸನ್ನಿವೇಶದಲ್ಲಿ ಸರ್ವೋಚ್ಚ ನ್ಯಾಯಾಲಯ ಒಂದು ತೀರ್ಮಾನವನ್ನು ತೆಗೆದುಕೊಂಡಮೇಲೆ ನಾವು ಜ್ಯುಡಿಷಿಯರಿಯನ್ನೇ ಸ್ವಲ್ಪ ಟೀಕೆ ಮನೋಭಾವದ ರೀತಿಯಲ್ಲಿ ಮಾಡತಕ್ಕಂಥದ್ದು ಅಷ್ಟೇನೂ ಸಮಂಜಸವಾಗಿ ಕಾಣುವುದಿಲ್ಲ ಎಂದು ನನ್ನ ಅಭಿಪ್ರಾಯ. Emotion should not rule over the reasoning. ಎಮೋಷನ್ಸ ಬರುತ್ತದೆ. ಆದರಲ್ಲಿ ರೀಸನಿಂಗ್ ಏನಿದೆ ಎಂದು ನೋಡಬೇಕಾಗುತ್ತದೆ. ಆ ದೃಷ್ಟಿಯಿಂದ ನಾವು ನ್ಯಾಯಾಲಯಗಳನ್ನು ಅಷ್ಟು ಹಗುರವಾಗಿ ಕಾಣತಕ್ಕಂಥದ್ದು ಸರಿಯಲ್ಲ. ಆದರ ಬಗ್ಗೆ ಬೇಕಾದರೆ ಬೇರೆ ವೇದಿಕೆಗಳಲ್ಲಿ ಚರ್ಚೆ ಮಾಡೋಣ ಎಂದು ಮಾತ್ರ ಹೇಳುತ್ತೇನೆ.

Mr. SPEAKER : Emotions should not overtake reasoning is applicable to everybody.

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಬಹಳ ಪ್ರಮುಖವಾದ ಒಪ್ಪಿಕೊಳ್ಳತಕ್ಕಂಥದ್ದು, ಹಿಂದೆ ನಮ್ಮ ಮಾತೃ ಪಾರ್ಲಿಮೆಂಟ್ ಎನ್ನುವಂಥದ್ದರಲ್ಲಿ ಈ ರೀತಿ ಸ್ಪೀಕರನ್ನು ಅಲ್ಲಿಯ ರಾಜ James II ಅವರನ್ನು ಬಂಧಿಸಿದಂಥ ಸಂದರ್ಭದಲ್ಲಿ Cronwell ಬಂದು ಅವರನ್ನು ಈ ಸದನದಲ್ಲಿಯೇ ಕೊಲೆ ಮಾಡುತ್ತಾರೆ. ಅದಾದನಂತರ ಒಂದು ಸಂಪ್ರದಾಯ ಕೂಡ ಬೆಳೆದು ಈ ಸಭೆ ಏನಿದೆ ಹೌಸ್ ಆಫ್ ಕಾಮನ್ಸ ಅದು ಬಹಳ ಉತ್ಕೃಷ್ಟವಾದದ್ದು, ಅದು ಸಾವರೀನ್ ಪವರ್ ಎಂದು ಹೇಳಿ ಅವರು ಬರುವಾಗ ಬಾಗಿಲನ್ನು ಹಾಕುತ್ತಾರೆ. ರಾಜ ಬಂದು ಮೂರು ಸಲ ಬಾಗಿಲನ್ನು ಬಡಿಯಬೇಕಾಗುತ್ತದೆ. May I come in? ಎಂದು ಕೇಳುತ್ತಾನೆ. ಅವನು ಇಡೀ ದೇಶದ ರಾಜನಾಗಿದ್ದರೂ ಕೂಡ ಈ ಸದನಕ್ಕೆ ಅವನು ಅಡಿಯಾಭಾಗಿರುತ್ತಾನೆ ಎನ್ನುವಂಥದ್ದರ ಸಾಂಕೇತಿಕತೆಯಲ್ಲಿ ಸ್ಪೀಕರ್ ಅದಕ್ಕಾಗಿ ಒಪ್ಪಿಗೆಯನ್ನು ಕೊಡುತ್ತಾನೆ. ಹಾಗೆಯೇ ಪದೇ ಪದೇ ಇಂಥ ವಿಚಾರಗಳ ಬಗ್ಗೆ ಒಂದು ದೊಡ್ಡದಾದ ಒಂದು ಟೀಕೆ, ಚರ್ಚೆ ಇವುಗಳಾದರೆ ಪ್ರಜಾಪ್ರಭುತ್ವದ ವ್ಯಾಖ್ಯಾನದಲ್ಲಿಯೂ ಕೂಡ ಅವರವರ ಇತಿಮಿತಿಗಳನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ರಾಜ್ಯಾಂಗದಿಂದ ಸೃಷ್ಟಿಸಲ್ಪಟ್ಟಿರುವಂಥ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗ ಇವುಗಳ ವಿವಿಧ ಶಾಖೆಗಳು ಮತ್ತು ಅವರ ಜವಾಬ್ದಾರಿಗಳ ಕುರಿತಾಗಿ ಇರುವಂಥ

ಏನು ಸುವರ್ಣ ಮಾಧ್ಯಮ ಇದೆ, ಅದನ್ನು ಯಾರೂ ಆ ಲಕ್ಷ್ಮಣ ಮಾಧ್ಯಮವನ್ನು ಧಾಟಿ ಹೋಗಲಾರದಂಥ ಸ್ಥಿತಿಯನ್ನು ತರಬೇಕಾದರೆ ಈ ಸದನ ಇಂತಹ ವಿಚಾರದಲ್ಲಿ ಚರ್ಚೆ ಮಾಡಿಕೊಳ್ಳುವುದು ಕೂಡ ಬಹಳ ಮುಖ್ಯ ಎಂದು ನಾನು ಭಾವಿಸುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಎರಡು ಮೂರು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಾನು ಇದನ್ನು ಏತಕ್ಕೆ ಪ್ರಸ್ತಾಪಮಾಡಿದೆ ಎಂದರೆ ವೋರಾ ಕಮಿಟಿ ರಿಪೋರ್ಟ್ ಬಂತು. He said `There is a parallel government running the economy in this country.' ನಾವೇನೂ ಮಾಡುವುದಕ್ಕಾಗುತ್ತಿಲ್ಲ. ಅಂದರೆ ಪ್ಯಾರಲಲ್ ಗೌರ್ನಮೆಂಟೆ, running parallel economy in this country ಎಂದು ಹೇಳಿದರು. ವೋರಾ ಕಮಿಟಿ ರಿಪೋರ್ಟ್‌ನ್ನು ಪಾರ್ಲಿಮೆಂಟಿನಲ್ಲಿ ಇತ್ತೀಚೆಗೆ ಇಟ್ಟರಲ್ಲಾ. ಇದಕ್ಕೆಲ್ಲಾ ನಾವು ಜಡ್ಜ್‌ಗಳ ಹತ್ತಿರ ತೆಗೆದುಕೊಂಡು ಹೋದರೆ ಔಷಧಿ ನಮಗೆ ಸಿಗುವುದಿಲ್ಲ. ನಾನು ಏತಕ್ಕೆ ಇದನ್ನು ಹೇಳುತ್ತೇನೆ ಎಂದರೆ ನಮ್ಮದೊಂದು ಏನು ಸಿಸ್ಟಂ ಇದೆ, the system we have accepted, ಗೌರ್ನಮೆಂಟ್ ಎಂದರೆ ಮಿನಿಸ್ಟರ್, ಒಬ್ಬ ಅಫೀಸರನ್ನು for the lapse of a government if a particular officer is to be pinpointed and punished, ನಾಳೆ ಗೌರ್ನಮೆಂಟಿಗೂ, ಬ್ಯುರೋಕ್ರಸಿಗೂ ಜಗಳ ತಂದು ಹಾಕತಕ್ಕಂಥ ವ್ಯವಹಾರ. That is what I mean. ಇದು ಇರತಕ್ಕಂಥದ್ದು. ಅದರ ವಿಚಾರವನ್ನು ನಾನು ಡೀಟೇಲ್ ಆಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಬೇರೆ ಸಂದರ್ಭದಲ್ಲಿ ಮಾತನಾಡುತ್ತೇನೆ. ಆದರೆ ಇಷ್ಟಂತೂ ಆಗತಕ್ಕಂಥದ್ದು ಈ ರಾಷ್ಟ್ರದಲ್ಲಿ ನಾವೇ ಇದನ್ನು ಪ್ರಾರಂಭ ಮಾಡೋಣ. Because the judiciary is not accountable, we should not keep, ಅವರು ಅಕೌಂಟಬಲ್ ಅಲ್ಲ ಎಂದು ಹೇಳಿಕೊಂಡು ನಾವು ಕುಳಿತುಕೊಂಡಿರುವುದೇ ಈ ಅನಾಹುತಗಳಿಗೆಲ್ಲಾ ಕಾರಣ ಎನ್ನತಕ್ಕಂಥದ್ದು. ಅದನ್ನು ನಾವು ಈ ಸರ್ವೋಚ್ಚ ಪರಮಾಧಿಕಾರ ಹೊಂದಿರತಕ್ಕಂಥ ಇಂಥ ಸಭೆಗಳು ಅದನ್ನು ಚರ್ಚೆ ಮಾಡತಕ್ಕಂಥದ್ದು ರೂಢಿಯಲ್ಲಿ ಬರಬೇಕು. ಲೋಕಸಭೆ ಚರ್ಚೆ ಮಾಡಬೇಕಾಗುತ್ತದೆ. ನಮ್ಮ ವಿಧಾನಸಭೆಗಳು ಚರ್ಚೆ ಮಾಡಬೇಕಾಗುತ್ತದೆ ಎನ್ನುವ ನನ್ನ ಅನಿಸಿಕೆಯನ್ನು ತಮ್ಮ ಮುಂದಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾನು ಬಹಳ ಹೊತ್ತು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಐದು ನಿಮಿಷದಲ್ಲಿ ನನ್ನ ಕೆಲವು ಪ್ರಶ್ನೆಗಳನ್ನು ಸರ್ಕಾರದ ಮುಂದೆ ಇಡುತ್ತಿದ್ದೇನೆ. ಅದಕ್ಕೆ ಉತ್ತರ ಬೇಕಾಗಿದೆ. ಈ ಘಟನೆ ಬಗ್ಗೆ ಕೆಲವು ಪ್ರಶ್ನೆಗಳಿಗೆ ನಾನು ಸರ್ಕಾರದಿಂದ ಉತ್ತರವನ್ನು ಸನ್ಮಾನ್ಯ ಪಟೇಲರು ಹಿರಿಯರು ಅವರು ನೋಟ್ ಮಾಡಿಕೊಂಡು ಕೊಟ್ಟರೆ ಸಾಕು. ನನಗೆ ಬೇರೆ ಎಲ್ಲದಕ್ಕಿಂತ ಮುಖ್ಯವಾಗಿ ಈ ರೀತಿಯ ಘಟನೆಗಳು ಮರುಕಳಿಸಬಾರದು. ಇದಕ್ಕೆ ಜವಾಬ್ದಾರರು ಯಾರು ? ಅವರು ನೈತಿಕ ಹೊಣೆಯನ್ನು ಹೊರಬೇಕಾಗುತ್ತದೆ. ನಿರಪರಾಧಿಗಳಿಗೆ ಈ ಘಟನೆಯಿಂದ ಶಿಕ್ಷೆಯಾಗಬಾರದು. ಈ ಘಟನೆಯಿಂದ, ಈ ದೇಶದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಆ ಸರ್ಕಾರದಲ್ಲಿ ಕೆಲಸ ಮಾಡುವಂಥ ಅಧಿಕಾರಿಗಳಿಗೆ ಅಥವಾ ಕೇಂದ್ರಸರ್ಕಾರದ ಅಧಿಕಾರಿಗಳು

ಒಂದು ರೀತಿ ಭಯಭೀತರಾಗಿದ್ದಾರೆ. ಪ್ರಾಮಾಣಿಕವಾಗಿ ನಮ್ಮ ಕರ್ತವ್ಯವನ್ನು ನಿರ್ವಹಿಸಿದರೆ ಈ ರೀತಿ ಶಿಕ್ಷೆ ಬರುವಂಥ ಕರಾಳ ದಿವಸಗಳು ಮುಂದೆ ಬರಬಹುದೋ, ನಮ್ಮ ವ್ಯವಸ್ಥೆಯೋ ಕುಸಿದು ಬೀಳುತ್ತದೇನೋ, ಅವರಿಗೆ ಆ ಅಧಿಕಾರಿಗಳಿಗೆ ನೈತಿಕ ಸ್ಥೈರ್ಯವನ್ನು ಈ ಸಂದರ್ಭದಲ್ಲಿ ತುಂಬುವಂಥದ್ದು, ಇದು ನಮ್ಮ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಅಧ್ಯಕ್ಷರೇ, ನನಗೆ ಗೊತ್ತಿಲ್ಲ, ಸನ್ಮಾನ್ಯ ನಂಜೇಗೌಡರು ತುಂಬಾ ಪ್ರಮುಖವಾದ ವಿಷಯ, ಬಹಳ ದೀರ್ಘವಾಗಿ ಚರ್ಚೆ ಮಾಡಬೇಕಾಗಿದೆ ಎಂದು ಅವರ ಒಂದು ಅನುಭವದಲ್ಲಿ ಇವತ್ತು ಹೇಳಿದ್ದಾರೆ. ನನಗೆ ದುಃಖವಾಗುತ್ತಿರುವಂಥದ್ದು ನಂಜೇಗೌಡರು ಮಾತನಾಡುತ್ತಿರುವಂಥ ಕಾಲದಲ್ಲಿ ಇಲ್ಲಿ ನಡೆದುಹೋಯಿತಲ್ಲಾ, ಒಬ್ಬ ಸುಪ್ರೀಂ ಕೋರ್ಟಿನ ನ್ಯಾಯಾಧೀಶನ ಮುಂದೆ ಯಾವುದೇ ಒಂದು ಕೇಸ್ ನಡೆಯುವಂಥ ಸಂದರ್ಭದಲ್ಲಿ ಒಬ್ಬ ರಾಜ್ಯದ ಮುಖ್ಯಮಂತ್ರಿಗಳು ಅವರನ್ನು ಹೋಗಿ ಭೇಟಿ ಮಾಡಿದರಲ್ಲಾ, ಈ ಒಂದು ಪರಿಸ್ಥಿತಿಯಿಂದ ನಮ್ಮ ರಾಜ್ಯದ ಜನ ನಾವು ತಲೆತಗ್ಗಿಸುವಂಥ ಒಂದು ಪರಿಸ್ಥಿತಿ ಬಂತಲ್ಲಾ ಎಂದು ನಾನು ದುಃಖಪಡುತ್ತಿದ್ದೇನೆ. ನನ್ನ ಕೆಲವು ಪ್ರಶ್ನೆಗಳೇನು ಎಂದರೆ 1993 ರಿಂದ 1995ರ ಆಗಸ್ಟ 25 ರವರೆಗೆ ಆಗಿರುವ ಕಡತದ ಎಲ್ಲಾ ಒಂದು ಇತಿಹಾಸವನ್ನು ಸದನದ ಮುಂದೆ ಮಂಡಿಸಬೇಕು ಈ ಘಟನೆಯ ಹಿನ್ನೆಲಯಲ್ಲಿ. ಈ ಕಡತವನ್ನು 1993ರಿಂದ 1995 ರವರೆಗೆ ಯಾವ ಯಾವ ಅಧಿಕಾರಿಗಳ ಬಗ್ಗೆ, ಮೇನಲ್ಲಿ ಸರ್ವೋಚ್ಛ ನ್ಯಾಯಾಲಯಕ್ಕೆ ಎರಡು ತಿಂಗಳ ಕಾಲಾವಖಾಶ ಕೇಳಿ ಅಂಡರಟೇಕಿಂಗ್ ಕೊಟ್ಟನಂತರ ಯಾವ ಕ್ರಮವನ್ನು ನಾವು ಕೈಗೊಂಡಿದ್ದೇವೆ? ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿಗಳು ಸರ್ವೋಚ್ಛ ನ್ಯಾಯಾಲಯದ ಮುಂದೆ ಎರಡು ತಿಂಗಳ ಅಂಡರ್‌ಟೇಕಿಂಗ್ ಕೊಟ್ಟಿದ್ದರೂ ಸಹ ತಾವು ಕೊಟ್ಟಿರುವ ಅಂಡರಟೇಕಿಂಗನ್ನು ಇಂಪ್ಲಿಮೆಂಟ್ ಮಾಡಲು ಇದ್ದ ತೊಂದರೆಯೇನು? ಇದಕ್ಕೇನಾದರೂ ರಾಜಕೀಯ ಒತ್ತಡವೇನಾದರೂ ಇತ್ತೇ? ಕಾರ್ಯದರ್ಶಿಗಳು ಈ ಸರ್ವೋಚ್ಛ ನ್ಯಾಯಾಲಯದಲ್ಲಿ ಎರಡು ತಿಂಗಳ ಕಾಲಾವಕಾಶ ಕೋರಿ ಅರ್ಜಿ ಸಲ್ಲಿಸುವುದಕ್ಕೋಸ್ಕರ ಸರ್ಕಾರ ಏನಾದರೂ ಅನುಮತಿ ಕೊಟ್ಟಿತ್ತೇ? ಸರ್ಕಾರದ ಉಪಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ ಅನಿವಾರ್ಯವಾಗಿ ನಾನು ಹೆಸರನ್ನುಹೇಳುತ್ತಿದ್ದೇನೆ. ಕುಮಾರಿ ಮಂಜುಳಾ ಅವರು ಮತ್ತು ಗೌರವಗುಪ್ತ ಇವರುಗಳ ಪಾತ್ರವೇನು ಈ ಘಟನೆಯಲ್ಲಿ ಶ್ರೀ ಗೌರವಗುಪ್ತ ಇವರಿಗೆ ಸರ್ವೋಚ್ಛ ನ್ಯಾಯಾಲಯದ ಶ್ರೀ ವಾಸುದೇವನ್ ಇವರಿಗೆ ಜೈಲು ಶಿಕ್ಷೆ ವಿಧಿಸುವ ಮುನ್ನ ತಾವು ಇನ್ನು ಒಂದು ಗಂಟೆ ಕಾಲಾವಕಾಶ ಕೊಡುತ್ತೇನೆ, ಸುಪ್ರೀಂ ಕೋರ್ಟ ಮುಂದೆ ಆದೇಶ ಜಾರಿಗೊಳಿಸುವುದಕ್ಕೆ ಅಫಿಡವಿಟನ್ನು ಏನಾದರೂ ಸಲ್ಲಿಸುವುದಕ್ಕೆ ಕಾರಣವಿದೆಯೇ ಎಂದು ಕೇಳಿದಂಥ ಸಂದರ್ಭದಲ್ಲಿ ಅವರು ಸರಿಯಾಗಿ ಏತಕ್ಕೆ ನಡೆದುಕೊಳ್ಳಲಿಲ್ಲ. ಶ್ರೀ ಗೌರವಗುಪ್ತ ಇವರು ದೆಹಲಿಯಿಂದ ದೂರವಾಣಿ ಮೂಲಕ ನಗರಾಭಿವೃದ್ಧಿ ಕಾರ್ಯದರ್ಶಿ - 2 ಶ್ರೀ ಗೋವಿಂದರಾಜ್ ಅವರನ್ನು ಸಂಪರ್ಕ ಮಾಡುತ್ತಾರೆ. ಅವರು ಉದಾಸೀನದ ಉತ್ತರ ಕೊಡುತ್ತಾರೆ. ಸುಪ್ರೀಂ ಕೋರ್ಟ್ ಈ ತೀರ್ಮಾನ ತೆಗೆದುಕೊಳ್ಳುವುದಕ್ಕಿಂತ ಮುಂಚೆ ನ್ಯಾಯಾಧೀಶರು ಇನ್ನೇನಾದರೂ ಇದೆಯೇ, You come back within one or two hours ಎಂದು ಹೇಳಿದರೂ ಸಹ ಮೂರು ಗಂಟೆಗಳ ಮೊದಲು ಬರಬೇಕು ಎಂದು ಹೇಳಿದರೆ ಗೌರವಗುಪ್ತರವರು ದೆಹಲಿಯಿಂದ ಕಾಂಟ್ಯಾಕ್ಟ ಮಾಡುತ್ತಾರೆ, ಕಾರ್ಯದರ್ಶಿ-2 ಶ್ರೀ ಗೋವಿಂದರಾಜರವರನ್ನು. ಇವರು

ಬೇಜವಾಬ್ದಾರಿಯಿಂದ ಉತ್ತರ ಕೊಡುತ್ತಾರೆ. ಹೀಗಾಗಿ ಸುಪ್ರೀಂ ಕೋರ್ಟ್ ಅನಿವಾರ್ಯವಾಗಿ ಆ ತೀರ್ಪನ್ನು ಕೊಡಬೇಕಾಯಿತು ಎಂದು ನನಗೆ ಅಧಿಕೃತವಾಗಿ ತಿಳಿದಿರುವಂಥ ವಿಷಯ. ಉತ್ತರ ಕೊಡುವಾಗ ಕೊಡಿ.

ಮತ್ತೆ ಇಂತಹ ಗಹನವಾದ ವಿಷಯ ಸುಪ್ರೀಂ ಕೋರ್ಟ್ ಮುಂದೆ ಬಂದಾಗ ಶ್ರೀ ಜೆ. ವಾಸುದೇವನ್‌ರವರು ಸುಪ್ರೀಂಕೋರ್ಟ್ ಮುಂದೆ ಹಾಜರಾಗದಿರುವುದಕ್ಕೆ ಕಾರಣವೇನು? ತಾವು ದಯಮಾಡಿ ಕ್ಷಮಿಸಬೇಕು, ಅನಿವಾರ್ಯವಾಗಿ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ. ಇದಕ್ಕೆ ಸಂಬಂಧಿಸಿದ ಕಡತವನ್ನು ಮುಖ್ಯಮಂತ್ರಿಗಳ ಕಛೇರಿಗೆ ಮೂರು ಅಥವಾ ನಾಲ್ಕು ಜನ ಶಾಸಕರುಗಳ ಮನವಿ ಮೇರೆಗೆ ತರಿಸಿದ್ದುದು ನಿಜವೇ? ಈ ಪ್ರಶ್ನೆಗಳನ್ನು ಕೇಳುತ್ತಿದ್ದೇನೆ. ನನ್ನ ಕರ್ತವ್ಯದ ಬಗ್ಗೆ ನಾನು ತಿಳಿದುಕೊಂಡಿರುವಂಥಾದ್ದು ಏನೆಂದರೆ, ತಾವು ಏನೇ ಹೇಳಿರಿ, ನಾನು ಈ ನಿಮಿಷದವರೆಗೆ ಪತ್ರಕರ್ತರನ್ನು ಕಂಡಾಗ ಹೇಳಿ ಬಂದಿರುವಹಥಾದ್ದು ಏನೆಂದರೆ, ಇವೊತ್ತು ಆತ್ಮಸಾಕ್ಷಿಗನುಗುಣವಾಗಿ ನೈತಿಕ ಹೊಣೆ ಹೊತ್ತು ನಾಳೆ ಮುಖ್ಯಮಂತ್ರಿಗಳು ಬರುತ್ತಿದ್ದಂತೆ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಾರೆಂದು ನಾನು ವಿಶ್ವಾಸವಿಟ್ಟುಕೊಂಡಿದ್ದೇನೆ. ನೀವೆಲ್ಲರೂ ಬೇಡವೆಂದರೂ.....

ಒಬ್ಬ ಮಾನ್ಯ ಸದಸ್ಯರು : ಯಡಿಯೂರಪ್ಪನವರು ಹೇಳಿದ ತಕ್ಷಣ ರಾಜೀನಾಮೆ ಕೊಟ್ಟುಬಿಡುತ್ತಾರೆ! ಯಡಿಯೂರಪ್ಪನವರಿಗೆ ಬಹಳ ತುರ್ತಾಗಿದೆ.

ಶ್ರೀ ಬಿ. ಮುನಿಯಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರು ರಾಜ್ಯಪಾಲರನ್ನು ಭೇಟಿ ಮಾಡಿದ ವಿವರವನ್ನು ದಯಮಾಡಿ ಈ ಸದನದಲ್ಲಿ ಹೇಳಿದರೆ ನಾವೂ ತಿಳಿದುಕೊಳ್ಳುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ದೇವೇಗೌಡರನ್ನು ಬಹಳ ವರ್ಷಗಳಿಂದ ಬಲ್ಲವನಾಗಿದ್ದೇನೆ. ತಪ್ಪುಗಳಾಗಬಹುದು, ಕೊರತೆಗಳಾಗಬಹುದು. ವಿಶೇಷವಾದ ಸಂದರ್ಭ ಬಂದಾಗ ಯಾವುದೇ ಸ್ಥಾನದಲ್ಲಿದ್ದರೂ ಸಹ ನಾವು ಕೆಲವೊಂದು ಸತ್ಸಂಪ್ರದಾಯಗಳನ್ನು ಹಾಕಿಕೊಂಡು ಬರಬೇಕಾಗುತ್ತದೆ, ಆಗಲೇ ನಾವು ದೊಡ್ಡವರಾಗುವುದು. ಆದರೆ, ಏನೇ ಆದರೂ ಪರವಾಗಿಲ್ಲವೆಂದು ತಿಳಿದು ಗಟ್ಟಿಯಾಗಿ ಕುಳಿತುಕೊಳ್ಳುವಂಥ ಒಂದು ಪದ್ಧತಿಯನ್ನು ಈ ರಾಜ್ಯದ ಮುಖ್ಯಮಂತ್ರಿಗಳು ಅನುಸರಿಸುವುದಿಲ್ಲ, ಅವರು ನಾಳೆ ಬೆಂಗಳೂರಿಗೆ ಬರುತ್ತಿದ್ದಂತೆ ತಮ್ಮ ರಾಜೀನಾಮೆ ಕೊಡುತ್ತಾರೆನ್ನುವ ವಿಶ್ವಾಸ ನಿಮಗಿಲ್ಲದಿದ್ದರೂ ನನಗಿದೆ. ಅವರು ನಾಳೆ ಬಂದು ಏನು ಮಾಡುತ್ತಾರೆಂದು ನೋಡೋಣ. ನನ್ನ ದೃಷ್ಟಿಯಲ್ಲಿ ಹೇಳುವುದಾದರೆ ನಾವು ಉತ್ತರ ಕೊಡಬೇಕಾಗಿರುವುದು ರಾಜ್ಯದ ಜನತೆಗೆ, ಅವರ ಮನಸ್ಸಿನಲ್ಲಿ ಏನೇನು ಭಾವನೆಗಳಿರೆಯೋ, ಅವುಗಳಿಗೆ ಸ್ಪಂಧಿಸಲು ನಾವು ಇಲ್ಲಿಗೆ ಬಂದಿದ್ದೇವೆ. ನಾವು ರಾಜ್ಯಾಂಗಕ್ಕೆ, ಕಾರ್ಯಾಂಗಕ್ಕೆ ಮತ್ತು ನ್ಯಾಯಾಂಗಕ್ಕೆ ಹಾಗೂ ಸಂವಿಧಾನಕ್ಕೆ ಬದ್ಧರಾಗಿ ನಡೆದುಕೊಳ್ಳಬೇಕೆಂದಿದ್ದೇವೆ. ಒಂದು ಸಲ ಈ ವ್ಯವಸ್ಥೆಯನ್ನು ಒಪ್ಪಿಕೊಂಡ ಮೇಲೆ ಒಂದು ರಾಜ್ಯ ಸರ್ಕಾರ ಸುಪ್ರೀಂ ಕೋರ್ಟಿನ ಅಂತಿಮ ತೀರ್ಮಾನವನ್ನು ಜಾರಿಗೊಳಿಸುವುದರಲ್ಲಿ ಹಿಂದು-ಮುಂದು ನೋಡಿದರೂ ಅದು ಆಗಲಿಲ್ಲ. ಅವರು ಗಟ್ಟಿಯಾಗಿ ನಿಂತರು ಎಂದು ಹೇಳುವಂತಾದ್ದು ಮತ್ತು [illegible] ಏನೇ ಕೊರತೆಗಳಿದ್ದರೂ ಸಹ ಈ ರೀತಿಯಾಗಿ ನಾವು ನಡೆದುಕೊಂಡರೆ

ನಾವು ಮುಂದಿನ ಪೀಳಿಗೆಗೆ ಸರಿಯಾದಂಥ ಮಾರ್ಗದರ್ಶನ ಮಾಡಿದಂತಾಗುವುದಿಲ್ಲ. ಈ ಬಗ್ಗೆ ತಾವು ಗಂಭೀರವಾಗಿ ಪರಿಶೀಲಿಸುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಯಾವ ಮಟ್ಟಕ್ಕೆ, ಯಾವ ಕಾರಣಕ್ಕೆ ನೀವು ಕಾರಣರೊಹದು ನಾವು ಇಂದು ಜನತಾ ದಳದ ಮೇಲೆ ಆರೋಪಗಳನ್ನು ಮಾಡುತ್ತಿದ್ದೇವೆಯೋ ಅದಕ್ಕಿಂತಲೂ ಹೆಚ್ಚಿನ ಜವಾಬ್ದಾರಿ 1993ರಲ್ಲಿ ಮೊದಲು ಈ ಪ್ರಸ್ತಾಪ ಬಂದಾಗ ನಮ್ಮ ಕಾಂಗ್ರೆಸ್ಸನ ಸ್ನೇಹಿತರು ಈ ರಾಜ್ಯದ ಆಡಳಿತ ನಡೆಸುತ್ತಿದ್ದರು. ಅವೊತ್ತು ರಾಜ್ಯದ ಮುಖ್ಯಮಂತ್ರಿಗಳಾಗಿ ವೀರಪ್ಪಮೊಯಿಲಿಯವರಿದ್ದರು. ಕಾಂಗ್ರೆಸನವರು ಕೂಡ ಅಷ್ಟೇ ಅಕ್ಷಮ್ಯ ಅಪರಾಧವನ್ನು ಈ ಘಟನೆಯಲ್ಲಿ ಮಾಡಿದ್ದಾರೆ. ಇಲ್ಲದಿದ್ದರೆ, ವಸತಿ ಮ್ತತು ನಗರಾಭಿವೃದ್ಧಿ ಇಲಾಖೆಯ ಪ್ರಿನ್ಸಿಪಲ್ ಕಾರ್ಯದರ್ಶಿಗಳಾಗಿದ್ದ ಜೆ. ವಾಸುದೇವನ್ ಅವರು ಇವೊತ್ತು ಜೈಲಿಗೆ ಹೋಗುವುದನ್ನು ತಪ್ಪಿಸಬಹುದಾಗಿತ್ತು. ನಾನು ರಾಜ್ಯಪಾಲರನ್ನು ಭೇಟಿ ಮಾಡಲು ಹೋಗಿದ್ದೆ. ರಾಜ್ಯಪಾಲರನ್ನು ಭೇಟಿ ಮಾಡಿದ ವಿವರಗಳನ್ನು ತಿಳಿಸಬೇಕೆಂದು ನಮ್ಮ ಸ್ನೇಹಿತರು ಕೇಳಿದರು. ನಾನು ಒಂದೇ ಮಾತಿನಲ್ಲಿ ಹೇಳುವುದಾದರೆ ನಾನು ಮತ್ತು ನಮ್ಮ ಸ್ನೇಹಿತರುಗಳು ಜೊತೆಗೂಡಿ ರಾಜ್ಯಪಲರನ್ನು ಭೇಟಿ ಮಾಡಿ ಹೇಳಿರುವಂತಾದ್ದು ಏನೆಂದರೆ, 'ರಾಜ್ಯದಲ್ಲಿ ಸಂವಿಧಾನಾತ್ಮಕ ಬಿಕ್ಕಟ್ಟು ಉಂಟಾಗಿದೆ, ಮುಖ್ಯಮಂತ್ರಿಗಲು ಸರ್ವೋಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನು ಭೇಟಿ ಮಾಡಿ ಮರ್ಸಿ ಪಿಟಿಷನ್ ಹಾಕಿಕೊಂಡು ಅಲ್ಲಿಯೇ ಕುಳಿತುಕೊಂಡಿರುವುದು ತಲೆತಗ್ಗಿಸುವಂಥ ಘಟನೆ ನಡೆದಿರುವುದರಿಂದ ಈ ಸಮಯದಲ್ಲಿ ಒಂದು ಕ್ಷಣವೂ ಸಹ ಸರ್ಕಾರ ಅಧಿಕಾರದಲ್ಲಿ ಮುಂದುವರೆಯುವುದಕ್ಕೆ ನೈತಿಕ ಹಕ್ಕಿಲ್ಲ, ಈ ಸರ್ಕಾರವನ್ನು ವಜಾ ಮಾಡಬೇಕು' ಎಂದು ಮನವಿ ಕೊಟ್ಟು ಬಂದಿದ್ದೇವೆ, ನೋಡೋಣ. ಆದರೆ, ನಾನು ರಾಜ್ಯಪಾಲರನ್ನು ಭೇಟಿ ಮಾಡಲು ಹೋದಾಗ ನನಗೆ ಆಶ್ಚರ್ಯವಾದದ್ದು ಏನೆಂದರೆ, ಸನ್ಮಾನ್ಯ ವೀರಪ್ಪ ಮೊಯಿಲಿಯವರೂ ಸಹ ರಾಜ್ಯಪಾಲರನ್ನು ಭೇಟಿ ಮಾಡಲು ಹೋಗಿದ್ದರೆಂದು ಕೇಳಿದ್ದೇನೆ. ಅದು ಅವರ ಹಕ್ಕು. ಅವರು ಬೇರೆ ವಿಷಯವಾಗಿ ರಾಜ್ಯಪಾಲರನ್ನು ಭೇಟಿ ಮಾಡಲು ಹೋಗಿದ್ದರೆ ನನ್ನ ಅಭ್ಯಂತರವೇನೂ ಇಲ್ಲ. ಧನಂಜಯರವರ ಪ್ರಕರಣದ ಹಿನ್ನೆಲೆಯಲ್ಲಿ ಮಾತನಾಡಲು ಏನಾದರೂ ಹೋಗಿದ್ದರೆ ಬಹುಶಃ ಯಾವುದೇ ಕಾಂಗ್ರೆಸ್ ಸ್ನೇಹಿತರಿಗೂ ಈ ವಿಷಯದಲ್ಲಿ ಮಾತನಾಡುವಂಥ ನೈತಿಕ ಸ್ಥೈರ್ಯವಿಲ್ಲ. ವೀರಪ್ಪಮೊಯಿಲಿಯವರು ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ಈ ರೀತಿ ಮಾಡಿರಲಿಕ್ಕಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ, ಒಂದು ವೇಳೆ ಇದೇ ವಿಷಯದ ಹಿನ್ನೆಲೆಯಲ್ಲಿ ಅವರು ರಾಜ್ಯಪಾಲರನ್ನು ಭೇಟಿ ಮಾಡಿದ್ದರೆ ಅದು ಅಕ್ಷಮ್ಯ ಅಪರಾಧವೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಮತ್ತು ನಾನು ಈಗಾಗಲೇ ಕೇಳಿರುವಂಥ ಪ್ರಶ್ನೆಗಳಿಗೆ ತಾವು ಉತ್ತರ ಕೊಡಬೇಕಾಗುತ್ತದೆ. ನಿಮ್ಮ ಸರ್ಕಾರ ನೈತಿಕ ಹೊಣೆ ಹೊತ್ತು ರಾಜೀನಾಮೆ ಕೊಡದಿದ್ದರೆ ನಮ್ಮ ಮಾಲೀಕರಾದ ರಾಜ್ಯದ ಜನರೇನಿದ್ದಾರೆ, ಈ ಒಂದು ಹಿನ್ನೆಲೆಯಲ್ಲಿ ತಾವು ಏನು ಅಪರಾಧ ಮಾಡಿದ್ದೀರಿ, ಅದರ ಬಗ್ಗೆ ತಿಳಿಸಲು ನಾವು ರಾಜ್ಯದ ಜನರ ಮುಂದೆ ಹೋಗಬೇಕಾಗುತ್ತದೆ, ಬೀದಿಗಿಳಿದು ಅನಿವಾರ್ಯವಾಗಿ ಆ ಕೆಲಸ ಮಾಡಬೇಕಾಗತ್ತದೆ. ತಮಗೆ ಕಿಂಚಿತ್ ಸ್ವಾಭಿಮಾನವೇನಾದರೂ ಇದ್ದರೆ ದಯಮಾಡಿ ನಿಮ್ಮ ಪಕ್ಷದ ಹಿತದೃಷ್ಟಿಯಿಂದ ನಿಮ್ಮ ಮುಖ್ಯಮಂತ್ರಿಗಳಿಗೆ ಸಲಹೆ ಕೊಟ್ಟು ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುವಂತೆ ನೋಡಿಕೊಳ್ಳಬೇಕು. ಇಲ್ಲದಿದ್ದರೆ, ನೀವು ಹಿತಶತ್ರುಗಳಾಗುತ್ತೀರಿ.

ಇವೊತ್ತು ನೀವೇ ಮುಖ್ಯಮಂತ್ರಿಗಳನ್ನು ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿಸಿ, ಅವರಿಗೆ ಸರಿಯಾದ ಸಲಹೆ ಕೊಡದಿದ್ದರೆ, ಜಾಲಪ್ಪನವರಂಥ ಸಚಿವರಿದ್ದು ಈ ಪರಿಸ್ಥಿತಿಗೆ ನೀವು ಗುರಿಯಾಗದೆ ನಿಮ್ಮ ನಾಯಕರಿಗೆ ಸರಿಯಾದ ಸಲಹೆ ಕೊಟ್ಟು ರಾಜೀನಾಮೆ ಕೊಡುವಂಥ ಕೆಲಸ ಮಾಡಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ನಮಗೆ ಯಾವುದೇ ಸ್ವಾಭಿಮಾನ ಇಲ್ಲವೆಂದು ಅರ್ಥವಾಗುತ್ತದೆ! ಇದರ ಬಗ್ಗೆ ಅವರು ನಮಗೆ ಹೇಳಿಕೊಡಬೇಕಾದ್ದು ಅನಾವಶ್ಯಕ. ಯಡಿಯೂರಪ್ಪನವರು ಒಂದು ಕೆಲಸ ಮಾಡಬಹುದು. ಏನೆಂದರೆ ಒಂದು ಸಲ ನಾವು ರಾಜೀನಾಮೆ ಕೊಡದಿದ್ದರೆ ನೀವೇ ರಾಜೀನಾಮೆ ಕೊಟ್ಟು ಇನ್ನೊಂದು ಸಲ ಜನರ ಹತ್ತಿರ ಹೋಗಬೇಕಾಗಿ ಬಂದಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ರಾಜ್ಯದ ಜನರ ಮುಂದೆ ಹೋಗುತ್ತೇವೆ. ರಾಜೀನಾಮೆಯನ್ನು ಯಾರು ಕೊಡಬೇಕೆಂಬ ಬಗ್ಗೆ ಜನತಾ ನ್ಯಾಯಾಲಯದಲ್ಲಿ ತೀರ್ಮಾನವಾಗಲಿ.

(ಗೊಂದಲ)

ಜನರು ನಿಮ್ಮನ್ನು ಕ್ಷಮಿಸುವುದಿಲ್ಲ, ಇದು ಅಕ್ಷಮ್ಯ ಅಪರಾಧವಾಗಿದೆ.

ಶ್ರೀ ಆರ್.ಎಲ್. ಜಾಲಪ್ಪ : ನಾವು ತಪ್ಪು ಮಾಡಿದ್ದೇವೆ, ಅನುಭವಿಸುತ್ತೇವೆ.

(ಈ ಹಂತದಲ್ಲಿ ಮಾನ್ಯ ಹಿರಿಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು : ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ಬಂಗಾರಪ್ಪನವರು ಮಾತನಾಡುವುದಿದೆ, ಆನಂತರ ವೀರಪ್ಪ ಮೊಯಿಲಿಯವರು ಮಾತನಾಡಬೇಕು. ಹಾಗೆಯೇ ಜಿ.ವಿ. ಶ್ರೀರಾಮರೆಡ್ಡಿ, ಕೆ.ಎಸ್. ಪುಟ್ಟಣ್ಣಯ್ಯ, ಖಮರುಲ್ ಇಸ್ಲಾಂರವರು ಇನ್ನೂ ಮಾತನಾಡಿಲ್ಲವಾದ್ದರಿಂದ ಯಾರ್‍ಯಾರು ಈ ವಿಷಯಕ್ಕಾಗಿ ನೋಟೀಸಿಗೆ ಸಹಿಗಳನ್ನು ಹಾಕಿ ಕಳುಹಿಸಿದ್ದಾರೋ, ಅವರೆಲ್ಲರೂ ಮಾತನಾಡಬೇಕೆಂದು ಅಪೇಕ್ಷಿಸಿದರೆ ಮಾತನಾಡಲು ನಾನು ಯಾರಿಗೂ ಅವಕಾಶ ನಿರಾಕರಣೆ ಮಾಡುವುದಿಲ್ಲ. ಈಗ ಭೋಜನಕ್ಕಾಗಿ ಸಭೆಯನ್ನು ಮುಂದೂಡುತ್ತಿದ್ದು ಮತ್ತೆ ಸಭೆ 2.30 ಗಂಟೆಗೆ ಸೇರುವುದು.

(ಸದನವು 1 ಗಂಟೆ 27 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 2.30 ಗಂಟೆಗೆ ಸೇರಲು ನಿಶ್ಚಯಿಸುತು)

(ಸಭೆಯು ಮಧ್ಯಾಹ್ನ 3.20 ನಿಮಿಷಕ್ಕೆ ಸಮಾವೇಶಗೊಂಡಿತು)

(ಅಧ್ಯಕ್ಷರು ಪೀಠವನ್ನು ಮಾನ್ಯ ಸಭಾಧ್ಯಕ್ಷರು (ಶ್ರೀ ರಮೇಶ್ ಕುಮಾರ್)ರವರು ಅಲಂಕರಿಸಿದ್ದರು)

+ ಶ್ರೀ ಎಸ್. ಬಂಗಾರಪ್ಪ (ಸೊರಬ) : ಮಾನ್ಯ ಅಧ್ಯಕ್ಷರೇ, ವಿಷಯ ಈಗಾಗಲೇ ಸದನದಲ್ಲಿ ಪ್ರಸ್ತಾಪವಾಗಿದೆ. ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳಲ್ಲಿ ಒಬ್ಬರಾಗಿರತಕ್ಕಂತಹ ಶ್ರೀ ವಾಸುದೇವನ್

ಅವರಿಗೆ ಸಂಬಂಧಪಟ್ಟಿರತಕ್ಕಂಥದ್ದು; ಇತ್ತೀಚೆಗೆ ಕೊಟ್ಟಿರತಕ್ಕಂತಹ ತೀರ್ಪಿನ ಬಗ್ಗೆ ವಿವರಗಳಿಗೆ ಹೋಗತಕ್ಕಂತಹ ಅವಶ್ಯಕತೆ ನನಗೆ ಕಾಣುತ್ತಿಲ್ಲ. ಇಲ್ಲಿ ವಿಷಯವನ್ನು ಪ್ರಸ್ತಾಪಕ್ಕೆ ಒಳಪಡಿಸಿದ ಮೇಲೆ ನನಗೆ ಗೊತ್ತಾಗಿರುವ ಹಾಗೆ, ವರದಿ ಕೂಡ ಬಂತು ನಾವು ನೋಡಿದ್ದೇವೆ. ಈಗಾಗಲೇ ಮರ್ಸಿ ಪಿಟಿಷನ್ ಕೂಡ ವಜಾವಾಗಿದೆ ಎಂದು ಸರ್ಕಾರದ ಪರವಾಗಿ ಬೆಳಿಗ್ಗೆಯೇ ಮಾನ್ಯ ಉಪಮುಖ್ಯಮಂತ್ರಿಗಳು ಕೂಡ ಹೇಳಿಕೆಯನ್ನು ಕೊಟ್ಟಿದ್ದಾರೆ. ಈಗ ಬೇರೆ ದಾರಿ ಯಾವ ರೀತಿ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಆದರೆ ಇಲ್ಲಿ ಏನು ಒಂದು ವಿಷಯ ನನಗೆ ಹೊಳೆಯುತ್ತಧೆಂದರೆ, what happened to the mercy petition filed before the President of India. ಅದು ಏನಾಗಿದೆ ಎಂದು ನನಗೆ ಗೊತ್ತಾಗಿಲ್ಲ. Mercy petition ಹಾಕಿರತಕ್ಕದ್ದು ಎಂಬುದು ನನಗೆ ಬಂದಿರತಕ್ಕ ವಿಷಯ. ಆದರೆ whether mercy has been granted ಎಂಬ ವಿಚಾರ ನನಗೆ ಇನ್ನೂ ಗೊತ್ತಾಗಿಲ್ಲ. ಪತ್ರಿಕಾ ವರದಿಗಳು ಎಷ್ಟರಮಟ್ಟಿಗೆ ಸತ್ಯಾಸತ್ಯ ಎಂಬುದು ಗೊತ್ತಿಲ್ಲ. ಕಾನೂನು ಇಲಾಖೆಯವರ ಅಭಿಪ್ರಾಯದಲ್ಲಿ ಕೂಡ ಮರ್ಸಿ ಕೊಡಬಹುದೆಂದು ರೆಕಮೆಂಡ್ ಆಗಿ ಹೋಗುತ್ತಿದೆಂಬ ವಿಚಾರವನ್ನು ನಾನು ಕೇಳಿದೆ. ಈ ದೃಷ್ಟಿಯಿಂದ ಈಗ ಸುಪ್ರೀಂ ಕೋರ್ಟ್ ತಾವು ಕೊಟ್ಟಿರತಕ್ಕ ತೀರ್ಪಿನ ಉಲ್ಲಂಘನೆಯಾಗಿದೆ ಎಂಬ ಕಾರಣದಿಂದ ಮತ್ತೆ ತನ್ನ ಆಜ್ಞೆಪಾಲನೆ ಮಾಡಬೇಕೇ ವಿನಹ ಇಲ್ಲಿ ಮರ್ಸಿಯನ್ನು ಗ್ರಾಂಟ್ ಮಾಡತಕ್ಕ ಅವಶ್ಯಕತೆ ಕಂಡಿಲ್ಲ ಎಂಬ ಅಭಿಪ್ರಾಯ ಸುಪ್ರೀಂ ಕೋರ್ಟಿಗೆ ಬಂದರೆ, ಅಲ್ಲಿರತಕ್ಕ ಕಾರಣಗಳು ಪ್ರತ್ಯೇಕ. ಅದು ನ್ಯಾಯಾಲಯದ ಗಮನದ ವ್ಯಾಪ್ತಿಯಲ್ಲಿ ಬಂದಿಲ್ಲವೆಂಬ ಕಾರಣದ ಆಧಾರದ ಮೇಲೆ ಹಾಗೇನಾದರೂ ಅಂಥಹ ಸಕಾರಣಗಳು ಇದ್ದರೆ ಅದನ್ನು ರಾಷ್ಟ್ರಾಧ್ಯಕ್ಷರ ಗಮನಕ್ಕೆ ಮರ್ಸಿ ಪಿಟಿಷನ್ ಮುಖಾಂತರ ತಂದಿದ್ದರೆ ಅದು ಉಪಯೋಗವಾಗಬಹುದು, ಇಲ್ಲದಿದ್ದರೆ ಅದು ಉಪಯೋಗವಾಗುವುದಿಲ್ಲ. ಈಗ ಮಾನ್ಯ ಮುಖ್ಯಮಂತ್ರಿಗಳು ನನಗೆ ಗೊತ್ತಿರುವ ಹಾಗೆ ದೆಹಲಿಯಲ್ಲಿದ್ದಾರೆ. ಸುಪ್ರೀಂ ಕೋರ್ಟಿನವರು ಮತ್ತೆ ಇವತ್ತು ತಮ್ಮ ಮುಂದಿರತಕ್ಕ ಮರ್ಸಿ ಪಿಟಿಷನ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅಲ್ಲಿ ಇದ್ದಾರೇನೋ ಎಂಬ ವಿಷಯ ನನಗೆ ಗೊತ್ತಾಗುತ್ತಿಲ್ಲ. ಅವರು ಮರ್ಸಿ ಪಿಟಿಷನ್ ಅಂದರು. ನನಗೆ ಗೊತ್ತಿರುವ ಹಾಗೆ ಸುಪ್ರೀಂ ಕೋರ್ಟ್ ಮುಂದೆ ಹೋಗಿದ್ದು ರೆವ್ಯೂ ಪೆಟಿಷನ್, ಅದು ಮರ್ಸಿ ಪೆಟಿಷನ್ ಅಲ್ಲ. ಮರ್ಸಿ ಪೆಟಿಷನ್ ಎಂಬ ವಿಚಾರ ಇಲ್ಲಿ ಬಂದದ್ದರಿಂದ ನಾನು ಹೇಳಿದೆ. ಮರ್ಸಿ ಪೆಟಿಷನ್ ಸುಪ್ರೀಂ ಕೋರ್ಟಿಗೆ ಬರುವುದಿಲ್ಲ. ಅದು ರೆವ್ಯೂ ಪೆಟಿಷನ್. It will go before the same judge who delivered the judgment.

ಅದನ್ನು ಮತ್ತೊಂದು ಸಾರಿ ರೆವ್ಯೂ ಮಾಡಿರುತ್ತಾರೆ ಅಷ್ಟೆ. ಬೇರೆ ರೀತಿಯಲ್ಲಿ ಮಾಡುವುದಕ್ಕೆ ಬರುವುದಿಲ್ಲ. ಈ ಸಂದರ್ಭದಲ್ಲಿ ಮರ್ಸಿ ಪೆಟಿಷನ್ ಬಗ್ಗೆ ಪ್ರಯತ್ನವನ್ನು ರಾಜ್ಯ ಸರ್ಕಾರದ ಪರವಾಗಿ ಮುಖ್ಯ ಮಂತ್ರಿಗಳು ಮಾಡುತ್ತಿರಬಹುದು ಅಲ್ಲಿ ರಾಷ್ಟ್ರಾಧ್ಯಕ್ಷರ ಮುಂದಿರತಕ್ಕದ್ದರ ಬಗ್ಗೆ ಎಂಬುದು ನನ್ನ ಯೋಚನೆ. ನಾನು ಈ ಸಂದರ್ಭದಲಲ್ ಒಂದು ಮಾತು ಹೇಳಬಲ್ಲೆ, ತಾವು ಸಭಾಧ್ಯಕ್ಷರು ಒಂದು ಬಹಳ ತೂಕವವಾಗಿರತಕ್ಕ ವಿಚಾರವನ್ನು ಬೆಳಿಗ್ಗೆ ಸದನದಲ್ಲಿ ಹೇಳಿದಿರಿ. ಏನೆಂದರೆ, ಕಾರಣಗಳು ಏನೇ ಆಗಿರಬಹುದದು, ಅಂದರೆ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಬೇಕೆಂಬ ಪ್ರಶ್ನೆ ಅಲ್ಲ. ಅಲ್ಲಿ ಏನು ನಡೆದಿದೆ ಯಾವ ಯಾವ ವರ್ಷದಲ್ಲಿ 1993-94, 94-95 ಇತ್ಯಾದಿ ಇತ್ಯಾದಿ ಕಾಲದಲ್ಲಿ,

ಆ ಪ್ರಶ್ನೆ ಅಲ್ಲ. ಆದರೆ ಅಲ್ಲಿ ಒಬ್ಬರ ಕಾಲದಲ್ಲಿ ಆಗಿರತಕ್ಕದ್ದು ಅಲ್ಲ. ಹಲವಾರು ಬೆಳವಣಿಗೆಗಳ ಆಯಾಯ ಕಾಲಕ್ಕೆ ತಕ್ಕಹಾಗೆ ನಡೆದಿರುತ್ತವೆ. ಆ ಸಂದರ್ಭದಲ್ಲಿ ಆಗಿರತಕ್ಕ ಆದೇಶ ಒಬ್ಬರು ಸಚಿವರು ಅಥವಾ ಮತ್ತೊಬ್ಬರು ಸರ್ಕಾರದ ಪರವಾಗಿ ಏನು ಕೊಟ್ಟರು ಎಂಬ ವಿಚಾರ ಗೊತ್ತಾದ ಮೇಲೆ ಶಿಕ್ಷೆಗೆ ಅವರು ಒಳಗಾಗಿದ್ದರೆ ಅದು ಅನ್ಯಾಯವಾಗುತ್ತದೆ. ಈ ಸಂದರ್ಭದಲ್ಲಿ ಅವರ ಕುಟುಂಬವನ್ನು ಅವರು ನೋವನ್ನು ನಾವು ಗಮನದಲ್ಲಿಟ್ಟುಕೊಳ್ಳುವುದು ಒಳ್ಳೆಯದು ಎಂಬ ಮಾತಿನಲ್ಲಿ ಬಹಳ ಅರ್ಥವಿದೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಇಷ್ಟು ಹೇಳಬಲ್ಲೆ. ಈಗ ಮಾನ್ಯ ಮುಖ್ಯಮಂತ್ರಿಗಳು ಏನು ದೆಹಲಿಯಲ್ಲಿದ್ದಾರೆ ಮರ್ಸಿ ಪೆಟಿಷನ್ ವಿಚಾರದಲ್ಲಿ ರಾಷ್ಟ್ರಾಧ್ಯಕ್ಷರಿಂದ ಇವತ್ತು ನಾವು ಏನು ಅದರ ಲಾಭವನ್ನು ರಾಜ್ಯಾಂಗದ ಪ್ರಕಾರ ಪಡೆದುಕೊಳ್ಳಬೇಕು, ಆ ಪ್ರಯತ್ನದಲ್ಲಿ ಅವರು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆಂಬುದು ನನೆ ನಂಬಿಕೆ. ಅದರಲ್ಲಿ ಯಶಸ್ಸು ಸಿಗಲಿ, ಒಳ್ಳೆಯದಾಗಲಿ ಎಂಬುದು ನನ್ನ ಹಾರೈಕೆ. ರೆವ್ಯೂ ಪೆಟಿಷನ್ ಸುಪ್ರೀಂ ಕೋರ್ಟಿನಲ್ಲಿ ರಿಜೆಕ್ಟ ಆದತಕ್ಷಣ ಮರ್ಸಿ ಪೆಟಿಷನ್ ಅಧಿಕಾರ ರಾಷ್ಟ್ರಾಧ್ಯಕ್ಷರಿಂದ ಏನೂ ಕಿತ್ತುಕೊಂಡು ಹೋಗುವುದಿಲ್ಲ. ಆ ಅಧಿಕಾರಿಗೆ ಅನುಕೂಲವಾಗಬಹುದು. ಈಗ ಅವರು ಜೈಲಿಗೆ ಹೋಗಿದ್ದಾರೆ. ಆ ಶಿಕ್ಷೆ ಊರ್ಜಿತವಾಗುವುದಿಲ್ಲ. ನಾಳೆ ಮರ್ಸಿ ಗ್ರಾಂಟ್ ಆದರೆ ಅದು ಕಾನೂನು ಪ್ರಕಾರ ಹೋಗಲೇ ಬೇಕಾಗುತ್ತದೆ. ಆದಾದರೂ ರೆಕಾರ್ಡಿಗೆ ಇದ್ದರೆ ಬಹಳ ಒಳ್ಳೆಯದೆಂಬ ವಿಚಾರವನ್ನು ಅನಿವಾರ್ಯವಾಗಿ ಹೇಳತಕ್ಕ, ಆ ಒಂದು ಪರಿಸ್ಥಿತಿಯ ಘಟ್ಟವನ್ನು ನಾವು ತಲುಪಿದ್ದೇವೆ. ಇದು ಒಂದು ವಿಷಯ. ಇದರಲ್ಲಿ ಹೆಚ್ಚು ಮಾತನಾಡಿ ಇದನ್ನು ಬೆಳಸುವುದರಲ್ಲಿ ಅರ್ಥವಿಲ್ಲ. Court order is a court order.

ಒಂದು ಸಾರಿ ಆರ್ಡರ್ ಆದರೆ ಬೇರೆ ಕೇಸ್‌ನಲ್ಲಿ ಹೇಗೆ ಆರ್ಡರ್, ಹಾಗೇ ಈ ಕೇಸ್‌ನಲ್ಲೂ ಆರ್ಡರ್ ಇದೆ. ಇದಕ್ಕೆ ಸ್ಪೆಶಲ್ ಆಗಿ ಇಲ್ಲದೆ ಪ್ರಾಮುಖ್ಯತೆ ಬರುವುದಿಲ್ಲ; Judgment is a judgment whether it is in any court of law in the country. ಇಲ್ಲಿ 1993ರಲ್ಲಿ, 94ರಲ್ಲಿ, 95ರಲ್ಲಿ ಏನಾಯಿತು. ಏಕೆಂದರೆ ಹಿಂದಿನ ಫೈಲುಗಳ ವಿಚಾರ ಗೊತ್ತಿಲ್ಲ. ಅದಕ್ಕೆ ಹೇಳುವುದು ಏಕೆ ಹೀಗೆ ನಡೆಯಿತು ಏನು ಬಂತು? ಕೋರ್ಟ ನಿಂದನೆಯ ಮೊಕದ್ದಮೆಯನ್ನು ಒಂದು ವೇಳೆ ಹಾಕಿದ ಮೇಲೂ ಏತಕ್ಕೆ ಗಮನ ಕೊಡಲಿಲ್ಲ ಎಂಬುದು ನಮಗೆ ಗೊತ್ತಾಗುವುದಿಲ್ಲ. ಕೆಲವು ಸಾರಿ ಹೈಕೋರ್ಟನಲ್ಲಿ ನಡೆಯುತ್ತದೆ, ಆಧೀನ ನ್ಯಾಯಾಲಯಗಳಲ್ಲಿ ನಡೆಯುತ್ತದೆ. Apex court of the country, ಅಲ್ಲಿ ಕೂಡ ಕೆಲವು ಸಾರಿ ಬಂದಿರುತ್ತದೆ. ಹಾಗೆ ಬಂದಂಥ ಸಂದರ್ಭದಲ್ಲಿ ಇದಕ್ಕೆ ಕಾರಣ ಏನು ಎಂಬುದನ್ನು ನೋಡಿ ತಕ್ಷಣದ ಒಂದು ತೀರ್ಮಾನವನ್ನು ರಾಜ್ಯ ಸರ್ಕಾರ ಮಾಡಬೇಕಾಗಿತ್ತು ಎಂಬುದು ನನ್ನ ಅನ್ನಿಸಿಕೆ. ಈಗ ವಿವರಗಳನ್ನು ಯಾರು ಹೇಳಬೇಕು ಇದರ ಬಗ್ಗೆ? ನಿಜ, ಈ ಕಡೆ ಕುಳಿತಿರತಕ್ಕ ಮಾನ್ಯ ಸದಸ್ಯರು ವಿವರಗಳನ್ನು ತಮ್ಮ ಗಮನಕ್ಕೆ ತರುವ ರೀತಿಯಲ್ಲಿ ಇಲ್ಲ, ಏಕೆಂದರೆ ಸರ್ಕಾರದ ಫೈಲು ವಿರೋಧ ಪಕ್ಷದವರಿಗೆ ಸಿಗುವುದಿಲ್ಲ, ಆಡಳಿತ ಪಕ್ಷದವರಿಗೆ ಕೂಡ ಸಿಗುವುದಿಲ್ಲ. ಯಾರು ಸರ್ಕಾರವನ್ನು ನಡೆಸುತ್ತಾರೆ ಅವರ ಹತ್ತಿರ ಮಾತ್ರ ಇರಬೇಕಾಗುತ್ತದೆ; ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಮಾತ್ರ ಇರುತ್ತವೆ. ವಿವರಗಳು ಆ ಒಂದು ಕಡತದಲ್ಲಿ ಏನಿರೆ ಎಂಬುದು ನಮಗೆ

ಕಾರಣಕರ್ತರು ಯಾರು ಎಂಬುದು ಪ್ರಶ್ನೆ. ಒಂದು ಮಾತು, ಇಲ್ಲಿ ಮಾನ್ಯ ವಾಟಳರು ಹೇಳಬೇಕಾದರೆ ಒಂದು ಒಳ್ಳೆಯ ಮಾತನ್ನು ಆಡಿದರು. ಬೇರೆ ಮಿತ್ರರು ಕೂಡ ಹೇಳಬೇಕಾದರೆ ಹೇಳಿದರು. ಸಾಮಾನ್ಯವಾಗಿ ಒಬ್ಬ ಮನುಷ್ಯ ಅನ್ಯಾಯವಾಗಿ ತಪ್ಪನ್ನು ಎಸಗದೆ ಜೈಲಿಗೆ ಹೋದರೆ ಅದು ತಪ್ಪಾಗುತ್ತದೆ. ನಾವು ಇಷ್ಟೊಂದು ಚರ್ಚೆ ಯಾರೂ ಕೂಡ ಎಂದೂ ಕೂಡ ಮಾಡಿಲ್ಲ. ಇವತ್ತು ಅವರಿಗೆ ಆದ ಜಡ್ಜಮೆಂಟಿಗೆ ಬೆಲೆ ಇಲ್ಲವೆ? ಇದಕ್ಕೆ ಏಕೆ, ಚರ್ಚೆ ಮಾಡಬಾರದೆಂಬ ಪ್ರಶ್ನೆ ಅಲ್ಲ. ಅನ್ಯಾಯವಾಗಿದ್ದರೆ ಅಧಿಕಾರಿ ಏನು, ಸಾಮಾನ್ಯ ವ್ಯಕ್ತಿ ಏನು, ಸಾಮಾನ್ಯ ವ್ಯಕ್ತಿಗೂ ಇದನ್ನು ವಿಸ್ತಾರಗೊಳಿಸಬೇಕಾಗುತ್ತದೆ. ಅನ್ಯಾಯ ನಡೆದಾಗ, ವಿಷಯವ್ನು ನಾವು ಪ್ರಸ್ತಾಪಕ್ಕೆ ಒಳಪಡಿಸಿದಾಗ, ಇಲ್ಲಿ ಅಧಿಕಾರಿ, ಜನ ಸಾಮಾನ್ಯರು ಎಂಬ ಭಿನ್ನಭೇದ ಭಾವವನ್ನು ತೋರುವುದಕ್ಕೆ ಬರುವುದಿಲ್ಲ. ಏಕೆಂದರೆ judgment is a judgment ಎಂದು ಒಂದು ಕಡೆ ಹೇಳುತ್ತೇವೆ ನಾವು. ಇನ್ನೊಂದು ಕಡೆ, ಯಾರು ಶಿಕ್ಷೆಗೆ ಒಳಪಟ್ಟಿರುತ್ತಾರೆ ಅವವ ಬಗ್ಗೆ ಮಾತನಾಡಬೇಕಾದರೆ ಸಾಮಾನ್ಯ ಒಬ್ಬ ವ್ಯಕ್ತಿ ಮತ್ತು ಅಧಿಕಾರಿ, ಒಬ್ಬ ದೊಡ್ಡ ಮನುಷ್ಯ ಇತ್ಯಾದಿ ಮಾತನಾಡುತ್ತೇವೆ. ಬೆಳಿಗ್ಗೆ ಹೇಳಿದರು, ಶಕ್ತಿವಂತರು ಕಾನೂನು ಮುರಿದು ಬಚಾರೆ ಆಗುತ್ತಾರೆ ಎಂದು. ಅಂಥದ್ದು ಬೇಕಾದಷ್ಟು ಈ ದೇಶದಲ್ಲಿ ನಡೆದುಕೊಂಡು ಹೋಗಿದೆ. ಏಷ್ಟೋ ಸಾರಿ ಕೋರ್ಟಿನ ಗಮನಕ್ಕೆ ತಂದರೂ ಕೂಡ ಕೋರ್ಟಿನವರು ಅದನ್ನು ನೋಡದೆ ಹೋಗಿರತಕ್ಕ ಪ್ರಕರಣಗಳು ನಮ್ಮ ಗಮನಕ್ಕೆ ಬಂದಿವೆ. ಆದುದರಿಂದ ಒಂದೇ ಒಂದು ಈ ಸಂದರ್ಭದಲ್ಲಿ ಹೇಳತಕ್ಕ ಮಾತು, ಸರ್ಕಾರದ ವತಿಯಿಂದ ಕೊಡತಕ್ಕ ಹೇಳಿಕೆ ಅಥವಾ ವಿವರಣೆ ಕ್ರಾನಾಲಾಜಿಕಲ್ ಆಗಿ ಬರಬೇಕು. ಎಲ್ಲಿ ಆ ರೀತಿ ಏಕೆ ಆಯಿತು, ತಡವಾದುದಕ್ಕೆ ಏನೇನು ಕಾರಣಗಳು, ಸಂಬಂಧಪಟ್ಟವರು ಯಾರುಯಾರು ಅನ್ಯಾಯವಾಗಿ ಒಬ್ಬ ವ್ಯಕ್ತಿ ಜೈಲಿಗೆ ಹೋದರೆ ಯಾವುದೇ ಒಂದು ಕಾರಣದ ಕೈ ಅಲ್ಲಿ ಏನೋ ಕೆಲಸ ಮಾಡಿರುತ್ತದೆ, ಅಥವಾ 10-8 ಕೈಗಳು ಅಲ್ಲಿ ಕೆಲಸ ಮಾಡಿರುತ್ತವೆ. ಅವು ಯಾವುವು? ಏಕೆಂದರೆ ಕೋರ್ಟ ಜಡ್ಜಮೆಂಟ್ ಕೊಟ್ಟಿತು, ಒಬ್ಬರು ಜೈಲಿಗೆ ಹೊರಟು ಹೋದರು ಎಂದು ಕಣ್ಮುಚ್ಚಿಕೊಂಡು ಕುಳಿತುಕೊಂಡು ಅವರಿಗೆ ಜೈಲು ಶಿಕ್ಷೆ ಅನುಭವಿಸುವುದಕ್ಕೆ ಬಿಟ್ಟು, ನಾವು ಇಲ್ಲಿ ತಪ್ಪು ಮಾಡಿರತಕ್ಕವರನ್ನು ಹಾಗೇ ಬಿಟ್ಟು ಬಿಡುವುದಕ್ಕೆ ಬರುವುದಿಲ್ಲ. ಆ ಮೂಲಾಗ್ರವಾದ ತನಿಖೆಯನ್ನು ಸರ್ಕಾರ ಮಾಡಲೇಬೇಕಾಗುತ್ತದೆ. ಮಾಡಿ, ಸಂಬಂಧಪಟ್ಟಿರತಕ್ಕವರ ಮೇಲೆ ಕ್ರಮ ಹಾಕಬೇಕಾಗುತ್ತದೆ. ವಿವರಗಳು ಏನು, ನೀವು ಏನು ಕ್ರಮ ಕೈಗೊಳ್ಳುತ್ತಿದ್ದೀರಿ, ಅದಕ್ಕೆ ಸಕಾರಣಗಳು ಏನು ಸಿಗುತ್ತವೆ ಎಂಬ ಮಾತನ್ನು ಶಾಸನಸಭೆಯಲ್ಲಿ ನಿಮ್ಮ ಹೇಳಿಕೆ ಮುಖಾಂತರ ಆ ವಿವರಗಳನ್ನು ನಾವು ನಿರೀಕ್ಷೆ ಮಾಡುತ್ತೇವೆ, ಇಡೀ ಸದನ ನಿರೀಕ್ಷೆ ಮಾಡುತ್ತದೆ; ನಿಜ. ಆದರೆ ಹೇಳಿಕೆಯನ್ನು ಯಾರು ಕೊಡಬೇಕೆಂಬ ಪ್ರಶ್ನೆ. ಈ ವಿಚಾರ ಚರ್ಚೆಗೆ ಬಂದಾಗಲೂ ಕೂಡ ಕೆಲವು ಸಾರಿ joint responsibility of the Cabinet and the Government. ಆ ಪ್ರಶ್ನೆ ಬಂದಾಗ ಬೇರೆ ಸಚಿವರು ನಾವು ಉತ್ತರ ಕೊಡುತ್ತಾರೆಂಬ ಮಾತನ್ನು ನೀವು ಆಡುತ್ತೀರಿ.

ಆದರೆ ಇದಕ್ಕೆ ಮಾತ್ರ ಜನರಲ್ಲಾಗಿ ಹೇಳಬಹುದು. ಆದರೆ ವಿವರಗಳನ್ನಿಟ್ಟು ನಾನೇನಾದರೂ ಹೇಳಬೇಕು ಎಂದು ಪ್ರಯತ್ನ ಮಾಡುವಹಾಗಿದ್ದರೆ ಅದಕ್ಕೆ ಸಂಬಂಧಪಟ್ಟಿರತಕ್ಕ ಮಾನ್ಯ ಮುಖ್ಯಮಂತ್ರಿಗಳೇ ಎನ್ನತಕ್ಕಂಥ ನಿಮ್ಮ ಮಾತಿನಲ್ಲಿ ಅರ್ಥ ಇದೆ ನನ್ನ ಪ್ರಕಾರ. ಬೆಳಗ್ಗೆಯೂ ಕೂಡ ನಾನು ಹೇಳುತ್ತಾ ಇದ್ದೆ.

ಅದು ಎಲ್ಲರೂ ಕೂಡ ಒಪ್ಪುತ್ತಾರೆ ಎಂಬುದು ನನ್ನ ಭಾವನೆ. ಹೇಳಿಕೆ ಕೊಟ್ಟುಬಿಡಬಹುದು. ಹಾಗಲ್ಲ. ಆ ವಿವರಗಳನ್ನು ಕರೆಕ್ಟಾಗಿ ಕಾಲಕ್ರಮವಾಗಿ ಏನೇನು ನಡೆದಿದೆ ಅನ್ನತಕ್ಕಂಥ ವಿವರಗಳನ್ನು ಈ ಸದನದಲ್ಲಿ ಹೇಳಿದರೆ ಅದು ಬಹಳ ಉಪಯೋಗ ಅನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ಮುಖ್ಯಮಂತ್ರಿಗಳು ಯಾವಾಗ ದೆಹಲಿಯಿಂದ ಬರುತ್ತಾರೆ ಅನ್ನತಕ್ಕ ವಿಚಾರ ನಮಗಿನ್ನೂ ಗೊತ್ತಾಗಿಲ್ಲ. ಬಂದಮೇಲೆ ಮಾನ್ಯ ಮುಖ್ಯಮಂತ್ರಿಗಳೇ ಸಭಾನಾಯಕರಾಗಿ ಆ ಹೇಳಿಕೆನ್ನು ಕೊಡಲಿ. ಸರ್ಕಾರದ ಪರವಾಗಿ ಏನಿದೆ ಅನ್ನತಕ್ಕಂಥ ವಿಚಾರ ಹೇಳಲಿ. ಇವತ್ತು ಆ ರೀತಿ ತಪ್ಪು ಆಗಿರತಕ್ಕ ವಿಚಾರದಲ್ಲಿ ಯಾರುಯಾರು ಕಾರಣಕರ್ತರು ಆ ವಿವರಗಳನ್ನು ಸಂಪೂರ್ಣ ಸದನಕ್ಕೆ ತಿಳಿಸಬೇಕು ಅನ್ನತಕ್ಕಂಥದ್ದೇ ನಮ್ಮ ಒತ್ತಡ ಸರ್ಕಾರದ ಮೇಲೆ. ಇನ್ನು ಜ್ಯುಡಿಷಿಯರಿ ಬಗ್ಗೆ ಮಾನ್ಯ ನಂಜೇಗೌಡರು ಹೇಳಿದ್ದಾರೆ. ಇಲ್ಲಿ ಎರಡು ಮಾರ್ಗಗಳಿವೆ. ಒಂದು, ಇವತ್ತು ನ್ಯಾಯಾಲಯದ ಗಮನಕ್ಕೆ ಹಲವಾರು ವಿಚಾರಗಳು ತರದೇ ಏನಾದರೂ ತಪ್ಪಗಿದ್ದರೆ ಅದು ಒಂದು ರೀತಿ. ಮತ್ತೊಂದು, ನ್ಯಾಯಾಲಯದ ಗಮನಕ್ಕೆ ತಂದರೂ ಕೂಡ ಜಡ್ಜಮೆಂಟಗಳು ತಪ್ಪಾದರೆ ಅದರಂಥ ಮಹಾ ದೊಡ್ಡ ಅನ್ಯಾಯ ಇನ್ನ್ಯಾವುದೂ ಇಲ್ಲ ಅನ್ನತಕ್ಕಂಥ ಅಭಿಪ್ರಾಯವನ್ನು ನಾವು ಎಷ್ಟೋ ಸಾರಿ ಮಾತನಾಡುತ್ತೇವೆ. ಈಗ ನಾವು ಜ್ಯುಡಿಷಿಯರಿ ಬಗ್ಗೆ ಚರ್ಚೆ ಮಾಡಬಾರದು ಅನ್ನತಕ್ಕಂಥ ಮಾತನ್ನು ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾರೆ. ಇಲ್ಲಿ ಮಾತನಾಡುತ್ತೇವೆ. ಮತ್ತೊಂದು ಕಡೆ ಮಾತನಾಡುತ್ತೇವೆ. ಏಕೆಂದರೆ ಇಂಡಿಪೆಂಡೆನ್ಸಿ ಇದೆ ಜ್ಯುಡಿಷಿಯರಿಗೆ ಅನ್ನತಕ್ಕಂಥ ಮಾತನಾಡುತ್ತೇವೆ. ಹಾಗಾದರೆ ಬರೀ ಲೆಜಿಸ್ಲೇಚರಗೆ ಮಾತ್ರ ಇಂಡಿಪೆಂಡೆನ್ಸ ಎಂದು ನಾವು ಮಾತನಾಡಿ ಇನ್ನು ಉಳಿದಿದ್ದಕ್ಕೆ ಮಾತ್ರ Those departments being independent then; yes they are all part and parcel of the whole society here. ಎಗ್ಸಿಕ್ಯುಟೀವ್, ಜ್ಯುಡಿಷಿಯರಿ, ಲೆಜಿಸ್ಲೇಚರ್ ಇವೆಲ್ಲವೂ ಕೂಡ ನಮ್ಮದೇ ಕ್ರಿಯೇಷನ್ಸ. ನಾವೇ ಕ್ರಿಯೇಟ್ ಮಾಡಿಕೊಂಡಿದ್ದೇವೆ ಪ್ರಜಾಪ್ರಭುತ್ವದಲ್ಲಿ. ನಾನು ಯಾವುದೇ ವಿಚಾರವನ್ನು ಕೂಡ ಗಮನ ಇಲ್ಲದೇನೆ ಒಂದು ಮಾತನ್ನು ನಾನು ಹೇಳಬಹುದು. ಇವತ್ತು ನ್ಯಾಯಾಲಯ ಇವತ್ತು ಕೊಡತಕ್ಕ ಜಡ್ಜಮೆಂಟ್ ಇತ್ಯಾದಿ ಏನೇನಿದ್ದಾವೆ ಇವು ಜನಸಾಮಾನ್ಯರಿಗೆ ಎಷ್ಟು ಉಪಯೋಗವಾಗಿವೆ ಅನ್ನತಕ್ಕ ಪ್ರಶ್ನೆ. ವಿದ್ಯಾವಂತರಿರಬಹುದು, ಅವಿದ್ಯಾವಂತರಿಬಹುದು. ನಮಗಿರತಕ್ಕ ರಾಜ್ಯಾಂಗದ ಬಗ್ಗೆ ಕೂಡ ಎಷ್ಟೋ ಸಾರಿ ತಿದ್ದುಪಡಿಗಳಾಗಬೇಕು. ಬೆಳವಣಿಗೆ ಆಗತಕ್ಕ ಸಮಾಜ, ಅಭಿವೃದ್ಧಿಯಾಗುತ್ತಿರುವ ನಮ್ಮಂಥ ದೇಶದಲ್ಲಿ ಹಲವಾರು ವಿಚಾರಗಳಿವೆ. ಇಲ್ಲಿಟೆರೆಸಿ ಇನ್ನೂ ಕೂಡ 40 ಚಿಲ್ಲರೆ ಪರ್ಸೆಂಟೇಜ್ ಇದೆ ನಮ್ಮಂಥ ದೇಶದಲ್ಲಿ. ಇಲ್ಲಿ ಕಾನೂನನ್ನು ಬರೆದು ಎಷ್ಟು ಪುಸ್ತಕ ಇಟ್ಟರೂ ಕೂಡ ಜನಸಾಮಾನ್ಯರಿಗೆ, ಲಿಟಿಗೆಂಟ್ಸಗೆ ಆದರ ಲಾಭ ಎಷ್ಟು ದಕ್ಕಿದೆ ಎನ್ನತಕ್ಕ ಪ್ರಶ್ನೆಗೆ ಉತ್ತರ ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಕೂಡ ನಾವು ಹುಡುಕುತ್ತಲೇ ಇದ್ದೇವೆ. ಇದರಿಂದ ಜ್ಯುಡಿಷಿಯರಿ ಕೂಡ ಹೊರತಾಗಿಲ್ಲ. ಕಾರ್ಯಾಂಗ, ಶಾಸಕಾಂಗ ಯಾವರೀತಿಯಾಗಿ ನಾವು ಬದಲಾವಣೆ ಮಾಡುತ್ತಾ ಮಾಡುತ್ತಾ ಮಾಡುತ್ತಾ ಹೋಗುತ್ತೇವೆ ಅದೇ ರೀತಿ ನ್ಯಾಯಾಂಗವೂ ಕೂಡ ಬದಲಾವಣೆಗೆ ಒಳಪಡದೇ ಇದ್ದರೆ ನ್ಯಾಯವನ್ನು ಜನಸಾಮಾನ್ಯರಿಗೆ ಒದಗಿಸುವುದಕ್ಕೆ ಒಬ್ಬರಿಗೂ ಕೂಡ ಸಾಧ್ಯವಿಲ್ಲ. ಇದು ಜನರಲ್ಲಾಗಿ; ಇದೊಂದು ಜಡ್ಜಮೆಂಟಗೋಸ್ಕರವಾಗಿ ನಾನು ಈ ಮಾತನ್ನು ಆಡುತ್ತಿಲ್ಲ. I do respect the judgment

delivered by any Court of law in our country. ಅದಕ್ಕೆ ಗೌರವವಿದೆ. ಆದರೆ ಈಗಿರತಕ್ಕಂಥ ಈ ಕಾನೂನು ಈ ವಿಚಾರದ ವ್ಯಾಪ್ತಿಯಲ್ಲಿ ನ್ಯಾಯ ನಮಗೆ ದಕ್ಕಿದೆಯೇ ಅಥವಾ ಸಿಕ್ಕಿದೆಯೇ ಎಂಬ ಪ್ರಶ್ನೆಗೆ ಉತ್ತರ ನಾವು ಇನ್ನೂ ಹುಡುಕತಕ್ಕ ಕಾಲ ಅನ್ನತಕ್ಕಂಥ ಭಾವನೆಯನ್ನು ಮಾತ್ರ ಈ ಸಂದರ್ಭದಲ್ಲಿ ನಾನು ವ್ಯಕ್ತಪಡಿಸಬಲ್ಲೆ. ಮಾನ್ಯ ನಂಜೇಗೌಡರು ಹೇಳಿರತಕ್ಕ ವಿಚಾರ ಮತ್ತು ಬೇರೆಬೇರೆಯವರು ಧ್ವನಿಗೂಡಿಸಿರತಕ್ಕ ವಿಚಾರ, ಸದನದ ಎಲ್ಲಾ ಮೂಲೆಯಲ್ಲೂ ಕೂಡ ಅಭಿಪ್ರಾಯ ಇದು ಅಭಿವ್ಯಕ್ತವಾಗುತ್ತಾ ಇದೆ. ಏಕೆಂದರೆ ಈಗಿರುವ ಕಾನೂನೇ ಸರ್ವಶ್ರೇಷ್ಠ ಎನ್ನತಕ್ಕಂಥ ಮಾತನ್ನು ಆಡಿದರೆ ಹಾಗಾದರೆ ಆಡಳಿತ ಹೋಗತಕ್ಕದ್ದರಲ್ಲಿ, ಏಕೆಂದರೆ ಯಾವುದೇ ಪಕ್ಷ ಇವತ್ತು ಅಧಿಕಾರಕ್ಕೆ ಬಂದರೂ ಕೂಡ ಕಾನೂನನ್ನು ಬದಲಾವಣೆ ಮಾಡದೇ ಬರುವಹಾಗಿಲ್ಲ ಕೆಲವಲ್ಲಿ. ಪ್ರಾಕ್ಟಿಕಲ್ ಡಿಫಿಕಲ್ಟೀಸ್ ಇದೆ ಅದರಲ್ಲಿ. ಇವತ್ತು ನೀವು ಮಾಡುವುದಕ್ಕೆ ಹೋದರೆ ರಾಜ್ಯಾಂಗ ಅಡ್ಡ ಬರುತ್ತದೆ ಎಂಬ ಪ್ರಶ್ನೆ. ಇವತ್ತು ರಾಜ್ಯಾಂಗ ಬದಲಾವಣೆ ಆಗದೇ ಇದ್ದರೆ ಕಾನೂನನ್ನು ಕೂಡ ನೀವು ಬದಲಾವಣೆ ಮಾಡಿಕೊಳ್ಳುವುದಕ್ಕೆ ಬರುವುದಿಲ್ಲ. ಈ ದೃಷ್ಟಿಯಿಂದ ಇದು ಅಕಾಡೆಮಿಕ್ ಇಂಟರೆಸ್ಟನಿಂದ ಜ್ಯುಡಿಷಿಯರಿ ಬಗ್ಗೆ ಒಂದು ಚರ್ಚೆ ರಾಷ್ಟ್ರದಲ್ಲಿ ಪಾರ್ಲಿಮೆಂಟ್ ಶಾಸನಸಭೆಗಳಲ್ಲಿಯೂ ಕೂಡ ಆಗತಕ್ಕದ್ದು ಅದು ಚರ್ಚೆ ಅಥವಾ ಚರ್ವಣಕ್ಕೆ ಒಳಪಡುವಂಥ ವಿಚಾರ ಇವತ್ತು ಅಗತ್ಯವಾಗಿದೆ. ಇದಿಷ್ಟೇ ಅಲ್ಲ. ಹಿಂದೆ ಕೇಂದ್ರದಲ್ಲಿರತಕ್ಕ ಸಚಿವರೇ ಸುಪ್ರೀಂ ಕೋರ್ಟ ಮೇಲೆ ಹೇಳಿಕೆ ಕೊಟ್ಟರು. ಇ.ಎಂ.ಎಸ್. ನಂಬೂದಿರಿಪಾದ್, ಕೃಷ್ಣ ಮೆನನ್ ಕೂಡ ಹೇಳಿದ್ದರು. ಇ.ಎಂ.ಎಸ್. ನಂಬೂದರಿಪಾದ್ ಎಂದು ಕಾಣುತ್ತದೆ ಅವರೂ ಕೂಡ ಹೇಳಿದ್ದರು ನ್ಯಾಯಲಯದ ಬಗ್ಗೆ, ಜ್ಯುಡಿಷಿಯರಿ ಸಿಸ್ಟಂ ಬಗ್ಗೆ. ಅವರ ಮೇಲೂ ಕೂಡ ಕೇಸ್ ಹಾಕಿದ್ದರು. ಅವರು They did not bothered about these matters at all. Yes. ಬೆಳೆಯತಕ್ಕ ಸಮಾಜದಲ್ಲಿ ಬದಲಾವಣೆ ಅವಶ್ಯಕ, ಈಗಿರತಕ್ಕ ಜ್ಯುಡಿಷಿಯರಿ ಸಿಸ್ಟಂ ಇದು ಒಳ್ಳೆಯದಲ್ಲಿ ಅನ್ನತಕ್ಕ ದೃಷ್ಟಿಯಿಂದ ಬದಲಾವಣೆಗೆ ಇದೂ ಒಳಪಡಬೇಕು ಎನ್ನತಕ್ಕ ಅಭಿಪ್ರಾಯ ಹೇಳಿರುವುದು ನೀಜ. ಈ ಒಂದು ದೃಷ್ಟಿಕೋನದಲ್ಲಿ ಮಾನ್ಯ ನಂಜೇಗೌಡರು ಪ್ರಸ್ತಾಪ ಮಾಡಿರುವ ವಿಚಾರಕ್ಕೆ ಸದಾ ನನ್ನ ಬೆಂಬಲ ಇದೆ. ಅಂದರೆ ಈ ವಿಚಾರ ಚರ್ಚೆಗೆ ಒಳಪಡಬೇಕು. ಸದನದ ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಮಾನ್ಯಸದಸ್ಯರುಗಳು ಎಲ್ಲರೂ ಸೇರಿ ಇದರ ಮೇಲೆ ಬೆಳಕನ್ನು ಚೆಲ್ಲಿದರೆ ಮುಂದೆ ಕಾನೂನು ಮಾಡತಕ್ಕಂಥವರು ನ್ಯಾಯಾಲಯವನ್ನು ಒಳಗೊಂಡಂತೆ ಅದರ ಬಗ್ಗೆ ಗಮನ ಇರಬೇಕು. ಕಾನೂನು ಯಾವ ರೀತಿ ಬರಬೇಕು ಎನ್ನತಕ್ಕಂಥದ್ದು. And more over, in the administration of either civil jurisprudence or criminal jurisprudence. ನಾವು ಯಾವ ರೀತಿ ಹೋಗಬೇಕಾಗುತ್ತದೆ ಎಂಬ ವಿಚಾರವನ್ನು ಗಮನದಲ್ಲಿಟ್ಟು ಹೊಗಬೇಕಾಗುತ್ತದೆ. ಒಂದು ಭಾವನೆ ನಾಳೆ ಬಂದುಬಿಟ್ಟೀತು. ಏನೆಂದರೆ ನಾವು ಒಂದು ಸಾರಿ ಕೊಟ್ಟಮೇಲೆ ನೀವು ಜಾರಿಗೆ ಕೊಡುವುದು ಅಷ್ಟೇ ಕೆಲಸ ಅನ್ನತಕ್ಕಂಥ ಭಾವನೆಗೆ ಅವರು ಬರುವುದು, ಅಥವಾ ಇನ್ನೆಲ್ಲೋ ಹಾಗೆಲ್ಲಾ ಬರುವಹಾಗಿಲ್ಲ ಎಂಬ ತಾಕಲಾಟ ಅದರ ಮಧ್ಯೆ ನಮ್ಮ ಮಧ್ಯೆ ಬರಬಾರದು. ಏಕೆಂದರೆ ನಾವೆಲ್ಲಾ ಅಂಗಗಳಾಗಿದ್ದೇವೆ. ಅದರೆ ಬದಲಾವಣೆ ಆಗದೇ ಈ ತಾಕಲಾಟ ತಪ್ಪಿದ್ದಲ್ಲ ಎನ್ನತಕ್ಕದ್ದು. ಇವತ್ತು ತಮಗೆ ಗೊತ್ತಿದೆ, ನ್ಯಾಯಾಂಗ ಮತ್ತು ಶಾಸಕಾಂಗದ ಮಧ್ಯೆಯೂ ವ್ಯತ್ಯಾಸಗಳು ಬಂದಿವೆ. ಉತ್ತರ

